MR. SPEAKER :— I have no comments on the Upper House. Please hear me. ಶೂನ್ಯವೇಳೆಯಲ್ಲಿ ಒಂದೆರಡು ಮುಖ್ಯವಾದ ವಿಷಯಗಳಿದ್ದರೆ ಅದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು :— ಪಿ.ಹೆಚ್. ಪೂಜಾರ್ ಮತ್ತು ಜಯಪ್ರಕಾಶ್ ಹೆಗ್ಡೆಯವರೇ, ನೀವು ನಾಳೆ ವಿಷಯವನ್ನು ರೈಸ್ ಮಾಡಿ, ನೋಡೋಣ.

4. ವಿತ್ತೀಯ ಕಾರ್ಯಕಲಾಪ

2001-2002 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :— ನಿನ್ನೆ ನಾನು ಮಾತನಾಡಲು ಪ್ರಾರಂಭಿಸಿದಾಗ ಸರ್ಕಾರ ಬರ ಪರಿಹಾರಕ್ಕಾಗಿ ಕೆಲವು ಒಳ್ಳೆಯ ಘೋಷಣೆಗಳನ್ನು ಮಾಡುವುದರ ಜೊತೆಗೆ, ಕೋಆಪರೇಟಿವ್ ಲೋನ್‌ಗೆ ಒನ್ ಟೈಂ ಸೆಟ್ಲ್‌ಮೆಂಟ್ ಅನ್ನು ಆಗಸ್ಟ್ 14ನೇ ತಾರೀಖಿನವರೆಗೆ ಎಕ್ಸ್‌ಟೆಂಟ್ ಮಾಡಿದ್ದೇವೆಂದು ತಿಳಿಸಿತು. ನಾನು ನಿನ್ನೆ ಪ್ರಸ್ತಾಪಿಸಿ ಹೇಳಿದೆ, ಇದರ ವಿಷಯದಲ್ಲಿ ಇವತ್ತು,

``Guidelines for one-time settlement (OTS) of chronic NPAs, overdues in the long-term co-operative credit structure."

"The Scheme will remain operative upto 31st March, 2002." ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲವೆಂಬ ರೀತಿ ಹೇಳಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ :— ಅದು ನಮಗೆ ಗೊತ್ತಿದೆ. ನೀವು ಹೇಳುವುದನ್ನೆಲ್ಲಾ ಕೇಳುತ್ತೇವೆ. ಅದರ ಬಗ್ಗೆ 27ನೇ ತಾರೀಖು ಮಾತನಾಡೋಣ. ಅಲ್ಲಿಯವರೆಗೆ ನಿಮಗೆ ಕೈಮುಗಿಯುತ್ತೇನೆ, ಸುಮ್ಮನಿರಿ. ರಿಕವರಿ ಚೆನ್ನಾಗಿ ಆಗುತ್ತಿದೆ. 28ನೇ ತಾರೀಖು ತಮ್ಮ ರಿಕ್ವೆಸ್ಟ್‌ಗೆ ನಾನು ಯೀಲ್ಡ್ ಆಗುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ನೀವು ತಪ್ಪು ತಿಳಿದುಕೊಂಡಿದ್ದೀರಿ. ನಾನು ಕಳುಹಿಸಿದ್ದು, ಕೋ ಆಪರೇಟೀವ್ ಲೋನ್ ಬಗ್ಗೆಯಲ್ಲ. ನೀವು ಪವರ್ ಕಟ್ ಬಗ್ಗೆ ಕೇಳಿದ್ದಿರಿ. ಕೀಬಿಗೆ ಒನ್ ಟೈಂ ಸೆಟ್ಲ್‌ಮೆಂಟ್ ಬಗ್ಗೆ ಕೇಳಿದ್ದಿರಿ. ನೀವು ಅದರಲ್ಲಿ ಬರೆದಿರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ವಸೂಲಿ ಚೆನ್ನಾಗಿ ಆಗುವುದಾದರೆ ಅದರ ಬಗ್ಗೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ. ನಮ್ಮ ಕಡೆ ವ್ಯವಸಾಯಕ್ಕೆ ಆರಂಭವೆಂದು

ಹೇಳುತ್ತಾರೆ. ಕೃಷಿ ಕೆಲಸ ಮಾಡುವುದಕ್ಕೆ ಶುರು ಮಾಡಿದರೆ ಅದು ಯಾವತ್ತೂ ಆರಂಭವೇ, ಅದಕ್ಕೆ ಕೊನೆ ಇಲ್ಲ. 365 ದಿನಗಳಲ್ಲೂ ಸಹ ಅದು ಆರಂಭವೇ ಆಗಿರುತ್ತದೆ. ವ್ಯವಸಾಯ ನಮ್ಮ ವ್ಯವಹಾರ ಸತ್ತೇ ಹೋಗುತ್ತದೆ. ಇದು ಯಾವತ್ತೂ ವ್ಯವಸಾಯದಲ್ಲಿರುವಂಥ ಅರ್ಥ. ಇವತ್ತು ರೈತ ಜಮೀನನ್ನು ಹದಗೊಳಿಸಲು ಮನಸ್ಸು ಮಾಡಬೇಕಾದರೆ ಅವನಿಗೆ ಮೊದಲು ನಾನು ಬೆಳೆ ಬೆಳೆಯಬೇಕು, ಸಂಸಾರ ಚೆನ್ನಾಗಿಟ್ಟುಕೊಳ್ಳಬೇಕೆಂಬ ಭಾವನೆ ಇರುತ್ತಿತ್ತು. ಆದರೆ, ಇತ್ತೀಚೆಗೆ ನಾನು ಬೆಳೆ ಬೆಳೆದರೆ ಅದಕ್ಕೆ ರೇಟ್ ಸಿಗುತ್ತದೆಯೋ, ಇಲ್ಲವೋ? ಸರ್ಕಾರ ಮಧ್ಯ ಪ್ರವೇಶ ಮಾಡುತ್ತದೆಯೋ? ಇಲ್ಲವೋ? ದಲ್ಲಾಳಿಗಳು ಎಷ್ಟು ಕಮೀಷನ್ ತೆಗೆದುಕೊಳ್ಳುತ್ತಾರೆಯೋ? ಈ ತರಹದ ಭಾವನೆ ರೈತನ ಮನಸ್ಸಿನಲ್ಲಿ ಬಹಳಷ್ಟು ಬರುವ ಪರಿಸ್ಥಿತಿ ಬಂದಿದೆ. ಪರಿಶ್ರಮಕ್ಕೆ ತಕ್ಕಂತೆ

(ಈ ಹಂತದಲ್ಲಿ ಶ್ರೀ ಬಿ.ಆರ್. ಯಾವಗಲ್ ರವರು ಪೀಠವನ್ನಲಂಕರಿಸಿದರು)

ಬೆಲೆ ಸಿಗುವ ಪರಿಸ್ಥಿತಿ ಇಲ್ಲ. ಇದನ್ನು ನಾವು ಗಮನಿಸಬೇಕಾಗುತ್ತದೆ. ಕೃಷಿ ಆಧಾರಿತ ಬೆಳೆಗಳು ಇವತ್ತೇನು ಕಷ್ಟದಲ್ಲಿವೆ ಎನ್ನುವುದನ್ನು ಕೂಡ ಸರ್ಕಾರ ಗಮನಿಸಬೇಕಾಗುತ್ತದೆ. ಬಸವಣ್ಣನವರು, 'ಕಾಯಕವೇ ಕೈಲಾಸ' ಎಂದಿದ್ದರು. ಇಂದು ಈ ಪರಿಸ್ಥಿತಿಯಲ್ಲಿ ರೈತನನ್ನು ನೋಡಿದ್ದರೆ ಅವರು ಆ ಮಾತನ್ನು ಹೇಳುತ್ತಿದ್ದರೋ, ಇಲ್ಲವೋ ಎಂಬ ಭಾವನೆ ಬರುತ್ತದೆ. ಇಂದು ಸಣ್ಣ, ಅತಿ ಸಣ್ಣ ರೈತರನ್ನು ನೋಡಿದಾಗ, ಇವರ ಪರಿಸ್ಥಿತಿ ಏನು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವ್ಯವಸಾಯ ಇಲಾಖೆ ದೊಡ್ಡ ಬಿಳಿ ಆನೆ ಇದ್ದ ಹಾಗಿದೆ. ಇಂದು ಎಷ್ಟು ಅಧಿಕಾರಿಗಳಿದ್ದಾರೆ, ಏನು ಕೆಲಸ ಮಾಡುತ್ತಿದ್ದಾರೆಂಬ ಮಾಹಿತಿ ಕೇಳಿದರೆ, ಆ ಮಾಹಿತಿ ಅಷ್ಟಷ್ಟೇ ಮಟ್ಟಕ್ಕಿರುತ್ತದೆ. ಆ ಇಲಾಖೆಯಿಂದ ಇಂದು ರೈತನಿಗೇನಾದರೂ ಉಪಯೋಗವಾಗುತ್ತಿದೆಯೇ ಎನ್ನುವುದರ ಬಗ್ಗೆ ಯೋಚನೆ, ಚಿಂತನೆ ಮಾಡಿದರೆ, ಅದು ದೊಡ್ಡ ಸೊನ್ನೆಯಾಗುತ್ತದೆ. ವ್ಯವಸಾಯ ಇಲಾಖಾಧಿಕಾರಿಗಳು ಹಳ್ಳಿಗಳಿಗೆ ಹೋಗಿ ವ್ಯವಸಾಯ ಮಾಡುವುದನ್ನು ಬಿಟ್ಟಿದ್ದಾರೆ. ಅವರು ಪಟ್ಟಣಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಹೊರಡಿಸಿದ್ದಾರೆ. ಅವರು ಹಳ್ಳಿಗಳಲ್ಲಿರುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಅವರು ಯೀಲ್ಡಾಗಿರುವುದರಿಂದ, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಮಹತ್ವದ ವಿಚಾರವನ್ನು ನಾನು ಈ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಒಂದು ವಾರ ಬರಗಾಲದ ಮೇಲೆ ಚರ್ಚೆ ಮಾಡಿದೆವು. ಆಗ ನಾವು ಹೇಳಿರುವಂಥ ಕೆಲವು ಬೇಡಿಕೆಗಳನ್ನು ಈಡೇರಿಸುತ್ತೇವೆಂದರು. ಇವತ್ತು ಇಡೀ ಉತ್ತರ ಕರ್ನಾಟಕದಲ್ಲಿ ದನಗಳ ಮೇವನ್ನು ಮಹಾರಾಷ್ಟ್ರದವರು ಬಂದು ಒಂದು ದಿನಕ್ಕೆ ಗುಲ್ಬರ್ಗಾ ಒಂದರಿಂದಲೇ ನೂರು ಲಾರಿ ಮೇವು ತೆಗೆದುಕೊಂಡು ಹೋಗುತ್ತಿದ್ದಾರೆಂದು 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ವಿಜಾಪುರ,

ಬೆಳಗಾಂನಿಂದ ಮೇವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ, ಸರ್ಕಾರವೇನು ಕಣ್ಣುಮುಚ್ಚಿ ಕುಳಿತಿದೆಯೇ? ಸರ್ಕಾರ ಬದುಕಿದೆಯೇ? ಚೀಫ್ ಸೆಕ್ರೆಟರಿ, ಅಡಿಷನಲ್ ಚೀಫ್ ಸೆಕ್ರೆಟರಿಗಳು ಪ್ರತಿದಿನ ಸೇರುತ್ತಾರೆಂದು ಹೇಳಿ ಎಷ್ಟು ದಿವಸಗಳಾಯಿತು? ಮೀಟ್ ಮಾಡಿದ್ದಾರೆಯೇ? ಡಿಸಿಗಳಿಗೆ ಇನ್ಸ್‌ಟ್ರಕ್ಷನ್ ಕೊಟ್ಟಿದೆಯೇ? ಕೊಡಲು ನಿಮಗೇನು ತೊಂದರೆ? Why don't you stop it? ಮಳೆಯಾಗುವುದಿಲ್ಲವೆಂದು ಗೊತ್ತಾಯಿತು. ಹಿಂಗಾರು, ಮುಂಗಾರು ಮಳೆ ಹೊರಟುಹೋಯಿತು, ಬೆಳೆಯಾಗಲಿಲ್ಲ. ಅವರು ಇರುವುದನ್ನೂ ದೋಚಿಕೊಂಡು ಹೋದರೆ ಹೇಗೆ? 1985ರಲ್ಲಿಯೂ ಹೀಗೇ ಆಗಿತ್ತು. ಡಿಸಿಗಳು, ಆಡಳಿತ ಯಂತ್ರ ಸತ್ತು ಹೋಗಿದೆಯೇ? ಅದೇ ರೀತಿ, ನಮಗೆ ಬಂದಿರುವ ಮಾಹಿತಿ ಪ್ರಕಾರ, ಈ ಸಾರಿ ಕಬ್ಬಿಗೆ ರಾಜ್ಯದಲ್ಲಿ ಬರ ಬರುತ್ತದೆ. ಮಹಾರಾಷ್ಟ್ರದವರು ಈಗಾಗಲೇ ಕಛೇರಿಗಳನ್ನು ಓಪನ್ ಮಾಡುತ್ತಿದ್ದಾರೆ. ಕಬ್ಬನ್ನು ತೆಗೆದುಕೊಳ್ಳಲು ಅಡ್ವಾನ್ಸಾಗಿ ನಮ್ಮ ರೈತರಿಗೆ ಹಣ ಕೊಟ್ಟು ತೆಗೆದುಕೊಂಡು ಹೋಗುತ್ತಾರೆ. ನಮ್ಮ ಸಕ್ಕರೆ ಕಾರ್ಖಾನೆಗಳು ಅರೆಯಲು ಕಬ್ಬು ಸಿಗುವುದಿಲ್ಲ. ಈಗಾಗಲೇ ಬಾಗಲಕೋಟೆ, ಜಮಖಂಡಿ, ಬೆಳಗಾಂ, ಬೀದರ್‌ಗಳಲ್ಲಿ ಕಛೇರಿಗಳನ್ನು ಓಪನ್ ಮಾಡಿದ್ದಾರೆ. ಇಷ್ಟೆಲ್ಲಾ ನಾವು ಮಾತನಾಡಿದ ಮೇಲೂ, ನಿಮಗೆ ಹೇಳಿದ ಮೇಲೂ ಕಂದಾಯ ಮಂತ್ರಿಗಳಾಗಲಿ, ಸಕ್ಕರೆ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ಜಿಲ್ಲಾಧಿಕಾರಿಗಳಿಗೆ ಆದೇಶಕೊಟ್ಟು ಮಹಾರಾಷ್ಟ್ರದವರೇನು ಕಬ್ಬನ್ನು ಕೊಳ್ಳಲು ನಮ್ಮ ರೈತರಿಗೆ ತಿಳಿಸಲು, ವ್ಯಾಪಾರ ಮಾಡಲು ಹೊರಟಿದ್ದಾರೆ, ಅದನ್ನು ತತ್‌ಕ್ಷಣವೇ ನಿಲ್ಲಿಸಲು ಕ್ರಮ ತೆಗೆದುಕೊಳ್ಳಬೇಕು. ಹುಲ್ಲನ್ನು ಬೇರೆ ರಾಜ್ಯಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ನಿಲ್ಲಿಸಲು ಕಟ್ಟಾಜ್ಞೆಯನ್ನು ಇವತ್ತೇ ಹೊರಡಿಸಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ನಾವು ಮೊನ್ನೆ ಸದನದಲ್ಲಿ ಕೊಟ್ಟಿರುವ 15 ಅಂಶಗಳ ಕಾರ್ಯಕ್ರಮದಲ್ಲಿ ಬಹಳ ಮುಖ್ಯವಾದುದಲ್ಲಿ ಪಿಜಿಆರ್ ಸಿಂಧ್ಯರವರು ಪ್ರಸ್ತಾಪ ಮಾಡಿರುವ ಆ ವಿಷಯವೂ ಒಂದು. ಆದರೆ, ಅದು ಹಾಗೆಯೇ ಹೋಗುತ್ತಿದೆ, ಆದುದರಿಂದ ಅದನ್ನು ರಿಸ್ಟ್ರಿಕ್ಟ್ ಮಾಡುವ, ಬ್ಯಾನ್ ಮಾಡುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನೀವು ಕನ್ನಡಪ್ರಭಾ ದಿನಪತ್ರಿಕೆ ಓದಿ, ಅವರು ಫೋಟೋ ಸಮೇತ ವರದಿ ಮಾಡಿದ್ದಾರೆ. ಇದು ವಾರದ ಹಿಂದೆ ನಡೆದ ಚರ್ಚೆಯಲ್ಲ. ಸದನದಲ್ಲಿ ಚರ್ಚೆಯಾಗುತ್ತಿದೆ, ಭರವಸೆಗಳ ಮಹಾಪೂರವನ್ನೇ ಕೊಟ್ಟಿದ್ದೀರಿ. ಅಲ್ಲಿ ಈ ರೀತಿ ಹೋಗುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಬೇರೆ ಕಡೆ ಹೋಗುತ್ತಿದೆ ಎಂದು ಈಗ ತಾನೆ ನಮ್ಮ ಗಮನಕ್ಕೆ ತಂದಿದ್ದೀರಿ, ತತ್‌ಕ್ಷಣವೇ ಸಂಬಂಧಪಟ್ಟವರನ್ನು ಕಾಂಟ್ಯಾಕ್ಟ್ ಮಾಡಿ,

ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಕಬ್ಬಿನ ವಿಚಾರದಲ್ಲಿ, ಆ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇಲ್ಲ. ಮಾಹಿತಿ ಪಡೆದು ಉತ್ತಮವಾದ ಸಲಹೆ ಇದೆಂದು ಸರ್ಕಾರದ ಗಮನಕ್ಕೆ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :— ಮೊದಲು ಗ್ರಾಮ ಸೇವಕರು ಇದ್ದರು, ಅವರನ್ನು ತೆಗೆದರು. ಹೋಬಳಿ ಮಟ್ಟದಲ್ಲಿ ಕೂಡ ಒಬ್ಬ ಅಧಿಕಾರಿಯೂ ಇರುವುದಿಲ್ಲ. ಈ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಜನರು ವ್ಯವಸಾಯ ಮಾಡುತ್ತಿದ್ದಾರೆ. ಇದರ ಹಿನ್ನೆಲೆಯಲ್ಲಿ ಇಂದು ವ್ಯವಸಾಯಕ್ಕೆ ತಂತ್ರಜ್ಞಾನ ಬಹಳ ಮುಖ್ಯ. ಇಂದು ತಂತ್ರಜ್ಞಾನ ಕೊಡುವುದಿರಲಿ, ಅವರು ಹಳ್ಳಿಗಳ ಕಡೆ ಹೋಗುವ ಸ್ಥಿತಿಯಲ್ಲಿಲ್ಲದಿರುವುದರಿಂದ ವ್ಯವಸಾಯ ಇಲಾಖೆಯ ಎಲ್ಲಾ ಅಧಿಕಾರಿಗಳು ಕೂಡ ಅದಕ್ಕೆ ಆದ್ಯತೆ ಕೊಡಲೇಬೇಕು. ಸಾಯಿಲ್ ಕನ್‌ಸರ್ವೇಷನ್ ಡಿಪಾರ್ಟ್‌ಮೆಂಟ್‌ಗಾದರೆ ಬೇಗನೆ ಹೋಗುತ್ತಾರೆ. ವ್ಯವಸಾಯಕ್ಕೇನಾದರೂ ತೆಂಗಿನ ನುಸಿ ಬಂದಿದೆ, ಕಾಯಿಲೆ ಬಂದಿದೆ ಕೇಳಬೇಕೆಂದರೆ, ಅವರಿಗೆ ಆಸೆ, ಆಕಾಂಕ್ಷೆ ಇಲ್ಲ. ಇಂದು ವ್ಯವಸಾಯ ಇಲಾಖೆಯಲ್ಲಿ ಮಾಡಬೇಕಾದ ಕರ್ತವ್ಯ ಇದೆಂದು ನಾನು ಹೇಳಬಯಸುತ್ತೇನೆ. ಆಧುನಿಕ ವ್ಯವಸಾಯದ ಬಗ್ಗೆ ಹೇಳುವುದಾದರೆ, ಪಂಜಾಬ್‌ನಲ್ಲಿ ಗೋವಿಂದ ಎಂಬ ಭತ್ತದ ತಳಿ ಇದ್ದು, ಅದರಿಂದ ಒಂದು ಎಕರೆಗೆ 90 ಕ್ವಿಂಟಾಲ್ ಭತ್ತ ಬೆಳೆಯುತ್ತಾರೆ. ನಮ್ಮ ರಾಜ್ಯದಲ್ಲಿ ವಿಜ್ಞಾನಿಗಳಿಲ್ಲವೇ? ವೈಜ್ಞಾನಿಕವಾಗಿ ಪ್ರಯೋಗವಾಗುವುದಿಲ್ಲವೆ? ಆ ತಳಿಯನ್ನು ಇಲ್ಲೇಕೆ ಮಾಡಲಿಲ್ಲ? ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ವೈಜ್ಞಾನಿಕವಾಗಿ ಇದನ್ನು ನಾವು ಅಳವಡಿಸಿಕೊಳ್ಳುವ ಬಗ್ಗೆ ಯೋಚಿಸಬೇಕು. ಹೋದವರ್ಷ ಮೇಜ್ ಬಹಳ ಉತ್ಕೃಷ್ಟವಾಗಿ ಬೆಳೆದು, ರಾಜ್ಯದಲ್ಲಿ ದೊಡ್ಡ ಗಲಾಟೆಯಾಯಿತು. ಅದಕ್ಕೆ ಸರ್ಕಾರ 5 ಕೋಟಿ ರೂ. ಬಿಡುಗಡೆ ಮಾಡಿತು. ಇಲ್ಲಿ ಸರ್ಕಾರ ಮತ್ತು ನಾವು ಚಿಂತಿಸಬೇಕಾದುದು ಇಷ್ಟೆ. ಇಂದು ರಾಜ್ಯದಲ್ಲಿ ಜೋಳ, ಯಾವುದೇ ಒಂದು ಆಹಾರ ಧಾನ್ಯ ಒಂದು ಲಕ್ಷ ಟನ್ ಸಾಕೆಂಬ ಭಾವನೆ ಇದೆ. 1 ಲಕ್ಷ 10 ಸಾವಿರ ಟನ್ ಜಾಸ್ತಿ ಬೆಳೆದರೆ, 90 ಪರ್ಸೆಂಟ್‌ಗೆ ಏಟು ಬೀಳುತ್ತದೆ. 10 ಸಾವಿರ ಟನ್ ಅನ್ನು ಮ್ಯಾನೇಜ್‌ಮೆಂಟ್ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. ಒಂದು ಲಕ್ಷ ಟನ್ ಬೆಳೆಯುವಂಥ ರಾಜ್ಯದಲ್ಲಿ 10 ಸಾವಿರ ಟನ್ ಜಾಸ್ತಿ ಬೆಳೆದರೆ ಅದು ಒಂದು ಲಕ್ಷ ಟನ್ ಅನ್ನು ಹೊಡೆಯುತ್ತದೆ. ಇದಕ್ಕೆ ನೂರಕ್ಕೆ ನೂರು ಭಾಗ ತೊಂದರೆ ಕೊಡುತ್ತದೆ. ಆ ಬಗ್ಗೆ ನಾವು ಎಲ್ಲಾ ಆಹಾರ ಪದಾರ್ಥಗಳಲ್ಲಿಯೂ ಕೂಡ ಚಿಂತನೆ ಮಾಡಬೇಕಾಗಿರುತ್ತದೆ. ಮುಖ್ಯಮಂತ್ರಿಗಳು ಸ್ತ್ರೀ ಶಕ್ತಿ ಎನ್ನುವ ಒಳ್ಳೆಯ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇಂದು ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಹಾಲು ಸಹಕಾರ ಸಂಘಗಳಿವೆ. ಹಸುಗಳಿಗೆ ಬೂಸ ಕೊಡುವುದರಿಂದ, ಕುಡ್ತಿ ಇಡುವುದರಿಂದ, ಹಸಿ ಹುಲ್ಲು ತೆಗೆದುಕೊಂಡು ಬರುವುದರಿಂದ, ಕೆಚ್ಚಲು ತೊಳೆದು ಹಾಲು ಹಿಂಡುವುದರಿಂದ, ಆ ಹಾಲನ್ನು ಸಹಕಾರ

ಸಂಘಗಳಿಗೆ ತೆಗೆದುಕೊಂಡು ಹೋಗುವವರೆಗೂ ಒಬ್ಬ ಸ್ತ್ರೀ ಕೆಲಸ ಮಾಡುತ್ತಾಳೆ. ಆದರೆ, 15 ದಿವಸಗಳ ಬಟವಾಡೆ ಬಂದಾಗ, ಗಂಡಸು ಹೋಗಿ ಆ ಹಣವನ್ನು ತೆಗೆದುಕೊಳ್ಳುತ್ತಾನೆ. ಈವತ್ತು ಈ ಸ್ತ್ರೀ ಶಕ್ತಿಯನ್ನು ಬೆಳೆಸಬೇಕಾದರೆ ಹಳ್ಳಿ ಮಟ್ಟದಲ್ಲಿ, ಬಡವರ ಮಟ್ಟದಲ್ಲಿ ಇದೊಂದು ಒಳ್ಳೆಯ ಕಾರ್ಯಕ್ರಮ. ಆ ಹಣವನ್ನು ಕಡ್ಡಾಯವಾಗಿ ಹೆಣ್ಣುಮಕ್ಕಳು ತೆಗೆದುಕೊಳ್ಳುವ ಹಾಗೆ ಮಾಡಲು ಸರ್ಕಾರ ಚಿಂತನೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷ ಪೀಠದಿಂದ ನಿನ್ನೆ ಒಂದು ಆದೇಶ ಬಂದಿದೆ. ಬೇಡಿಕೆಗಳನ್ನು ಯಾರು ಮಂಡಿಸಿದ್ದಾರೆ, ಆದಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳು ಕನಿಷ್ಠಪಕ್ಷ ಇದರ ಬಗ್ಗೆ ಚರ್ಚೆಯಾಗುವ ಸನ್ನಿವೇಶದಲ್ಲಿ ವಿರೋಧ ಪಕ್ಷದವರು ಕೊಡುವ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೇನಾದರೂ ತೊಂದರೆಯಾಗಿದೆಯೇ? ನಾವು 22 ಬೇಡಿಕೆಗಳನ್ನು ಮಂಡಿಸಿದ್ದೇವೆ. ಬೇಡಿಕೆಗಳಿಗೆ ಸಂಬಂಧಿಸಿಲ್ಲದ ಮಂತ್ರಿಗಳು ಇಲ್ಲಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಏನಾದರೂ ದಾಂಧಲೆ ನಡೆದಿದೆಯೇ? ಅದನ್ನು ತಿಳಿದುಕೊಂಡು ತಾವು ಸರ್ಕಾರಕ್ಕೆ ಕಟ್ಟಪ್ಪಣೆ ಮಾಡಬೇಕು. ಮುಂದಿನ ಸಾಲಿನಲ್ಲಿಯೂ ಒಬ್ಬರೂ ಇಲ್ಲ. ಆ ಛೇರ್‌ಗಳಿಗಾದರೂ ಗೌರವ ಬರುತ್ತದೆ. ಅವು ಯಾವಾಗಲೂ ಖಾಲಿ ಇರುತ್ತವೆ. ಮುಖ್ಯಮಂತ್ರಿಗಳು ಬಂದರೆ ಯಾರೋ ನಾಲ್ಕು ಜನರು ಬಂದು ಹೋಗುತ್ತಾರೆ. ತಾವು ಎರಡೂ ಕಡೆ ಕೆಲಸ ಮಾಡಿರುವವರು. ನಾವು ಯಾರಿಗೆ ಮಾತನಾಡಬೇಕು? ಬೇಡಿಕೆಗಳನ್ನು ಮಂಡಿಸಿರುವವರು ಬರಲು ಹೇಳಿ. ಅದು ಕಾಫಿ ಷಾಪ್ ಅಥವಾ ಚಾಟಿಂಗ್ ಷಾಪೆ? ಇದಕ್ಕೆ ಗೌರವ ಬೇಡವೆ?ತಾವು ಅಧ್ಯಕ್ಷ ಪೀಠದಿಂದ ಸರ್ಕಾರಕ್ಕೆ ಈ ಬಗ್ಗೆ ಹೇಳಬೇಕಾಗುತ್ತದೆ. ಸರ್ಕಾರ ಮಾಡತಕ್ಕಂಥಾದ್ದು ತಪ್ಪು, ಆದ್ದರಿಂದ ನೀವು ಅವರನ್ನು ಕರೆಸಬೇಕು ಎನ್ನುವ ಆದೇಶ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಏಕೆ ಈ ಸದನ ನಡೆಸಬೇಕು? ಇವರೇ ಇದನ್ನು ಸಿರಿಯೆಸ್ಸಾಗಿ ತೆಗೆದುಕೊಳ್ಳದಿದ್ದರೆ ಹೇಗೆ? ನಿನ್ನೆ ಆಡಳಿತ ಪಕ್ಷದ ಒಬ್ಬ ಸದಸ್ಯರು ಮೇಲ್ಮನೆಯಲ್ಲಿ ಮಾಡಿರುವ ಆಪಾದನೆಯಲ್ಲಿ ಹುರುಳಿದೆ, ಇವರೇ ಇಲ್ಲಿಗೆ ಬರುವುದಿಲ್ಲವೆಂದರೆ ಇಲಾಖಾಧಿಕಾರಿಗಳು ಏಕೆ ಬರುತ್ತಾರೆ? ಶಾಸಕರು ಇಲಾಖಾ ಕಾರ್ಯದರ್ಶಿಗಳಿಗೆ ದೂರವಾಣಿ ಮಾಡಿದರೆ ವಾಪಸ್ ದೂರವಾಣಿ ಮಾಡುವ ಸೌಜನ್ಯ ಕೂಡ ಇಲ್ಲ, ಇಂಥ ಸ್ಥಿತಿ ಬಂದಿರುವಾಗ ನಾವು ಯಾರ ಪರವಾಗಿ ಹಾಗೂ ಏತಕ್ಕೋಸ್ಕರ ಮಾತನಾಡಬೇಕು? ನಮಗೂ ಕೂಡ ತಾಳ್ಮೆ ಇದೆ. ಅದಕ್ಕೊಂದು ಇತಿಮಿತಿಗಳಿವೆ, ಏನೋ ಮೂರು ಗಂಟೆ ಮೇಲಾದರೆ ನಾನೂ ಕೂಡ ಅರ್ಥಮಾಡಿಕೊಳ್ಳಬಲ್ಲೆ, 60 ವರ್ಷ ದಾಟಿರುವವರು, ವಯಸ್ಸಾಗಿರುವವರು 10 ನಿಮಿಷ ಮಲಗಿಕೊಳ್ಳುತ್ತಾರೆ ಅಂದರೆ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಬೇಡಿಕೆಗಳನ್ನು ಇಲ್ಲಿ ಮಂಡಿಸಿದ ನಂತರ ಅವರು ಎಲ್ಲಿಗೆ ಹೋಗುತ್ತಾರೆ? ಸದನವನ್ನು ಏಕೆ ನಡೆಸಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ತಾವು ಕರೆಸಿ.

ಛೇರ್ಮನ್ :— ತಾವು ಕೂಡ ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥವರು. ಯಾರೇ ಬಂದರೂ ಕೂಡ ಈ ದೋಷ ಕಾಣುತ್ತದೆ. ಅನಿವಾರ್ಯ ಕೆಲಸದ ನಿಮಿತ್ತ ಹೊರಗೆ ಹೋಗಿರಬಹುದು, ನಾನು ಹೇಳಿ ಕಳುಹಿಸಿದ್ದೇನೆ ಅವರು ಬರುತ್ತಾರೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಈ ಶಾಸನ ಸಭೆಗೆ ಬಂದು 18 ವರ್ಷವಾಯಿತು, ಒಂದು ಅಥವಾ ಎರಡು ದಿನ ಅಬ್ಸೆಂಟ್ ಆಗಿರಬಹುದು, ಬೆಲ್ ಹೊಡೆಯುವ ಸಮಯಕ್ಕೆ ಅರ್ಧಗಂಟೆ ಮುಂಚಿತವಾಗಿ ಬಂದು ಬೆಲ್ ಹೊಡೆದಾದ ಮೇಲೆ ಅರ್ಧಗಂಟೆ ಇದ್ದುಬಿಟ್ಟು ಹೋಗುತ್ತೇನೆ. ಮಂತ್ರಿಗಳು ಬಾರದಿದ್ದರೆ ಏನರ್ಥ?

ಛೇರ್ಮನ್ :— ಆಯಿತು ಬಿಡಿ, ತಾವೇ ಅಂತಾ ಅಲ್ಲ ಆ ಮುಂದಿನ ಸಾಲಿಗೆ ಸ್ವಲ್ಪ ಆ ಖಾಯಿಲೆ ಇದೆ. ದಯಮಾಡಿ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ, ಮಾನ್ಯ ಖರ್ಗೆಯವರು ಹೇಳಿದ ಮಾತುನ್ನು ನಾನು ಒಪ್ಪೋದಿಲ್ಲ, ಅವರು 60 ವರ್ಷ ಆದವರು ಮೂರು ಗಂಟೆಯವರೆಗೆ ಮಲಗಬಹುದು ಎಂದು ಹೇಳಿದರು, ಅವರ ಕಡೆಯಿಂದ ಆಗಲಿಲ್ಲವೆಂದರೆ ಬಿಟ್ಟುಬಿಡಲಿ. ಇಲ್ಲದಿದ್ದರೆ ಬಂದು ಇಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಸಿಂಧ್ಯಾರವರು ಕೊಟ್ಟಂಥ ಸಲಹೆಯನ್ನು ಮಾನ್ಯ ಕಂದಾಯ ಸಚಿವರಿಗೆ ತಿಳಿಸೋಣ ಎಂದು ಹೊರಗೆ ಹೋದರೆ ಅಷ್ಟರೊಳಗೆ ಇವರು ಇಲ್ಲಿ ದೂರಿದರೆ ಹೇಗೆ? ಇದಕ್ಕೇನು ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಚಂದ್ರೇಗೌಡರವರೇ, ತಾವು ದಯಮಾಡಿ ಇದನ್ನು ಗಮನಿಸಬೇಕು. You are considered as one of the best parliamentarians. You have served in all the Houses - Legislative Assembly, Legislative Council, Lok Sabha and Rajya Sabha, a unique distinction. ಬೇಡಿಕೆಗಳನ್ನು ಮಂಡಿಸಿರುವ ಗೌರವಾನ್ವಿತ ಮಂತ್ರಿಗಳು ಚರ್ಚೆಯಾಗುವ ಸಮಯದಲ್ಲಿ ಕನಿಷ್ಠ ಸೌಜನ್ಯಕ್ಕಾದರೂ ಅವರು ಇಲ್ಲಿರುವುದು ಬೇಡವೇ? ಇಷ್ಟೇ ನಾನು ಕೇಳಿದ್ದು ಬೇರೆ ಏನೂ ಕೇಳಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಚಂದ್ರೇಗೌಡರವರೆ, ನಮ್ಮ ಕಾಲದಲ್ಲಿ ನೀವು ಇದ್ದಿಲ್ಲ ಆಗ ಒಂದು ದಿವಸ ಮಂತ್ರಿಗಳು ಇಲ್ಲದ್ದಕ್ಕೆ ಇಲ್ಲಿ ಬಹಳಷ್ಟು ಗಲಾಟೆಯಾಯಿತು. ಅವರು ಅಲ್ಲಿಗೆ ಹೋದ ತಕ್ಷಣ ಬದಲಾವಣೆ ಆಗಿಬಿಟ್ಟರಾ? ಇವರು ನಮಗೆ ಬಹಳಷ್ಟು ಹೇಳುತ್ತಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನನ್ನ ಸಬ್ಜೆಕ್ಟ್ ಇಲ್ಲದೇ ಇದ್ದರೂ ಕೂಡ ನಾನು ಯಾವಾಗಲೂ ಹೌಸ್‌ನಲ್ಲಿ ಇರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ನೀವು ಇರುತ್ತೀರಿ ನಾನು ಇಲ್ಲವೆಂದು ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ಬರುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮಗೆ ಆರೋಗ್ಯ ಸರಿಯಾಗಿಲ್ಲ. ಅವರು ತಮ್ಮ ಕಛೇರಿಯಲ್ಲಿ ಇದ್ದಾರೆ. ಯಾರ ಬೇಡಿಕೆಗಳು ಇರುತ್ತವೆ ಚರ್ಚೆ ನಡೆದಾಗ ಅವರು ಇಲ್ಲಿ ಕುಳಿತು ಬರೆದುಕೊಂಡು ಅದಕ್ಕೆ ಉತ್ತರ ಕೊಡತಕ್ಕಂಥದ್ದು ಮಾಡಬೇಕಾಗುತ್ತದೆ ಇಲ್ಲದಿದ್ದರೆ ಸಮಗ್ರವಾಗಿ ಯಾರು ಉತ್ತರ ಕೊಡುತ್ತಾರೆ ಅವರು ಹೇಳಬೇಕಾಗುತ್ತದೆ. ನಾನು ಈ ಬಗ್ಗೆ ನಮ್ಮ ಮುಖ್ಯ ಸಚೇತಕರಿಗೆ ಹೇಳುತ್ತೇನೆ. ಯಾರು ಬೇಡಿಕೆಗಳನ್ನು ಮಂಡಿಸುತ್ತಾರೆ ಅವರು ಆ ಬೇಡಿಕೆಗಳು ಪಾಸ್ ಆಗುವವರೆಗೆ ಸದನದಲ್ಲಿ ಇರಬೇಕಾಗುತ್ತದೆ.

ಛೇರ್ಮನ್ :— ಇರಬೇಕಾದುದು ಸಂಪ್ರದಾಯ ಹಾಗೂ ಅವರ ಕರ್ತವ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಕೆಲಸ ಇದ್ದರೆ ನಿಮ್ಮ ಪರ್ಮಿಷನ್ ತೆಗೆದುಕೊಂಡು ಹೊರಗೆ ಹೋಗಬೇಕಾಗುತ್ತದೆ.

ಛೇರ್ಮನ್ :— ಆಯಿತು ಬಿಡಿ. ಮಾನ್ಯ ಶ್ರೀನಿವಾಸಗೌಡರವರೇ, ತಾವು ಮುಂದುವರೆಸಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ) :— ಹಾಲು ಸಹಕಾರ ಸಂಘಗಳ ಮೂಲಕ ನಾವು ಒಂದು ವಿಧೇಯಕವನ್ನು ತಂದು ಸ್ತ್ರೀ ಶಕ್ತಿಯನ್ನು ಬೆಳೆಸಬೇಕಾಗಿದೆ. ಇವತ್ತು ಬೆಳಗಾದ ಕೂಡಲೇ ಗಂಡಸರು ಏನು ಮಾಡುತ್ತಾರೆಂದರೆ ಈ ಚೌಕಬಾರ, ಹುಲಿಕಟ್ಟೆಗಳನ್ನು ಆಡಿಕೊಂಡು, ಈ ಹಸುಗಳನ್ನು ಹೊರಕ್ಕೆ ಕರೆದುಕೊಂಡು ಹೋಗಿ ನೀರು ಕುಡಿಸುವಂಥ ಕೆಲಸವನ್ನು ಮರೆತು ಬಿಟ್ಟಿದ್ದಾರೆ. ಹಳ್ಳಿ ಮಟ್ಟದಲ್ಲಿ ಅದರಲ್ಲೂ ಬಡ ಹೆಣ್ಣುಮಕ್ಕಳು ಈ ಎಲ್ಲಾ ಪರಿಶ್ರಮವನ್ನು ಪಡುತ್ತಿದ್ದಾರೆ. ಒಂದು ಮನೆಯಲ್ಲಿ ಒಂದು ಹಸು ಇದ್ದರೆ ಅವರ ಮನೆಯವರೆಲ್ಲರೂ ಸುಖವಾಗಿ ಇರುವ ಪರಿಸ್ಥಿತಿ ಇದ್ದಾಗ್ಯೂ ಕೂಡ ಇವರು ಈ ಕೆಲಸಗಳನ್ನು ಮಾಡದಿದ್ದರೆ ಹೇಗೆ? ಅದಕ್ಕಾಗಿ ಹಣ ನೇರವಾಗಿ ಸ್ತ್ರೀಗೆ ಸೇರುವಂತೆ ಮಾಡಬೇಕು. ಏಕೆಂದರೆ, 15 ದಿವಸಗಳ ಕಾಲ ಆ ಹೆಣ್ಣುಮಕ್ಕಳು ಹುಲ್ಲು ತಂದು ಹಸು ಸಾಕಿ ಎಲ್ಲಾ ತೊಳೆದು ಕಷ್ಟಪಟ್ಟು ಮಾಡಿರುತ್ತಾಳೆ, ಆದರೆ, ಹಣ ಬರುವ ದಿವಸ ಆ ಗಂಡಸು ಅಲ್ಲಿ ಪಂಚೆಕಟ್ಟಿಕೊಂಡು ರೆಡಿಯಾಗಿ ಇದ್ದು ಹಣ ತೆಗೆದುಕೊಂಡು ಅವನು ಇತರೆ ಲಾಲಸೆಗಳಿಗೆ ಒಳಗಾಗಿಬಿಡುತ್ತಾನೆ.

ಆದ್ದರಿಂದ, ಈ ಸಹಕಾರ ಸಂಘಗಳ ಮೂಲಕ ಸ್ತ್ರೀ ಶಕ್ತಿಯನ್ನು ಬೆಳೆಸಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಿಂತನೆ ಮಾಡಿದ್ದಾರೆ, ಇದನ್ನು ಇವರು ಸರಿಯಾದ ದಿಕ್ಕಿನತ್ತ ಹೋಗುವುದರತ್ತ ಯೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆಧುನಿಕ ವ್ಯವಸಾಯದ ಬಗ್ಗೆ ಹೇಳುವುದಾದರೆ, ಅವತ್ತಿನಿಂದ ಇವತ್ತಿನವರೆಗೆ ಎಷ್ಟೋ ಕೃಷಿ ಮಂತ್ರಿಗಳು ಬಂದು ಹೋದರು. ಇವತ್ತು ಎಷ್ಟು ಬೆಳೆ ಬೆಳೆದರೆ ಎಷ್ಟು ಬೆಲೆ ಸಿಗುತ್ತದೆ ಎನ್ನುವ ಮಾಹಿತಿ ಈ ಮಂತ್ರಿಗಳಿಗಲ್ಲದೆ, ವ್ಯವಸಾಯ ಇಲಾಖೆಯ ಸಾಮಾನ್ಯ ಒಬ್ಬ ಅಧಿಕಾರಿಗೂ ಇಲ್ಲ. ಇವತ್ತು ಆಲೂಗಡ್ಡೆ ಎಷ್ಟು ಎಕರೆಗಳಲ್ಲಿ ಬೆಳೆದರೆ ಇಷ್ಟು ಬೆಲೆ ಸಿಗುತ್ತದೆ ಎನ್ನುವ ಮಾಹಿತಿಯನ್ನು ಕೊಡುವಂತಾಗಬೇಕು. ಕಳೆದ 20 ವರ್ಷಗಳ ಮಾಹಿತಿ ತೆಗೆದುಕೊಂಡರೆ ಇದು ಲಭ್ಯವಾಗುತ್ತದೆ ಇದೇನೂ ದೊಡ್ಡ ಕೆಲಸವಲ್ಲ. ಈ ಕೆಲಸವನ್ನು ಕೃಷಿ ಇಲಾಖೆಯವರು ಮಾಡಬೇಕಾಗುತ್ತದೆ. ಈ ಮಾಹಿತಿಯನ್ನು ದೂರದರ್ಶನ ಹಾಗೂ ಪತ್ರಿಕಾ ಮಾಧ್ಯಮಗಳ ಮೂಲಕ ಜನಗಳಿಗೆ ತಿಳಿಸಿ ಬುದ್ಧಿ ಹೇಳಬೇಕು. ಇಂಥ ವರ್ಷದಲ್ಲಿ ಇಷ್ಟು ಎಕರೆಗೆ ರಾಗಿ, ಭತ್ತ, ಆಲೂಗಡ್ಡೆ, ಇಂಥವುಗಳನ್ನು ಹಾಕಿದಾಗ ಇಷ್ಟು ಬೆಲೆ ಬಂದಿದೆ ಎನ್ನುವ ಮಾಹಿತಿಯನ್ನು ಅಗತ್ಯವಾಗಿ ತಿಳಿಸುವಂಥ ಕೆಲಸ ಆಗಬೇಕು. ಈ ಮಾಹಿತಿ ರೈತನಿಗೆ ಗೊತ್ತಾದರೆ ತಾನೂ ಕೂಡ ಇದರ ಬಗ್ಗೆ ಹೊಸ ಚಿಂತನೆ ಮಾಡುತ್ತಾನೆ. ಇವತ್ತು ಇಂಥಿಂಥ ಬೆಳೆಗಳನ್ನು ಇಷ್ಟೇ ಮಾಡಬೇಕು ಎಂದು ಕಂಟ್ರೋಲ್ ಮಾಡುವುದಕ್ಕೆ ನಮಗೆ ಶಕ್ತಿ ಇಲ್ಲ. ಒಬ್ಬ ರೈತನಿಗೆ ನಾಲ್ಕು ಕಾಸು ಈರುಳ್ಳಿಯಲ್ಲೊ ಅಥವಾ ಟಮೋಟೋದಲ್ಲೊ ಬಂದರೆ, ಪಕ್ಕದ ರೈತರೆಲ್ಲರೂ ಕೂಡ ಇದೇ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭಿಸುತ್ತಾರೆ. ವೈಜ್ಞಾನಿಕ ರೀತಿಯಲ್ಲಿ ಚಿಂತನೆ ಮಾಡುವಲ್ಲಿ ಕೂಡ ಈ ಕೃಷಿ ಇಲಾಖೆ ಇವತ್ತು ವಿಫಲವಾಗಿದೆ. ರೈತರುಗಳಿಗೆ ತೊಂದರೆ ಬಂದಾಗ ಮಾತ್ರ ಎಲ್ಲಾ ಸರ್ಕಾರಗಳು, ಮನೆಗಳಿಗೆ ಬೆಂಕಿ ಬಿದ್ದಾಗ ಬಾವಿ ತೋಡುವಂಥ ಕೆಲಸ ಮಾಡುತ್ತಿವೆ. ಈ ರಾಜ್ಯದಲ್ಲಿ ಇಂತಿಷ್ಟು ಎಕರೆಯಲ್ಲಿ ಇಂತಿಷ್ಟು ಬೆಳೆಗಳನ್ನು ಬೆಳೆದರೆ ಇಂತಿಂಥ ಬೆಲೆ ಸಿಗುತ್ತದೆ ಎನ್ನುವ ವೈಜ್ಞಾನಿಕ ಚಿಂತನೆಯನ್ನು ನಾವಿಂದು ಮಾಡಬೇಕಾಗಿದೆ. ನೀವು ಈ ಕೆಲಸವನ್ನು ಮಾಡಿ ಅದರ ಮಾಹಿತಿಯನ್ನು ಜನ ಸಾಮಾನ್ಯರಿಗೆ ತಲುಪುವಂತೆ ಮಾಡಿದಾಗ ಮಾತ್ರ ಎಲ್ಲಾ ಬೆಳೆಗಳಿಗೆ ಸರಿಯಾದ ಬೆಲೆ ಸಿಗುವಂತಾಗುತ್ತದೆ. ಈ ಕೆಲಸದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಇವತ್ತು ನಾವು ಬೆಳೆಯುತ್ತಿರುವ ಉತ್ತಮ ತಳಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇಳುವರಿ ಬರುವಂಥ ತಳಿಗಳನ್ನು ನಾವು ಕಂಡುಕೊಳ್ಳಬೇಕಾಗಿದೆ. ಇನ್ನು ರೇಷ್ಮೆಯ ಬಗ್ಗೆ ಹೇಳುವುದಾದರೆ, ನಾನು ಮೊನ್ನೆ ಮಾನ್ಯ ಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದ್ದೆ. ಜಪಾನ್‌ನಲ್ಲಿ 20 ವರ್ಷಗಳ ಹಿಂದೆ ಒಂದು ರೇಷ್ಮೆ ಗೂಡಿನಿಂದ ಸುಮಾರು 2500 ಮೀಟರ್ ದಾರ ಬರುವ ತಳಿಯನ್ನು ಹಾಕುತ್ತಾರೆ. ಚೈನಾ ದೇಶದಲ್ಲಿ ಒಂದು ಗೂಡಿಗೆ ಸುಮಾರು 1800 ದಿಂದ 1900 ಮೀಟರ್ ದಾರ ಬರುವ ತಳಿಯನ್ನು ಹಾಕುತ್ತಾರೆ.

ನಮ್ಮಲ್ಲಿ ವಿಜ್ಞಾನಿಗಳು ಇಲ್ಲವೆ ಅಥವಾ ವೈಜ್ಞಾನಿಕವಾಗಿ ನಾವೇನಾದರೂ ಹಿಂದುಳಿದಿದ್ದೇವೆಯೇ? ಏಕೆ ಆ ತರಹ ಮೊಟ್ಟೆ ಅಥವಾ ಬೀಜಗಳನ್ನು ಮಾಡುತ್ತಿಲ್ಲ. ಹೈದಾರಾಲಿ-ಟಿಪ್ಪು ಸುಲ್ತಾನ ಕಾಲದಲ್ಲಿ ನಮ್ಮ ರಾಜ್ಯದಲ್ಲಿ ದೇವನಹಳ್ಳಿ ಮೂಲಕ ಈ ರೇಷ್ಮೆ ಬಂದಿದೆ. ಇಂಥ ರೇಷ್ಮೆಗೆ ಸುಮಾರು 800ಮೀಟರ್‌ಗಿಂತ ಹೆಚ್ಚಿಗೆ ದಾರ ಬರುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಮ್ಮ ರೇಷ್ಮೆ ಗೂಡಿಗೆ ಬೆಲೆನೇ ಇಲ್ಲ, ಇದು ಏಕೆ ಈ ರೀತಿ, ನಾವು

1.30 ಪಿ.ಎಂ.

ಎಲ್ಲಿ ವಂಚಿತರಾಗಿದ್ದೇವೆ? ಇವತ್ತಿದಿವಸ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿರತಕ್ಕಂಥವರು ರೇಷ್ಮೆ ಮತ್ತು ಹಾಲು ಸಂಗ್ರಹಣೆಯಿಂದ ಬೆಳ್ಳನೆಯ ಬಟ್ಟೆಯನ್ನು ಹಾಕುವುದಕ್ಕೆ ಸಾಧ್ಯವಾಗಿದೆ. ಈ ಎರಡು ಉದ್ಯಮಗಳಿಗೆ ಒತ್ತು ಕೊಡುವುದಕ್ಕೆ ೫೩ ವರ್ಷ ಬೇಕಾಯಿತೆ? ಜಪಾನ್ ದೇಶದಲ್ಲಿ ಬೆಳೆಯತಕ್ಕಂಥ ಗೂಡನ್ನು ಇಲ್ಲಿ ಬೆಳೆಯುವುದಕ್ಕೆ ಮತ್ತ ಚೈನಾ ದೇಶದಲ್ಲಿ ಬೆಳೆಯತಕ್ಕಂಥ ಬಿತ್ತನೆ ಮೊಟ್ಟೆಯನ್ನು ಇಲ್ಲಿ ಮಾಡುವುದಕ್ಕೆ ನಮಗೆ ಚೈತನ್ಯ ಇಲ್ಲ ಎನ್ನತಕ್ಕಂಥದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಇನ್ನು ತಳಿಗಳ ಬಗ್ಗೆ ಹೇಳುವುದಾದರೆ, ಹಿಂದೆ ಒಂದು ತಳಿ ಇತ್ತು. ಆ ನಂತರ ಎಂ-೫, ವಿ-೧, ಥೈಲಾಂಡ್ ಮತ್ತು ಎಸ್-೩೬ ಬಂದಿದೆ. ನಮ್ಮ ರಾಜ್ಯದಲ್ಲಿ ವಿಫಲವಾದಂಥ ಅವಕಾಶವಿರುವುದರಿಂದ ಒಳ್ಳೆಯ ತಳಿಗಳನ್ನು ತರಲಿಕ್ಕೆ ಸಾಧ್ಯವಿದೆ. ಮೊನ್ನೆ ದಿವಸ ಸನ್ಮಾನ್ಯ ರೇಷ್ಮೆ ಸಚಿವರಾದ ಶ್ರೀ ಎಂ. ಮಹದೇವ್‌ರವರು ಉತ್ತರ ಕೊಡುವಂಥ ಸಂದರ್ಭದಲ್ಲಿ, ರೇಷ್ಮೆಗೆ ಬರ ಬಂದಿದೆ ಮತ್ತು ನಾವು ಬಳೆಯತಕ್ಕಂಥ ರೇಷ್ಮೆ ಸಾಲದೆಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಹದೇವ (ರೇಷ್ಮೆ ಸಚಿವರು) :— ಮಾನ್ಯ ಛೇರ್ಮನ್‌ರವರೆ, ನಾನು ತಪ್ಪು ಮಾಹಿತಿಯನ್ನು ಇಲ್ಲಿ ಕೊಟ್ಟಿಲ್ಲ. ಕೇಂದ್ರ ರೇಷ್ಮೆ ಮಂಡಳಿಯಿಂದ ನಮ್ಮಲ್ಲಿ ಎಷ್ಟು ಕೊರತೆ ಇದೆ ಎನ್ನತಕ್ಕಂಥ ಮಾಹಿತಿಯನ್ನು ನೆನ್ನೆ ದಿವಸ ಫ್ಯಾಕ್ಸ್ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಅವರು ನೀಡಿರತಕ್ಕಂಥ ಅಂಕಿ-ಅಂಶಗಳ ಆಧಾರದ ಮೇಲೆ ನಾನು ಮಾತನಾಡಿದ್ದೇನೆಯೇ ಹೊರತು ನಾನೇನೂ ತಮ್ಮ ಮಾಹಿತಿಯನ್ನು ಕೊಟ್ಟಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಸನ್ಮಾನ್ಯ ವೈ.ಕೆ. ರಾಮಯ್ಯನವರು ಇದನ್ನು ಒಪ್ಪುವುದಾದರೆ ನಾವೂ ಸಹ ಒಪ್ಪುತ್ತೇವೆ.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಛೇರ್ಮನ್‌ರವರೆ, ನನ್ನ ಮಟ್ಟಿಗೆ ಹೇಳುವುದಾದರೆ, ಮಾನ್ಯ ಮಹದೇವ್‌ರವರು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಮಹದೇವ್‌ರವರಾಗಲಿ ಅಥವಾ ಯಾರದರೊಬ್ಬರು ಮಂತ್ರಿಗಳು ಆಗುತ್ತಾರೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಆದರೆ ಅನೇಕ ಶತಮಾನಗಳಿಂದ ಹೊರದೇಶಗಳಿಂದ ರೇಷ್ಮೆ ತರಿಸಿಕೊಳ್ಳುವುದರಿಂದ ಈ ರಾಷ್ಟ್ರದಲ್ಲಿರತಕ್ಕಂಥ ರೇಷ್ಮೆ ಉದ್ಯಮವನ್ನು ಕೇಂದ್ರ ಸರ್ಕಾರ

ನಾಶ ಮಾಡುತ್ತಿದ್ದಾರೆ ಎನ್ನತಕ್ಕಂಥದು ಎಲ್ಲಾ ಪಕ್ಷದವರ ಮತ್ತು ಎಲ್ಲಾ ರಾಜ್ಯ ಸರ್ಕಾರದವರ ಖಚಿತವಾದ ಅಭಿಪ್ರಾಯವಾಗಿದೆ. ನಮಗೆ ಎಷ್ಟು ರೇಷ್ಮೆ ಬೇಕಾಗಿತ್ತೋ ಅಷ್ಟು ರೇಷ್ಮೆ ಉತ್ಪಾದನೆ ಆಗದೇ ಕೊರತೆ ಇದೆ ಎನ್ನತಕ್ಕಂಥದು ಮತ್ತು ಒಳ್ಳೆಯ ಗುಣಮಟ್ಟದ ರೇಷ್ಮೆ ದೊರೆಯುತ್ತಿಲ್ಲ ಎನ್ನತಕ್ಕಂಥ ಎರಡು ಕಾರಣಗಳನ್ನು ಮೊದಲಿನಿಂದಲೂ ಹೇಳುತ್ತಾ ಬರುತ್ತಿದ್ದಾರೆ. ಇದು ಸರಿಯೋ ಅಥವಾ ತಪ್ಪು ಎಂಬುದು ನನಗೆ ಗೊತ್ತಿಲ್ಲ. ಈ ಕುಂಟು ನೆಪವನ್ನು ನಾನು ಮೊದಲಿನಿಂದಲೂ ಕೇಳುತ್ತಾ ಬರುತ್ತಿದ್ದೇನೆ. It is a pretext to import raw-silk from other countries by the Centre. ಕೇಂದ್ರ ರೇಷ್ಮೆ ಮಂಡಳಿಯವರು ರೇಷ್ಮೆ ಕೊರತೆ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ ಅವರಿಗೆ ಎಷ್ಟು ರೇಷ್ಮೆ ಬೇಕೋ ಅಷ್ಟನ್ನು ವಿಮಾನದ ಮೂಲಕ ಅವರಿಗೆ ಕಳುಹಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ. ಇದನ್ನು ತಾತ್ಪೂರಿಕವಾಗಿ ಹೇಳುತ್ತಿದ್ದೇನೆಯೇ ಹೊರತು ಇಲ್ಲಿ ಯಾರೋ ಮಂತ್ರಿಯಾಗಿದ್ದಾರೆಂದು ನಾನು ಹೇಳುತ್ತಿಲ್ಲ. ಇವತ್ತಿನ ದಿವಸ ರೇಷ್ಮೆ ಮಂಡಳಿಯವರು ಯಾವತ್ತೂ ಕೂಡ ಕೇಂದ್ರ ಸರ್ಕಾರದ ಪರವಾಗಿ ಇರುತ್ತಾರೆ. ಇವತ್ತಿನದಿವಸ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳ ಕತ್ತು ಕೊಯ್ಯುತ್ತಾ ಬಂದಿದ್ದಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಕೊರತೆ ಎನ್ನತಕ್ಕಂಥದ್ದು ಕೇಂದ್ರ ಸರ್ಕಾರದ ಅಭಿಪ್ರಾಯ ಎಂದು ಇಟ್ಟುಕೊಳ್ಳಬಹುದೇ ವಿನಃ ರಾಜ್ಯ ಸರ್ಕಾರದ ಅಭಿಪ್ರಾಯ ಅಲ್ಲ ಎನ್ನತಕ್ಕಂಥ ಮಾತನ್ನು ಇವತ್ತು ಹೇಳುತ್ತೇನೆ. ಹಿಂದೆಯೂ ಕೂಡ ಇದೇ ಮಾತನ್ನು ಹೇಳಿದ್ದೇನೆ.

ಶ್ರೀ ಎಂ. ಮಹದೇವ್ :— ನಮ್ಮ ರಾಜ್ಯದಲ್ಲಿರತಕ್ಕಂಥ ರೇಷ್ಮೆ ಕೊರತೆಯನ್ನು ಭರ್ತಿಮಾಡಲ್ಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ನಾವು ಈಗಾಗಲೇ ಹಮ್ಮಿಕೊಂಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ :— ಯಾವ ಆಧಾರದ ಮೇಲೆ ನೀವು ಕೊರತೆಯನ್ನು ಲೆಕ್ಕಾಚಾರ ಹಾಕಿದ್ದೀರಿ? ನಮ್ಮ ದೇಶದಲ್ಲಿ ಉತ್ಪಾದನೆ ಆಗುತ್ತಿರುವ ರೇಷ್ಮೆಯಲ್ಲಿ ನಮ್ಮ ರಾಜ್ಯದ ಪಾಲು ಶೇಕಡ 60 ರಷ್ಟು ಇದೆ. ಆದ್ದರಿಂದ ಕೊರತೆ ಆಗುತ್ತದೆಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ? ಕೇಂದ್ರ ರೇಷ್ಮೆ ಮಂಡಳಿಯವರು ಕಳುಹಿಸಿಕೊಟ್ಟಿರತಕ್ಕಂಥ ಮಾಹಿತಿಯನ್ನು ಸನ್ಮಾನ್ಯ ಮಂತ್ರಿಗಳು ಇಲ್ಲಿ ಹೇಳುವುದನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಎಂ. ಮಹದೇವ್ :— ನಾನು ರೇಷ್ಮೆ ಇಲಾಖೆಯ ಮಂತ್ರಿಯಾಗಿ ಈ ಸದನವನ್ನು ತಪ್ಪುದಾರಿಗೆ ಎಳೆಯಬೇಕೆಂಬ ಉದ್ದೇಶ ನನಗೆ ಇಲ್ಲ. ಕೇಂದ್ರ ರೇಷ್ಮೆ ಮಂಡಳಿಯವರು ನೀಡಿರತಕ್ಕಂಥ ಮಾಹಿತಿ ಪ್ರಕಾರ ನಮ್ಮ ದೇಶದಲ್ಲಿ ೧೪ ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಆಗುತ್ತಿದ್ದು, ಇದರಲ್ಲಿ ೮ ಸಾವಿರ ಮೆಟ್ರಿಕ್ ಟನ್ ನಮ್ಮ ರಾಜ್ಯದಿಂದ ಉತ್ಪತ್ತಿ ಆಗುತ್ತಿದೆ. ಆದರೆ ನಮಗೆ ಇನ್ನು ೮ ಸಾವಿರ ಮೆಟ್ರಿಕ್ ಟನ್‌ನಷ್ಟು ಕೊರತೆ ಇದೆ ಎಂದು ಸದರಿ ಮಂಡಳಿಯವರು ತಿಳಿಸಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನದೊಂದು ಸಲಹೆ ಏನೆಂದರೆ, ಮಾನ್ಯ ವೈ.ಕೆ. ರಾಮಯ್ಯನವರು ಕರ್ನಾಟಕ ರಾಜ್ಯ ಕಂಡಂಥ ಒಬ್ಬ ಉತ್ತಮವಾದಂಥ ರೇಷ್ಮೆ ಇಲಾಖೆಯ ಮಂತ್ರಿಗಳಾಗಿದ್ದರು. ಅವರ ಅನುಭವದ ಆಧಾರದ ಮೇಲೆ ಏನು ಹೇಳುತ್ತಾರೆಂದರೆ, ರೇಷ್ಮೆ ಕೊರತೆ ಬಗ್ಗೆ ರೇಷ್ಮೆ ಮಂಡಳಿಯವರು ದುರುದ್ದೇಶ ಇಟ್ಟುಕೊಂಡು ಹೇಳುತ್ತಾರೆಂದು ಅವರು ಹೇಳುತ್ತಾರೆ. ಈ ಸಂದರ್ಭದಲ್ಲಿ ನಾನೇನು ಹೇಳುವುದು ಏನೆಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ ನಾವೆಲ್ಲರೂ ಕೂಡ ರೇಷ್ಮೆ ಬೆಳೆಯತಕ್ಕಂಥ ಪ್ರದೇಶಗಳಿಂದ ಬಂದಿದ್ದೇವೆ. ನೀವು ಯಾವ ಆಧಾರದ ಮೇಲೆ ರೇಷ್ಮೆ ಕೊರತೆ ಇದೆ ಎಂದು ಹೇಳುತ್ತಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ. ಇದನ್ನು ಯಾವ ಮಾನದಂಡದ ಮೇಲೆ ಹೇಳುತ್ತಿದ್ದೀರಿ? ಹೋದ ವರ್ಷ ಎಷ್ಟು ಬೇಡಿಕೆ ಇತ್ತು ಎನ್ನತಕ್ಕಂಥ ಆಧಾರದ ಮೇಲೆ ಲೆಕ್ಕ ಹಾಕಬೇಕಾಗುತ್ತದೆ. ಆದರೆ ತಾವು ಈ ಯಾವ ಲೆಕ್ಕಾಚಾರವನ್ನು ಇಟ್ಟುಕೊಂಡಿಲ್ಲ. ಏಕೆಂದರೆ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಂದ ಗೂಡು ಇಲ್ಲಿಗೆ ಬರುತ್ತಿದ್ದು ಹಾಗೆಯೇ ಇಲ್ಲಿಂದ ರೇಷ್ಮೆ ದಾರವನ್ನು ಬೇರೆ ಬೇರೆ ರಾಜ್ಯಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ತಾವು ಯಾವ ಆಧಾರದ ಮೇಲೆ ಈ ಅಂಕಿ-ಅಂಶಗಳನ್ನು ಡಿಫೆಂಡ್ ಮಾಡಿಕೊಳ್ಳುತ್ತಿದ್ದೀರಿ? ಇದಕ್ಕೆ ಸಂಬಂಧಪಟ್ಟಂತೆ ನನ್ನ ಸಲಹೆ ಏನೆಂದರೆ, ಸಿಲ್ಕ್ ತಯಾರಿಕೆಗಾರರಿಗೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಮತ್ತು ಬೇರೆ ರಾಜ್ಯಗಳಿಗೆ ಎಷ್ಟು ಕಳುಹಿಸಲಾಗುತ್ತಿದೆ ಎನ್ನತಕ್ಕಂಥ ಲೆಕ್ಕಾಚಾರ ನಿಮ್ಮ ಹತ್ತಿರ ಇರುತ್ತದೆ. ಹಾಗೆಯೇ ಚೈನಾದಿಂದ ತರಿಸಿಕೊಳ್ಳತಕ್ಕಂಥ ರೇಷ್ಮೆ ನೂಲನ್ನ ನಮ್ಮ ನೂಲುದಾರರು ಉಪಯೋಗಿಸಿಕೊಳ್ಳುತ್ತಿದ್ದಾರೆ ಎನ್ನತಕ್ಕಂಥದ್ದೂ ಸಹ ನಿಮಗೆ ಗೊತ್ತಿದೆ. ಈ ಎಲ್ಲಾ ಆಧಾರದ ಮೇಲೆ ತಾವು ಕೊರತೆ ಇದೆ ಎಂದು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಕೇಂದ್ರ ರೇಷ್ಮೆ ಮಂಡಳಿಯವರು ಫ್ಯಾಕ್ಸ್‌ನಲ್ಲಿ ಕಳುಹಿಸಿರುವ ಅಂಕಿ-ಅಂಶಗಳನ್ನು ತಾರು ಹೇಳುತ್ತಿದ್ದೀರಿ. ಅವರೊಂದು ರೀತಿಯ ಆಸಕ್ತಿಯನ್ನು ಇಟ್ಟುಕೊಂಡು ಈ ರೀತಿಯಾದಂಥ ಮಾಹಿತಿಯನ್ನು ಕಳುಹಿಸುತ್ತಿದ್ದಾರಷ್ಟೆ.

ಶ್ರೀ ಎಂ. ಮಹದೇವ್ :— ನಮ್ಮ ಹತ್ತಿರವು ಎಲ್ಲಾ ರೀತಿಯಾದ ಅಂಕಿ ಅಂಶಗಳನ್ನು ಇಟ್ಟುಕೊಂಡಿರುತ್ತೇವೆ. ನಮ್ಮ ರಾಜ್ಯದಲ್ಲಿ ಎಷ್ಟು ಉತ್ಪಾದನೆ ಆಗುತ್ತದೆ ಮತ್ತು ಎಷ್ಟು ಬೇಡಿಕೆ ಇದೆ ಎನ್ನತಕ್ಕಂಥದನ್ನು ಗಮನದಲ್ಲಿಟ್ಟುಕೊಂಡು ರೇಷ್ಮೆ ಉತ್ಪತ್ತಿಯನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮಕ್ಕೆ ನಾವು ಹೆಚ್ಚಿನ ಪ್ರಾಶಸ್ತ್ಯವನ್ನೂ ಸಹ ಕೊಡುತ್ತಿದ್ದೇವೆ. ಹಾಗೆಯೇ ಇವತ್ತಿನದಿವಸ ಹೊಸ ತಳಿಗಳನ್ನು ತಯಾರು ಮಾಡಿದ್ದೇವೆ. ಗುಣಮಟ್ಟದ ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಸಾಕಷ್ಟು ವಿಫಲವಾದ ಅವಕಾಶ ಇದೆ. ಈ ರೀತಿಯಾದಂಥ ಅವಕಾಶ ಬೇರೆ ರಾಜ್ಯಗಳಲ್ಲಿ ಇಲ್ಲ. ನಾನು ಈಗಾಗಲೇ ಹೇಳಿದಂತೆ, ಕೊರತೆಯನ್ನು ಸರಿದೂಗಿಸುವುದಕ್ಕೋಸ್ಕರ ನಾವು ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮದಿಂದ ಅನುಕೂಲವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಕೊಡತಕ್ಕಂಥ ಮಾಹಿತಿ ಮೇಲೆ ನಾವೇನು ನಿಂತುಕೊಂಡಿಲ್ಲ. ಆಮದು ಆಗತಕ್ಕಂಥ ರೇಷ್ಮೆಗೆ ಹೆಚ್ಚು

ತೆರಿಗೆಯನ್ನು ಹಾಕಿಲ್ಲ. ಇದರಿಂದ ನಮ್ಮ ರಾಜ್ಯದ ರೈತರಿಗೆ ತೊಂದರೆಯಾಗುತ್ತದೆಂದು ಕೇಂದ್ರ ಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಹಾಗೆಯೇ ಬರವಣಿಗೆಯ ಮೂಲಕವು ಮನವಿಯನ್ನು ಕೊಟ್ಟಿದ್ದೇನೆ. ೫೧ ಪರ್ಸೆಂಟ್‌ಗಿಂತ ಹೆಚ್ಚು ತೆರಿಗೆಯನ್ನು ಹಾಕಿದರೆ ನಮ್ಮ ರಾಜ್ಯದಲ್ಲಿ ರೈತರು ರೇಷ್ಮೆ ಬೆಳೆಯಲಿಕ್ಕೆ ಅನುಕೂಲವಾಗುತ್ತಿದೆ ಎನ್ನತಕ್ಕಂಥ ಮಾತನ್ನು ನಾವು ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ.

ಛೇರ್ಮನ್ :— ರೇಷ್ಮೆ ಇಲಾಖೆಯ ಬೇಡಿಕೆ ಇನ್ನೂ ಮಂಡನೆ ಆಗಿಲ್ಲ. ಆದ್ದರಿಂದ ರೇಷ್ಮೆ ಇಲಾಖೆ ಬಗ್ಗೆ ಈಗ ಮಾತನಾಡುವುದು ಬೇಡ. ರೇಷ್ಮೆ ಇಲಾಖೆಗೆ ಬಗ್ಗೆ ಮಾತನಾಡುವಂಥ ಸಂದರ್ಭ ಬಂದಾಗ ಈ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದರೆ ಒಳ್ಳೆಯದು.

ಶ್ರೀ ಕೆ. ಶ್ರೀನಿವಾಸಗೌಡ :— ಇವತ್ತು ನಮ್ಮ ದೇಶದಲ್ಲಿ ಉತ್ಪಾದನೆ ಆಗುತ್ತಿರುವ ರೇಷ್ಮೆಯಲ್ಲಿ ೬೦ ಭಾಗದಷ್ಟು ರೇಷ್ಮೆಯನ್ನು ನಮ್ಮ ರಾಜ್ಯದಲ್ಲಿ ಇವತ್ತಿನದಿವಸ ಉತ್ಪಾದನೆ ಆಗುತ್ತಿದೆ ಮಾನ್ಯ ಮಂತ್ರಿಯವರು ರೇಷ್ಮೆ ಕೊರತೆ ಇದೆ ಎಂದು ಇಲ್ಲಿ ಹೇಳಿದರ, ದೆಹಲಿಯಲ್ಲಿರತಕ್ಕಂಥ ದೊರೆಗಳು ಚೈನಾ ದೇಶದ ದೊರೆಗಳ ಹತ್ತಿರ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಕೇಂದ್ರ ರೇಷ್ಮೆ ಮಂಡಳಿಯವರು ಕೊಟ್ಟಿರತಕ್ಕಂಥ ಮಾಹಿತಿಯನ್ನು ಇಲ್ಲಿ ಹೇಳುವಂಥದಲ್ಲ. ಮಂತ್ರಿ ಆಗತಕ್ಕಂಥ ಸಂದರ್ಭದಲ್ಲಿ ನೀವು ಗೌಪ್ಯವಾಗಿ ಪ್ರಮಾಣವಚನ ಮಾಡಿರುತ್ತೀರಿ. ಆದ್ದರಿಂದ ಈ ವಿಷಯದಿಂದ ನಮ್ಮ ರಾಜ್ಯಕ್ಕೆ ಆಗುವಂಥ ತೊಂದರೆಯನ್ನು ಕಾಪಾಡುವಂಥ ಗೌಪ್ಯಕೆಲಸವನ್ನು ಮಾನ್ಯ ಮಂತ್ರಿಯವರು ಮಾಡಬೇಕಾಗುತ್ತದೆ.

ಶ್ರೀ ಎಂ. ಮಹದೇವ್ :— ಈ ವಿಷಯ ರಾಜ್ಯಕ್ಕೆ ಸೀಮಿತವಾಗಿದ್ದರೆ ಇದನ್ನು ನಾನು ಗೌಪ್ಯವಾಗಿ ಇಡಬಹುದಾಗಿತ್ತು. ನಾನು ಒಂದು ಪಕ್ಷ ಹೇಳದೆ ಇದ್ದರೂ ಕೂಡ ಇಷ್ಟೇ ಕೊರತೆ ಇದೆ ಎಂದು ಕೇಂದ್ರದವರು ಹೇಳೇ ಹೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ :— ನಮಗೆ ಒಂದು ತಿಂಗಳ ಕಾಲದವರೆಗೆ ಅವಕಾಶ ಕೊಟ್ಟು ಉತ್ತಮವಾದ ಮೊಟ್ಟೆಯನ್ನು ಕೊಟ್ಟರೆ, ಕೇಂದ್ರ ಸರ್ಕಾರದವರಿಗೆ ಎಷ್ಟು ಸಾವಿರ ಟನ್ ರೇಷ್ಮೆ ಬೇಕೋ ಅಷ್ಟನ್ನು ನಾವು ಬೆಳೆದು ಕೊಡುವುದಕ್ಕೆ ತಯಾರಿದ್ದೇವೆ. ಇದಕ್ಕೆ ಯಾವುದೇ ರೀತಿಯಿಂದಲೂ ಹೆದರಬೇಕಾಗಿರತಕ್ಕಂಥ ಪರಿಸ್ಥಿತಿ ಇಲ್ಲ. ಆದ್ದರಿಂದ ತಾವು ಈ ರೀತಿ ಹೇಳಬಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಬರಗಾಲ ಪರಿಸ್ಥಿತಿ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ತೆಂಗು ನುಸಿ ರೋಗದ ಬಗ್ಗೆ ಮಾತನಾಡಿದ್ದೇನೆ. ಈ ರೋಗಕ್ಕೆ ಹೋದ ವರ್ಷ ೫ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಈ ಸಾರಿ ತೋಟಗಾರಿಕೆ ಇಲಾಖೆಯ ಮಂತ್ರಿಯವರು ಎಷ್ಟು ಖರ್ಚು ಮಾಡುತ್ತಾರೆಂದು ಹೇಳಬೇಕಾಗುತ್ತದೆ. ಈ ಸಾಲಿಗೂ ಕೂಡ ನುಸಿರೋಗ ತಡೆಗಾಗಿ ೧೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆಂದು

ನನಗನ್ನಿಸುತ್ತದೆ, ನನ್ನ ಹತ್ತಿರ ಸರಿಯಾದ ಮಾಹಿತಿ ಇಲ್ಲ. ಇಷ್ಟು ಹಣವನ್ನು ಇಟ್ಟರೂ ಸಹ ೨ ಪರ್ಸೆಂಟ್ ನುಸಿರೋಗ ಕಡಿಮೆಯಾಗಿದೆಯೇ? ನೀವು ಸಮುದ್ರದ ಪಕ್ಕದಲ್ಲಿರುವ ಮರಗಳನ್ನು ನೋಡಬೇಡಿ, ಮಳೆ ಜಾಸ್ತಿಯಾದಲ್ಲಿ ಅಥವಾ ಬಿಸಿಲು ಜಾಸ್ತಿ ಇದ್ದಲ್ಲಿ ರೋಗ ಬರುವುದಿಲ್ಲ. ತುಮಕೂರು, ಹಾಸನ, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ತೆಂಗು ಬೆಳೆಯುವಂಥ ಜಿಲ್ಲೆಗಳಲ್ಲಿ ಆ ರೋಗ ಬಂದಿದೆ. ನಿಮ್ಮ ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಆ ರೋಗ ಮಾತ್ರ ಕಂಟ್ರೋಲ್ ಆಗುತ್ತಿಲ್ಲ, ಬೇರೆ ಯಾರ ತೋಟದ ಬಗ್ಗೆ ನಾನು ಹೇಳುತ್ತಿಲ್ಲ, ಸ್ವತಃ ನನ್ನ ತೋಟದಲ್ಲಿಯೇ ಆ ರೋಗ ಕಂಟ್ರೋಲ್ ಆಗುತ್ತಿಲ್ಲ. ನೀರಾ ಇಳಿಸುವುದಕ್ಕೆ ಅವಕಾಶ ಕೊಡಿ ಅಂದರೆ ಅದಕ್ಕೆ ಮಂತ್ರಿಗಳು ಬೇರೆ ಏನೋ ಹೇಳುತ್ತಾರೆ. ಇಂದಿರಾ ಆವಾಸ್, ಅಂಬೇಡ್ಕರ ಮನೆಗಳು, ಆಶ್ರಯ ಮನೆಗಳಿಗೆ ಎರಡೆರಡು ತೆಂಗಿನ ಸಸಿಗಳನ್ನು ಕೊಡಲಾಗಿದೆ, ಅಲ್ಲಿ ಹೋಗಿ ನೀವು ಔಷಧಿಯನ್ನು ಸಿಂಪರಣೆ ಮಾಡುತ್ತೀರಾ? ಇದನ್ನು ನೀವು ಅರ್ಥಮಾಡಿಕೊಂಡು, ಒಂದು ಕೆಲಸವನ್ನು ಮಾಡಬೇಕು. ಇದನ್ನು ಪೂರ್ತಿಯಾಗಿ ಕಂಟ್ರೋಲ್ ಮಾಡಬೇಕಾದರೆ, ಶಾಲಾ ಕಾಲೇಜು ಮಕ್ಕಳುಗಳನ್ನು ಇದಕ್ಕೆ ಹಚ್ಚಬೇಕು. ಆಂಧ್ರಪ್ರದೇಶದಲ್ಲಿರುವ ಮಾನ್ಯ ಮುಖ್ಯಮಂತ್ರಿಗಳು ಹಳ್ಳಿಗಳಲ್ಲಿರುವ ತೆಂಗಿನ ಸಸಿಗಳನ್ನು ಸರ್ವೆ ಮಾಡುವುದಕ್ಕೆ ಶಾಲಾ ಮಕ್ಕಳನ್ನು ಹಾಗೂ ಪ್ರೊಫೆಸರ್‌ಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ನೀವು ಆ ರೀತಿಯಾಗಿ ಉಪಯೋಗಿಸಿಕೊಂಡು, ಪ್ರತಿಯೊಂದು ಮರಕ್ಕೆ ಇಂಜೆಕ್ಟ್ ಆಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಿ. ಔಷಧಿಗಳನ್ನು ಸಿಂಪರಣೆ ಮಾಡುವುದರಿಂದ ಏನೂ ಕಂಟ್ರೋಲ್ ಆಗುವುದಿಲ್ಲ, ನಾನು ಸ್ಪ್ರೇ ಕೂಡ ಮಾಡಿಸಿರುತ್ತೇನೆ. ನೀರಾ ಇಳಿಸುವುದರಿಂದ ರೋಗ ಕಂಟ್ರೋಲ್ ಆಗುತ್ತದೆಂದು ನಾನು ಮೊನ್ನೆ ಮಾತನಾಡುವಾಗ ಕೂಡ ಹೇಳಿದ್ದೇನೆ. ನಾನು ತೆಂಗು ಮಂಡಳಿ ಅಧ್ಯಕ್ಷರ ಜೊತೆ ಮಾತನಾಡಿದ್ದೇನೆ, ಇದನ್ನು ಮಾಡುವುದಕ್ಕೆ ಅವಕಾಶ ಇದೆ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ದ್ರಾಕ್ಷಿಯನ್ನು ಬೆಳೆಯುತ್ತಾರೆ, ಅದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡಿರುವುದಿಲ್ಲ. ಸಾಂಗಲಿಯಲ್ಲಿ ಬೆಳೆಯುವ ದ್ರಾಕ್ಷಿಯನ್ನು ಕಂಟೈನರ್ ಮಾಡಿ ಏರೋಪ್ಲೇನ್ ಮೂಲಕ ಅಮೇರಿಕಾ ದೇಶಕ್ಕೆ ಕಳುಹಿಸಿಕೊಡುತ್ತಾರೆ. ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಬೆಳೆಯುವಂಥ ದ್ರಾಕ್ಷಿ ಪ್ರಪಂಚದಲ್ಲಿಯೇ ಉತ್ಕೃಷ್ಟವಾದ ದ್ರಾಕ್ಷಿ ಎಕ್ಸ್‌ಪೋರ್ಟ್ ಆಗುತ್ತಿದೆ. ಇದನ್ನು ನೀವು ಏನೂ ಮಾಡಿಲ್ಲ, ಇದಕ್ಕೆ ನೀವು ಕಂಟೈನರ್ ಮಾಡಿಸಿ. ಏಳು ದಿವಸ ಯಾವ ರೀತಿಯಾಗಿ ಗಿಡದಲ್ಲಿ ಹಣ್ಣು ಇರುತ್ತದೆ, ಅದೇ ರೀತಿಯಾಗಿ ಏಳು ದಿವಸ ಆ ಹಣ್ಣು ಕಂಟೈನರ್‌ನಲ್ಲಿ ಹಾಕಿದರೆ ಇರುತ್ತದೆ. ಆ ಕೆಲಸವನ್ನು ಸರ್ಕಾರ ಮಾಡಬೇಕು. ಇದಕ್ಕೆ ಉಪಯೋಗಿಸುವ ಔಷಧಿಗೆ ಹಣ ಬಹಳ ಖರ್ಚಾಗುತ್ತದೆ. ಮಾವು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ, ಈ ವರ್ಷ ಕಸಕ್ಕಿಂತ ಕಡಿಮೆಯಾಗಿದೆ. ಇದಕ್ಕೆ ನೀವು ಏನು ಮಾಡಿದಿರಿ, ಜ್ಯೂಸ್ ಫ್ಯಾಕ್ಟರಿ ಬಿಟ್ಟರೆ ಬೇರೆ ಏನು ಇಲ್ಲ. ನಮ್ಮ ರಾಜ್ಯದಲ್ಲಿ ಪ್ರೊಸೇಸಿಂಗ್ ಯೂನಿಟ್ ಏಕೆ ಆಗಬಾರದು. ನಿಮಗೆ ಆಗದಿದ್ದರೆ, ಸಹಕಾರ ಸಂಘಗಳ ಮೂಲಕ ಎನ್‌ಸಿಡಿಸಿ ಯಿಂದ ಲೋನ್ ಕೊಡುತ್ತಾರೆ. ನಾನೂ ಕೂಡ ಎನ್‌ಸಿಡಿಸಿಯಲ್ಲಿ ಇರುತ್ತೇನೆ, ಅಲ್ಲಿ

60 ವಿಷಯಗಳು ಬಂದರೆ, ಅದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಮೂರು ಸಬ್ಜೆಕ್ಟ್ ಇದ್ದರೆ ಉಳಿದದ್ದು ಮಹಾರಾಷ್ಟ್ರ ಹಾಗೂ ಗುಜರಾಜ್ ರಾಜ್ಯಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಬೇರೆ ರಾಜ್ಯದಂತೆ ನಾವು ಏಕೆ ಅಳವಡಿಸಿಕೊಳ್ಳುವುದಿಲ್ಲ, ನಮ್ಮಲ್ಲಿ ಇಚ್ಛಾಶಕ್ತಿ ಇಲ್ಲ. ಆದ್ದರಿಂದ ನಮ್ಮ ರಾಜ್ಯ ಹಿಂದೆ ಉಳಿದಿದೆ. ಹೋದವರ್ಷ ಆವರ್ತನಿಧಿ ಎಂದು 100 ಕೋಟಿ ರೂಪಾಯಿಗಳನ್ನು ಡಿಕ್ಲೇರ್ ಮಾಡಿದರು. ಅದು ಕೇವಲ 15 ಕೋಟಿ ರೂಪಾಯಿಗಳಿಗೆ ಮುಗಿದು ಹೋಯಿತು. ನನ್ನ ಸಲಹೆ ಏನೆಂದರೆ, ಎನ್‌ಸಿಡಿಸಿಯಿಂದ 100 ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಳ್ಳಿ, ಡೆವಲಪ್‌ಮೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಬೇಕು. ರಾಜ್ಯ ಮಾರಾಟ ಮಹಾ ಮಂಡಳದಲ್ಲಿ ಹಣವನ್ನು ಇಟ್ಟು ಯಾವ ಬೆಳೆಯ ಬೆಲೆ ಕಡಿಮೆಯಾಗುತ್ತದೆ ಅದನ್ನು ಪ್ರೊಕ್ಯೂರ್‌ಮೆಂಟ್ ಮಾಡಿ. ಜೋಳ, ಭತ್ತ, ರಾಗಿ, ಇರಬಹುದು, ಇದನ್ನು ಪೀಕ್ ಸೀಜನ್‌ದಲ್ಲಿ ಕೇಳುವವರೇ ಇಲ್ಲ. ಆದಕ್ಕಾಗಿ ಹಣವನ್ನು ಒದಗಿಸಿ ನೀವು ಷಾರ್ಟ್‌ಲೋನ್ ಕೊಟ್ಟರೆ ಅದನ್ನು ಮಾಡುವುದಕ್ಕೆ ಅವಕಾಶ ಇರುತ್ತದೆ. ಎನ್‌ಸಿಡಿಸಿಯಿಂದ 100-200 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಅವಕಾಶ ಇದೆ. ಇದನ್ನು ಉಪಯೋಗಿಸಿಕೊಂಡರೆ, ಇವತ್ತು ರಾಜ್ಯದ ರೈತ ಬೆಳೆದ ಬೆಳೆಗಳಿಗೆ ನಾವು ಯಾರೂ ಯೋಚನೆ ಮಾಡಬೇಕಾದ ಅವಶ್ಯಕತೆ ಇಲ್ಲವೆನ್ನುವ ಮಾತನ್ನು ಸರ್ಕಾರಕ್ಕೆ ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಸಣ್ಣ ನೀರಾವರಿ ಹಾಗೂ ಬಾರೀ ನೀರಾವರಿ ಬಗ್ಗೆ ಹೇಳಬೇಕಾದರೆ ಆ ಸಚಿವರು ಇಲ್ಲ, ಅವರು ಒಳ್ಳೆಯ ಮಂತ್ರಿಗಳು ಇವತ್ತು ನಮಗೆ ಸಿಕ್ಕಿರುತ್ತಾರೆ. ಅವರು ಒಂದು ಒಳ್ಳೆಯ ಪಾರದರ್ಶಕತೆಯನ್ನು ತಂದಿರುತ್ತಾರೆ. ನಾನು ಮೊನ್ನೆ ಒಂದು ಪ್ರಶ್ನೆ ಮೇಲೆ ಚರ್ಚೆ ಮಾಡಿದಾಗ 52 ಪರ್ಸೆಂಟ್ ಕಡಿಮೆಯಾಗಿರುತ್ತದೆ, ಅದೇ ಹಿಂದೆ 55 ಪರ್ಸೆಂಟ್ ಜಾಸ್ತಿ ಬರುತ್ತಿತ್ತು. ಮಂತ್ರಿಗಳು ಬದಲಾವಣೆಯಾಗಿವುದರೊಳಗಾಗಿ ಇದರ ಬಗ್ಗೆ ಕೂಡ ಚಿಂತನೆ ಹಾಗೂ ಯೋಜನೆಯನ್ನು ಮಾಡಬೇಕು. 100ಕ್ಕೆ 100ರಷ್ಟು ಹಣ ಉಳಿತಾಯವಾಗುತ್ತದೆ. ಸಣ್ಣ ನೀರಾವರಿ ಇಲಾಖೆಯಲ್ಲಿ ಎಷ್ಟು ಕೆಲಸವಾಗಬೇಕೋ ಅಷ್ಟು ಆಗುತ್ತಿಲ್ಲ. ಕಾವೇರಿ ನದಿಯಲ್ಲಿ ಹೂಳು ಎತ್ತಬಾರದೆಂದು ತಮಿಳುನಾಡಿನವರು ವಿರೋಧ ಮಾಡುತ್ತಾರೆ. ಇದು ಯಾವ ನ್ಯಾಯ? ಹೊಳೆ ನೀರು ಕುಡಿಯುವುದಕ್ಕೆ ದೊಣ್ಣೆ ನಾಯಕನ ಅಪ್ಪಣೆಯೇ? ಇದನ್ನು ಕೇಳುವುದಕ್ಕೆ ಅವರು ಯಾರು? ನೀವು ಯಾರ ಇಚ್ಛಾಶಕ್ತಿಯಿಂದ ಹೂಳು ಎತ್ತಿಸುವ ಕೆಲಸವನ್ನು ಮಾಡಬೇಕು. ಕೆರೆಗಳ ಒತ್ತುವರಿಯನ್ನು ಬಿಡಿಸಬೇಕು, ಆಗ ಸಣ್ಣ ನೀರಾವರಿ ಕೂಡ ಉಪಯೋಗಕ್ಕೆ ಬರುತ್ತದೆಂದು ಹೇಳುತ್ತೇನೆ. ಬಯಲುಸೀಮೆ ಅಭಿವೃದ್ಧಿ ಮಂಡಲಿ, ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ, ಈ ಯಾವ ಮಂಡಲಿಗೆ ಸರಿಯಾಗಿ ಹಣವನ್ನು ಇಟ್ಟಿರುವುದಿಲ್ಲ. ಕಳೆದ ಎರಡು-ಮೂರು ವರ್ಷಗಳ ಹಿಂದೆ ಮಲೆನಾಡು ಅಭಿವೃದ್ಧಿ ಮಂಡಲಿಗೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಒಂದೊಂದು ಕ್ಷೇತ್ರಕ್ಕೆ 3-4 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ, ಈ ಹಣವನ್ನು ಏಕೆ ಕೊಡುತ್ತೀರಿ? ಇದಕ್ಕೆ ಒಂದು ಸಂಸ್ಥೆ, ಅಧಿಕಾರಿ ಹಾಗೂ ಸಿಬ್ಬಂದಿವರ್ಗ ಏಕೆ, ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ರೈತರಲ್ಲಿ ಒಗ್ಗಟ್ಟು ಇದ್ದರೆ, ಈ ದೇಶದಲ್ಲಿ ಅವರು ಯಾವ ಸರ್ಕಾರವನ್ನೂ ಅಧಿಕಾರ

ಮಾಡುವುದಕ್ಕೆ ಬಿಡುತ್ತಿರಲಿಲ್ಲ. ಒಬ್ಬ ಸಣ್ಣ ಅಧಿಕಾರಿಗೂ ಕೂಡ ತೊಂದರೆಯಾದರೆ ಎಲ್ಲರೂ ಒಂದಾಗುತ್ತಾರೆ. ಅಧಿಕಾರಿಗಳಲ್ಲಿ ಕೂಡ ನಾನು ಒಂದು ನಿವೇದನೆ ಮಾಡಿಕೊಳ್ಳುತ್ತೇನೆ, ಇವತ್ತು ರಾಜ್ಯದಲ್ಲಿ ಬರಗಾಲ ಬಂದಿದೆ, ಒಂದು ದಿನದ ಸಂಬಳವನ್ನು ಕೊಡುವುದನ್ನು ಮಾಡಬೇಕು. ಇದನ್ನು ಮಾಡಿದರೆ ಜನರಿಗೆ ಒಂದು ಒಳ್ಳೆಯ ಸಂದೇಶ ಹೋಗುತ್ತದೆ. ಕೃಷಿಯಲ್ಲಿ ಆಧುನಿಕರಣ ಬರಬೇಕು, ಇವತ್ತು ಜಪಾನ್ ದೇಶದಲ್ಲಿ 80 ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ. ಬಡ್ಡಿ 2 ಪರ್ಸೆಂಟ್ ಮಾತ್ರ ಹಾಕುತ್ತಾರೆ. ಅಮೇರಿಕದಲ್ಲಿ 27 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ. ಅಲ್ಲಿ ಇಂಟ್ರೆಸ್ಟ್ ಕೇವಲ 6 ಪರ್ಸೆಂಟ್ ಇರುತ್ತದೆ. ಇನ್ಷೂರೆನ್ಸ್‌ಗೆ 90 ಪರ್ಸೆಂಟ್ ಹಣ ಸರ್ಕಾರ ಕೊಡುತ್ತದೆ. ನಾವು 100 ಕೋಟಿ ರೂಪಾಯಿಗಳನ್ನು ಇಟ್ಟರೂ ಕೂಡ ಅದೂ ಕೂಡ ಖರ್ಚಾಗಿರುವುದಿಲ್ಲ. ನಮ್ಮ ದೇಶದಲ್ಲಿ 6 ಪರ್ಸೆಂಟ್ ಯೂರಿಯಾ ಗೊಬ್ಬರಕ್ಕೆ ಸಬ್ಸಿಡಿ ಬಿಟ್ಟರೆ ಬೇರೆ ಯಾವುದಕ್ಕೂ ಸಬ್ಸಿಡಿ ಇರುವುದಿಲ್ಲ. 18 ಪರ್ಸೆಂಟ್ ಇಂಟ್ರೆಸ್ಟ್ ರೇಟ್‌ನ್ನು ನಾವು ಕೊಡಬೇಕಾಗಿರುವುದರಿಂದ, ಇದನ್ನು ಕಡಿಮೆ ಮಾಡುವ ಕೆಲಸವನ್ನು ಮಾಡಬೇಕು. ದೇಶದ ರೈತ ನಮ್ಮ ಬೆನ್ನೆಲುಬು ಎಂದು ಹೇಳುತ್ತೇವೆ, ಇವತ್ತು ಅವನಿಗೆ ಬೆನ್ನು ಇಲ್ಲ ಮೂಳೆ ಕೂಡ ಇಲ್ಲದಂತಾಗುತ್ತದೆ. ಇದನ್ನು ಸರ್ಕಾರ ಗಮನಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್‌ಮನ್ :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ : 3.00 ಗಂಟೆಗೆ ಸದನವು ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ: 1 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮತ್ತೆ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೇ, ಮುಂದಿನ ಸಾಲಿನಲ್ಲಿ ಯಾರೂ ಇಲ್ಲವೆಂದು ಆ ಕಡೆಯವರು ಹೇಳುತ್ತಿದ್ದರು, ಈಗ ವಿರೋಧ ಪಕ್ಷದ ಬೆಂಚಿನಲ್ಲಿ ಸದಸ್ಯರೇ ಇರುವುದಿಲ್ಲ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ನಾನು ಈ ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. ಇವತ್ತು ಎಲ್ಲರನ್ನೂ ಕೇಳಿರಿ. ಸದನ ನಡೆಸುವುದು ಬೇಡವೆಂದರೆ, ಅಡ್ಜರ್ನ್ ಮಾಡಿ, ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗೋಣ.

ಸುಮ್ಮನೆ, ಇತ್ತಕಡೆ ನಾವೂ ಇರುವಹಾಗೆ ಇಲ್ಲ, ಅತ್ತಕಡೆ ಅವರೂ ಇರುವಹಾಗಿಲ್ಲವೆಂದರೆ ಏಕೆ ಅಧಿವೇಶನ ನಡೆಸಬೇಕು?

ಶ್ರೀ ಯು.ಆರ್. ಸಭಾಪತಿ :— ಆ ಭಾಗದಲ್ಲಿ ವಿರೋಧ ಪಕ್ಷದ ನಾಯಕರೇ ಇಲ್ಲ. ವಿರೋಧಪಕ್ಷ ಎಂದು ಹೇಳಿದರೆ, ರುಂಡವಿಲ್ಲದ ಮುಂಡದ ಹಾಗೆ ಆಗಿದೆ.

ಒಬ್ಬ ಮಾನ್ಯ ಸದಸ್ಯರು :— ಆ ಕಡೆ ಯಾವ ಪಕ್ಷದವರೂ ಸಭೆಯಲ್ಲಿ ಇಲ್ಲ.

ಒಬ್ಬ ಮಾನ್ಯ ಸದಸ್ಯರು :— ಅವರಿಗೆ ಮೀಟಿಂಗ್ ಇದೆ, ಅದಕ್ಕಾಗಿ ಹೋಗಿದ್ದಾರೆ.

ಶ್ರೀ ಯು.ಆರ್. ಸಭಾಪತಿ :— ವಿರೋಧ ಪಕ್ಷ ರುಂಡವಿಲ್ಲದ ಮುಂಡವಾಗಿದೆ. ರುಂಡವೇ ಇಲ್ಲ, ವಿರೋಧ ಪಕ್ಷದ ನಾಯಕರೇ ಇಲ್ಲ. ಫ್ರಂಟ್ ಬೆಂಚ್‌ನಲ್ಲಿ ಪಕ್ಷಗಳ ನಾಯಕರೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಸಭೆಯಲ್ಲಿ ಇರಬೇಕು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಒಬ್ಬರು ಮಾತನಾಡುವವರು ಇದ್ದರೆ ಆ ಕಡೆಯವರೆಲ್ಲರೂ ಸದನದಲ್ಲಿ ಕುಳಿತುಕೊಳ್ಳಬೇಕು. ನಾವು ಮಾತನಾಡುತ್ತೇವೆ, ಎಲ್ಲಾ ಮಂತ್ರಿಗಳನ್ನು ಕರೆಸಿ. ಇವತ್ತೇನು ಸಭೆಯಲ್ಲಿ ಬೇಡಿಕೆಗಳನ್ನು ಮಂಡಿಸಿದ್ದಾರೆ, ಅವರೆಲ್ಲರನ್ನೂ ಕರೆಸಿ.

ಅಧ್ಯಕ್ಷರು :— ಪಾಟೀಲರೇ, ನನ್ನ ಪ್ರಶ್ನೆ ಇಷ್ಟೆ. ಎಲ್ಲಾ ಪಕ್ಷಗಳ ಸದಸ್ಯರಿಗೆ ನಾನು ಹೇಳುವುದು ಇಷ್ಟೆ. ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ಸಂದರ್ಭದಲ್ಲಿ ಎಷ್ಟು ಆಸಕ್ತಿ ತೋರಿಸುತ್ತಾರೋ, ಮಿಕ್ಕ ಟೈಮ್‌ನಲ್ಲೂ ಅದೇ ಆಸಕ್ತಿ ತೋರಿಸಬೇಕೆಂಬುದು ನನ್ನ ಅಪೇಕ್ಷೆ. ಎಲ್ಲಾ ಸಮಯದಲ್ಲೂ ಅವರು ಆಸಕ್ತಿಯನ್ನು ತೋರಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ತಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ನನಗೆ ತಿಳಿದಹಾಗೆ, ಸದಸ್ಯರು ಬರುವಾಗ ಮತ್ತು ಹೋಗುವಾಗ ಒಂದು ಸಹಿ ಮಾಡಿಸುವ ವ್ಯವಸ್ಥೆ ಮಾಡಬೇಕು. ಒಳಗೆ ಬರುವವರೂ ಸಹಿ ಮಾಡಿ ಒಳಗೆ ಬರಬೇಕು, ಹೊರಗೆ ಹೋಗುವವರು ಸಹಿ ಮಾಡಿ ಹೊರಗೆ ಹೋಗಬೇಕು. ಇದನ್ನು ಮಾಡಿದರೆ ಎಲ್ಲರಿಗೂ ಬಿಗಿಯಾಗುತ್ತದೆ. ಇದನ್ನು ನಾನು ಹೋದ ಸಲವೂ ಹೇಳಿದ್ದೇನೆ. ನಮ್ಮವರೂ ಯಾರೂ ಇರಲಿಲ್ಲ, ಮತ್ತೆ ನಾನೇ ಕ್ಷಮೆ ಕೇಳಿದ್ದೇನೆ.

ಅಧ್ಯಕ್ಷರು :— ಬಹುಶಃ ಅವರವರ ಕ್ಷೇತ್ರದ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಮಂತ್ರಿಗಳ ಹತ್ತಿರ ಹೋಗಿರಬಹುದು. ಆದೇತರಹ ಇಲ್ಲಿ ಸಭೆಯಲ್ಲೂ ಅವರುಗಳು ಆಸಕ್ತಿ ತೋರಿಸಬೇಕಲ್ಲಾ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಕ್ಷೇತ್ರದ ಕೆಲಸಗಳು ನಮಗೂ ಇವೆ. ನಾವೂ ಮಾಡಬೇಕಾಗುತ್ತದೆ. ಆದರೆ, ಇದು ಮಹತ್ವದ್ದು, ಇದು ಮುಗಿಸಿದ ಮೇಲೆ ಮಾಡಿಕೊಳ್ಳಬೇಕು. ಉಳಿದ ದಿನಗಳಲ್ಲಿ ನಾವು ವಾರಕ್ಕೆ ಎರಡು ಸಲ ಬರುತ್ತೇವೆ. ಆಗ ಕ್ಷೇತ್ರದ ಕೆಲಸಗಳನ್ನು ಮಾಡಿಕೊಳ್ಳಬಹುದು. ಈ ಹದಿನೈದು ದಿವಸಗಳಲ್ಲಿ, ಸದನದ ಮಹತ್ವವನ್ನೇ ನಾವು ತಿಳಿದುಕೊಳ್ಳದಿದ್ದರೆ ಹೇಗೆ? ಈಗ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಬಹಳ ಗಂಭೀರವಾದಂಥ ಚರ್ಚೆ ನಡೆಯಬೇಕು. ದುರ್ದೈವದಿಂದ ಈ ಪರಿಸ್ಥಿತಿ ಇದೆ. ನಮ್ಮವರು ಈ ರೀತಿ ಮಾಡುತ್ತಾ ಇರಲಿಲ್ಲ. ಆದರೆ, ಇವತ್ತು ಏಕೋ ಈ ರೀತಿಯಾಗಿದೆ. ಅತ್ತಕಡೆಯಲ್ಲಿ ಮೊದಲನೇ ಬೆಂಚಿನಲ್ಲಿ ಈಗಲೂ ಯಾರೂ ಇಲ್ಲ.

ಶ್ರೀ ಯು.ಆರ್. ಸಭಾಪತಿ :— ಬಿ.ಜೆ.ಪಿ.ಯವರ ಹತ್ತಿರ ಉಲ್ಲಾಸವೇ ಇಲ್ಲ. ವಿರೋಧಪಕ್ಷದ ನಾಯಕರು ಇಲ್ಲವೇ ಇಲ್ಲ. ಈಗ ಬಿ.ಜೆ.ಪಿ.ಯವರು ಒಂದೆರಡು ಜನ ಕುಳಿತುಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ನಮ್ಮವರಿಗೆ ಏನು ನಿರಾಶೆಯಾಗಿದೆ ಎಂದರೆ, ಏನು ಪ್ರಯತ್ನ ಮಾಡಿದರೂ ರೈತರ ಬಡ್ಡಿ ಮನ್ನಾ ಮಾಡಲಿಲ್ಲವೆಂದು ಮನಸ್ಸಿಗೆ ಬಂದಿದೆ.

ಶ್ರೀ ಯು.ಆರ್. ಸಭಾಪತಿ :— ಹೊರಗೆ ನಿತ್ಯ ಧರಣಿ ಮಾಡುತ್ತಿದ್ದಾರೆ. ಸದನದಲ್ಲಿ ಮಾತ್ರ ಚರ್ಚೆ ಮಾಡಲು ಬಿ.ಜೆ.ಪಿ.ಯವರು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಆದಕ್ಕಾಗಿ ನಮಗೆ ಬೇಜಾರಾಗಿದೆ. ಮಾನ್ಯ ಕೃಷಿ ಸಚಿವರು ಇಲ್ಲಿಯೇ ಇದ್ದಾರೆ, ಅವರೂ ರೈತರ ಮಗ.

ಶ್ರೀ ಯು.ಆರ್. ಸಭಾಪತಿ :— ಮಾತ್ತೆತ್ತಿದರೆ ಧರಣಿ ಮಾಡುತ್ತೀರಿ. ಅಪಚಾರವಾಯಿತು, ಅತ್ಯಾಚಾರವಾಯಿತು, ಭ್ರಷ್ಟಾಚಾರವಾಯಿತು ಎಂದು ಹೇಳುತ್ತೀರಿ. ಸದನದಲ್ಲಿ ನಿಮ್ಮ ಸೌಂಡೇ ಕೇಳುವುದಿಲ್ಲ.

ಅಧ್ಯಕ್ಷರು :— ಇನ್ನು ಮುಂದೆಯಾದರೂ ಸಹ ಮಾನ್ಯ ಸದಸ್ಯರುಗಳು, ಪ್ರಶ್ನೋತ್ತರ ಮತ್ತು ಶೂನ್ಯವೇಳೆಯಲ್ಲಿ ಎಷ್ಟು ಆಸಕ್ತಿ ತೆಗೆದುಕೊಳ್ಳುತ್ತಾರೋ ಅಷ್ಟೇ ಆಸಕ್ತಿ, ಲಂಚ್ ಹವರ್ ಆದಮೇಲೆಯೂ ತೆಗೆದುಕೊಂಡು, ಬರಬೇಕೆಂದು ನನ್ನ ವಿನಂತಿ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಅಧ್ಯಕ್ಷರೇ, ನಮ್ಮ ಪುಣ್ಯ ಎಂದು ಅಂತ ಕಾಣುತ್ತದೆ. ಯಾವತ್ತೂ ಜ್ಞಾಪಕಕ್ಕೆ ಬಾರದೇ ಇದ್ದವರು

ನಾವು ಇವತ್ತು ತಮ್ಮ ಜ್ಞಾಪಕಕ್ಕೆ ಬಂದಿದ್ದೇವೆ. ನಮಗೆ ಬಹಳ ಅದೃಷ್ಟ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತುಂಬಾ ಸಂತೋಷ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಪ್ರಥಮವಾಗಿ ವಂದಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಸುಮಾರು 24 ಇಲಾಖೆಗಳ ಬೇಡಿಕೆಗಳನ್ನು ಇಟ್ಟಿದ್ದಾರೆ. ಸರ್ಕಾರ ಏನು ಬೇಡಿಕೆಗಳನ್ನು ಮಂಡಿಸಿದೆ ಅದನ್ನು ನಾನು ಸ್ವಾಗತಿಸುತ್ತಾ, ಇಲ್ಲಿ ಕಂಡಂತಹ ಕೆಲವು ನ್ಯೂನತೆಗಳು ಮತ್ತು ಸರ್ವೇಸಾಮಾನ್ಯವಾಗಿ ಜನತೆಗೆ ಆಗಬೇಕಾದಂತಹ ಕೆಲಸದಲ್ಲಿ ನಾವು ಎಲ್ಲಿ ಎಡವಿದ್ದೇವೆ ಎನ್ನತಕ್ಕಂಥ ವಿಚಾರದಲ್ಲಿ ಮಾತನಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೇ, ನಾನು ಬೆಳಗ್ಗೆಯಿಂದ ನೋಡುತ್ತಿದ್ದೇನೆ, ಇದನ್ನು ಸಭೆಯ ಗಮನಕ್ಕೆ ತರಬೇಕೆಂದು ಇದ್ದೆ. ಬೇಡಿಕೆಗಳು ಮಂಡನೆಯಾಗಿರತಕ್ಕಂಥಾದ್ದು ಕೇವಲ 11. ಇನ್ನು ಉಳಿದಿರತಕ್ಕಂಥ 24 ಬೇಡಿಕೆಗಳು ಏನು ಇವೆ ಅವುಗಳನ್ನು ಇನ್ನೂ ಮಂಡಿಸಿಲ್ಲ.

ಅಧ್ಯಕ್ಷರು :— ನಾಳೆ ಮಂಡಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾಳೆ ಮಂಡಿಸಿ. ಆದರೆ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸದಸ್ಯರು ಮಾತನಾಡುವಾಗ 26 ಇಲಾಖೆಗಳು ಎಂದು ಹೇಳಿದರು. ಈಗ ನಮ್ಮ ಮುಂದೆ ಮಂಡಿಸಿರುವುದು ಕೇವಲ 11 ಇಲಾಖೆಗಳು ಮಾತ್ರ. ಈಗ ಮಂಡಿಸಿರುವ ಇಲಾಖೆಗಳ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು :— ಈಗ ಏನು ಬೇಡಿಕೆಗಳು ಸದನದ ಮುಂದೆ ಮಂಡಿಸಿದ್ದೇವೆ ಅವುಗಳ ಬಗ್ಗೆ ಮಾತ್ರ ಮಾತನಾಡಿ, ನಾಳೆ ಎಲ್ಲಾ ಬೇಡಿಕೆಗಳನ್ನು ಮಂಡಿಸುತ್ತೇವೆ, ಆಗ ಎಲ್ಲಾ ಬೇಡಿಕೆಗಳ ಮೇಲೂ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅವುಗಳೆಲ್ಲವನ್ನೂ ಮಂಡಿಸುವುದಾದರೆ ನಮ್ಮದೇನೂ ತಕರಾರು ಇಲ್ಲ. ಸಾರಾಸಗಟಾಗಿ ಮಾಡಬಹುದು. ಮಂತ್ರಿಗಳೇ ಇಲ್ಲ. ಸರಿ, ಅಧ್ಯಕ್ಷರೇ,

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಎಲ್ಲಾ ಬೇಡಿಕೆಗಳನ್ನು ಒಮ್ಮೆಲೇ ಮಂಡಿಸಿದರೆ ಜನರಲ್ ಆಗಿ ಎಲ್ಲಾ ಸದಸ್ಯರು ಮಾತನಾಡುವುದಕ್ಕೆ ಅನುಕೂಲ ಆಗುತ್ತದೆ. ಇವತ್ತು ಮಾತನಾಡಿದವರಿಗೆ ನಾಳೆ ಮತ್ತೊಮ್ಮೆ ಅವಕಾಶ ಕೊಡುತ್ತೀರಾ? ಇಲ್ಲ. ಏಕೆಂದರೆ ನಮ್ಮ ನಾಯಕರು ನನಗೆ ಸಹಕಾರದ ಬಗ್ಗೆ ಮಾತನಾಡಲು ಹೇಳಿದ್ದಾರೆ. ಇವತ್ತು ಸಹಕಾರ ಇಲಾಖೆ ಇಲ್ಲ.

ಅಧ್ಯಕ್ಷರು :— ನಾಳೆ ಎಲ್ಲಾ ಬೇಡಿಕೆಗಳನ್ನು ಮಂಡಿಸುತ್ತೇವೆ. ಯಾರು ಯಾವ ವಿಷಯದ ಮೇಲಾದರೂ ಮಾತನಾಡಲಿ.

ಶ್ರೀ ಎ.ಎಸ್. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳುವುದು ನಿಜ. ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ನಮ್ಮ ಮುಂದೆ ಮಂಡಿಸಿಲ್ಲ, ಆದರೂ ಇಲ್ಲಿ ಸೇರಿಸಿದ್ದಾರಲ್ಲಾ. ಅದರ ಮೇಲೆ ಹೇಗೆ ಮಾತನಾಡುವುದು ಎನ್ನತಕ್ಕಂಥಾದ್ದು ನನ್ನ ಚಿಂತೆ ಇತ್ತು.

ಅಧ್ಯಕ್ಷರು :— ನಾನು 1972ನೇ ಇಸವಿಯಲ್ಲಿ ವಿಧಾನ ಪರಿಷತ್ತಿನಲ್ಲಿದ್ದಾಗ ಅಲ್ಲಿ ಏನು ಮಾಡುತ್ತಿದ್ದರೆಂದರೆ ಯಾವ ಯಾವ ಸದಸ್ಯರಿಗೆ ಯಾವ ಯಾವ ಸಬ್ಜೆಕ್ಟ್ ಮೇಲೆ ಆಸಕ್ತಿ ಇರುತ್ತದೆಯೋ ಅವರು ಆ ವಿಷಯದ ಮೇಲೆ ಮಾತನಾಡುತ್ತಿದ್ದರು. ಆ ಪಾರ್ಟಿಯವರು ಸೆಲೆಕ್ಟ್ ಮಾಡಿ ಕೊಟ್ಟಿರುತ್ತಾರೆ ಅದು ಮಾಡಬೇಕು. ಪ್ರತಿಯೊಬ್ಬರೂ ಎಲ್ಲಾ ವಿಷಯಗಳ ಮೇಲೆ ಮಾತನಾಡುವುದಕ್ಕೆ ಆಗುತ್ತದೆಯೇ? ಆಗುವುದಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ :— ತಾವು ಹೇಳುವುದು ನಿಜ. ಹಿಂದೆ ಒಂದು ಪರಿಪಾಠ ಇತ್ತು ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಯಾರ್ಯಾರಿಗೆ ಪರಿಣತೆ ಇದೆ ಅವರು ಮಾತ್ರ ಆ ಇಲಾಖೆ ಬಗ್ಗೆ ಮಾತನಾಡುತ್ತಿದ್ದರು. ಅದನ್ನು ನಾನು ಒಪ್ಪುತ್ತೇನೆ. ಪಾರ್ಲಿಮೆಂಟ್‌ನಲ್ಲಿಯು ಕೂಡ ಅದೇ ಪ್ರಾಕ್ಟೀಸ್ ಇದೆ.

ಅಧ್ಯಕ್ಷರು :— ಇಲ್ಲೂ ಸಹ ದೇವರಾಜ ಅರಸುರವರ ಕಾಲದಲ್ಲಿ ಒಂದು ಸ್ಟಡಿ ಟೀಮ್ ಎಂದು ಮಾಡಿ 12 ಜನರು ಯಾರ್ಯಾರು ಯಾವ ಯಾವ ವಿಷಯದ ಮೇಲೆ ಆಸಕ್ತಿ ಇದೆಯೋ ಅವರು ಆ ವಿಷಯದ ಮೇಲೆ ಮಾತನಾಡುತ್ತಿದ್ದರು.

ಶ್ರೀ ಎ.ಎಸ್. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಆ ಪರಿಪಾಠವನ್ನು ತಮ್ಮ ಅಧ್ಯಕ್ಷತೆಯಲ್ಲಿ ತರಬೇಕೆಂದು ನಮ್ಮ ಮನವಿ. ಏಕೆಂದರೆ ಎಲ್ಲರೂ ಎಲ್ಲವನ್ನೂ ಓದಿರುವುದಿಲ್ಲ. ಎಲ್ಲಾ ವಿಚಾರದಲ್ಲಿ ಎಲ್ಲರಿಗೂ ಮಮತೆ ಇರುವುದಿಲ್ಲ. ಅದನ್ನು ತಾವು ಜಾರಿಗೆ ತಂದರೆ ಹೆಚ್ಚಿನ ವಿಷಯ ಮಂಥನವಾಗುತ್ತದೆ. ಹೆಚ್ಚಿನ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಆಗುತ್ತದೆ. ನನ್ನ ಮಿತ್ರರು ಮೂರು ದಿನ ಬಾವಿಗೆ ಸೇರಿದ್ದರು. ಆಗ ನನಗೆ ಸ್ವಲ್ಪ ಸಮಯ ಸಿಕ್ಕಿತು, ಆ ಸಮಯದಲ್ಲಿ ನಮ್ಮ ಸ್ಪೀಕರ್ ಕೆಳಗಡೆ ಕಾರ್ಯದರ್ಶಿಗಳು ಏನು ಇದ್ದಾರೆ ಅವರ ಪಕ್ಕದಲ್ಲಿ ಕೆಲವು ಪುಸ್ತಕಗಳನ್ನು ಇಟ್ಟಿದ್ದಾರೆ. ಮೇನ್ ಪಾರ್ಲಿಮೆಂಟರಿ ಪ್ರಾಕ್ಟೀಸ್, ಕೌಲ್, ಶಕ್ಧರ್ ಪ್ರಾಕ್ಟೀಸ್ ಅವರ ಪುಸ್ತಕಗಳನ್ನು ನಾನು ಗ್ಲ್ಯಾನ್ಸ್ ಮಾಡುತ್ತಾ ಹೋದೆ, ಆಗ ನನಗೆ ಏನು ಅನುಭವ ಆಯಿತು ಅಂದರೆ ನಾವು ಅನೇಕ ಸಲ ಇಲ್ಲಿ ಏನು ಡಿಬೇಟ್ ಮಾಡುತ್ತಿದ್ದೇವೆ, ಆ ಹೌಸ್ ಆಫ್ ಲಾರ್ಡ್ಸ್ ಹೌಸ್ ಆಫ್ ಕಾಮನ್ಸ್, ಪಾರ್ಲಿಮೆಂಟರಿ ಪ್ರೊಸೀಜರ್‌ನಲ್ಲಿ ಅವರು ಹೇಗೆ ಮಾಡುತ್ತಿದ್ದಾರೆ ನಾವು ಹೇಗೆ ಮಾಡುತ್ತಿದ್ದೇವೆ, ಎನ್ನುವ ಬಗ್ಗೆ ನನ್ನ ಮನಸ್ಸಿಗೆ ಸ್ವಲ್ಪ ಕ್ಲ್ಯಾಷ್ ಆಯಿತು. ಏಕೆ ಆ ಪದ್ಧತಿಯನ್ನು ಇಲ್ಲಿ ತರಲಿಲ್ಲ ಎಂದು

ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ನಾನು ನೊಂದುಕೊಂಡೆ, ಬಹುಶ: ಅವರಿಗೂ ಗೊತ್ತಿದೆ. ನಾನು ಹೇಳಬೇಕಾದುದ್ದು ಏನೂ ಇಲ್ಲ, ಇದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಮಗೆ ಗೊತ್ತಿದ್ದು ಸಹ ತಪ್ಪು ಮಾಡಿದಾಗ ಅವರನ್ನು ಏನು ಅಂತ ಕ್ಷಮಿಸಬೇಕು? ಇದು ನನ್ನ ಮನಸ್ಸಿಗೆ ಬಂತು. ಈ 24 ಇಲಾಖೆಗಳ ಬಗ್ಗೆ ಒಟ್ಟಿಗೆ ಭಾಷಣ ಮಾಡುವುದಕ್ಕೆ, ಚರ್ಚೆ ಮಾಡುವುದಕ್ಕೆ ಇರುವಂಥ ಪರಿಸ್ಥಿತಿ ಬಂದಿರುವುದು ಯಾವ ಒಂದು ಪರಿಪಾಠ ಎಂಬುದು ನನ್ನ ಮನಸ್ಸಿಗೆ ಬಂತು. ತಾವು ಇವತ್ತು ಇದನ್ನು ಜ್ಞಾಪಿಸಿಕೊಂಡಿದ್ದೀರಿ ಬಹಳ ಒಳ್ಳೆಯದು. ಅದನ್ನು ಜಾರಿಗೆ ತನ್ನಿ ಎನ್ನತಕ್ಕಂಥಾದ್ದು ನನ್ನ ಪ್ರಾರ್ಥನೆ. ಮಾನ್ಯ ಅಧ್ಯಕ್ಷರೇ, ನಾವು ನೂರಕ್ಕೆ ಎಂಬತ್ತರಷ್ಟು ಜನ ಏನು ಇದ್ದೇವೆ ನಾವು ಹೆಗ್ಗಳಿಕೆಯಿಂದ ಹೇಳುವಂತಹ ಒಂದು ಮಾತು ಏನೆಂದರೆ ನಾವೆಲ್ಲಾ ರೈತರಿಂದ ಚುನಾಯಿತರಾಗಿರತಕ್ಕಂಥ ಸದಸ್ಯರು. ನಾವು ರೈತರಿಂದ ಚುನಾಯಿತರಾಗಿ ಬಂದಿರತಕ್ಕಂಥ ಸದಸ್ಯರಾಗಿದ್ದೇವೆ. ರೈತರ ಆಶೀರ್ವಾದಿಂದ ಬಂದಿರತಕ್ಕಂಥ ಸದಸ್ಯರು ಅಂದರೆ ನಾವು. ಈ ಡೆಮಾಕ್ರಸಿಯಲ್ಲಿ ಒಂದು ಪ್ರಿನ್ಸಿಪಲ್ ಇದೆ. ಮೆಜಾರಿಟಿ ಯಾರು ಇರುತ್ತಾರೋ ಅವರು ಅಧಿಕಾರ ಮಾಡುವುದು ಅದನ್ನು ಮೈನಾರಿಟಿ ಯಾರು ಇರುತ್ತಾರೋ ಅವರು ಒಪ್ಪಿಕೊಳ್ಳುವುದು ಎಂದು. ಅವರು ಒಪ್ಪಿಕೊಳ್ಳುತ್ತಾರೆ. ಅವರು ಒಪ್ಪಿಕೊಳ್ಳುತ್ತಾರೆ. ಏತಕ್ಕೆಂದರೆ, ಸಂಖ್ಯೆ ಕಡಿಮೆ ಇದೆ. ಆದರೆ ಇಲ್ಲಿ 80 ಪರ್ಸೆಂಟ್ ಇರತಕ್ಕಂಥ ವ್ಯವಸಾಯಗಾರರು ನಾವು ಇದ್ದು ಸಹ ಅನೇಕ ವಿಚಾರಗಳಲ್ಲಿ ಈ ವ್ಯವಸಾಯಗಾರ ಇಲ್ಲಿ ಬಡಪಾಯಿಯಾಗಿ ಕುಳಿತಿದ್ದಾರೆ. ಬಹಳಷ್ಟು ತಿರಸ್ಕಾರವಾಗಿರತಕ್ಕಂಥವರು ಅಂದರೆ ಈ ಬಡ ರೈತ. ಈ ಬಡರೈತನ ಇಲಾಖೆ ಅಂದರೆ ನಮ್ಮ ಕೃಷಿ ಇಲಾಖೆ. ನಾನು ಆ ಕೃಷಿ ಇಲಾಖೆಯ ವಿಷಯ ಸಮಿತಿ ವರದಿಯನ್ನು ನೋಡಿದೆ. ಅವರು ವಿಷಯ ಸಮಿತಿಯಲ್ಲಿ ಏನೇನು ಬರೆದಿದ್ದಾರೆಂದು ನೋಡಿದಾಗ ಬಹಳ ಒಳ್ಳೆಯ ಸಲಹೆಗಳನ್ನು ಆ ಸಮಿತಿಯ ಸದಸ್ಯರು ಕೊಟ್ಟಿದ್ದಾರೆ. ಇದು ಶಿಫಾರಸ್ಸಾಗಿ ಉಳಿದರೆ ಪ್ರಯೋಜನವಿಲ್ಲ. ಇದು ಜಾರಿಗೆ ಬರಬೇಕು. ಆ ಸಮಿತಿ ಮಾಡಿದ ಉದ್ದೇಶವೇನು. ಇಷ್ಟು ಜನ ನಾವು ಕುಳಿತು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಇಷ್ಟು ಜನ ಕೂಡ ಸಲಹೆ ಕೊಡುವುದಕ್ಕೆ ಬರುವುದಿಲ್ಲ ಇಷ್ಟು ಜನ ತಲೆಕೆಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಕೆಲವು ಮಂದಿ ವಿಚಾರ ತಿಳಿದುಕೊಂಡು ಹೇಳಲಿ ಅಂತ ಹೇಳಿ ಆ ಒಂದು ವಿಷಯ ಸಮಿತಿಯನ್ನು ತಾವು ಮಾಡಿದಿರಿ. ಆ ಪ್ರಕಾರ ಆ ಸಮಿತಿಯಲ್ಲಿದ್ದಂತಹ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಆ ಸಮಿತಿ ವರದಿ ಎಲ್ಲೂ ಚರ್ಚೆಯಾಗುವುದಿಲ್ಲ. ಒಂದು ದಿನ ಆ ಸಮಿತಿಯ ಅಧ್ಯಕ್ಷರುಗಳು ಮಂಡನೆ ಮಾಡಿದ್ದೇವೆಂದು ಹೇಳುವುದು ಬಿಟ್ಟರೆ ಮುಂದೆ ಸರ್ಕಾರ ಏನು ಮಾಡುತ್ತೀರಿ ಎಂದು ಒಬ್ಬರೂ ಹೇಳಲಿಲ್ಲ. ಇದು ಆಗಬಾರದು. ಆ ಸಮಿತಿಯ ಸಲಹೆಗಳನ್ನು ತರ್ಕಬದ್ಧವಾಗಿ ಇಲ್ಲಿ ಚರ್ಚೆಯಾಗಬೇಕು. ಅಲ್ಲಿ ಇರತಕ್ಕಂಥ ನ್ಯೂನ್ಯತೆಗಳ ಬಗ್ಗೆ ಚಿಂತನೆ ಮಾಡಬೇಕೆಂಬುದು ನನ್ನ ಮನವಿ. ನನಗೆ

ತಿಳಿದ ಮಟ್ಟಿಗೆ ನಮ್ಮ ಅಸ್ಲೆಂಬಿಯಲ್ಲಿ ಎಲ್ಲೂ ಯಾವ ವಿಷಯದ ಬಗ್ಗೆ ಈ ವರದಿಗಳ ಮೇಲೆ ಚರ್ಚೆಯಾಗಿದ್ದು ನಾನು ಕಂಡಿಲ್ಲ. ನನಗಿಂತ ಸೀನಿಯರ್ಸ್ ಇದ್ದಾರೆ. ನನಗಿಂತ ಹೆಚ್ಚು ವಿಚಾರ ತಿಳಿದುಕೊಂಡ ಸದಸ್ಯರು ಇದ್ದಾರೆ. ಎಲ್ಲಿ ಇಂತಹ ವರದಿಗಳು ಚರ್ಚೆಯಾಗಿವೆ? ವರದಿ ಮಂಡಿಸಬೇಕು ಮಂಡಿಸುತ್ತಾರೆ. ಅವರು ವರದಿ ಕೊಡಬೇಕು ಕೊಡುತ್ತಾರೆ. ಕಡೆಗೆ ಪರಿಹಾರ ಏನು? ಆ ವರದಿಯಲ್ಲಿ ಬರುವ ಸಲಹೆಗಳು ಕೇವಲ ವಿರೋಧ ಪಕ್ಷದಿಂದ ಬರುವುದಿಲ್ಲ. ಎಲ್ಲಾ ಪಕ್ಷದ ಸದಸ್ಯರು ಸಹ ಆ ಸಮಿತಿಯಲ್ಲಿರುತ್ತಾರೆ. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಖಾಯಿಲೆ ಅಂದರೆ ಖಾಯಿಲೆಯೇ. ಅದು ಎಲ್ಲರಿಗೂ ಅಪ್ಲೆಯಾಗುತ್ತದೆ. ಹಿಂದೆ ಪ್ಲೇಗು ಮತ್ತು ಕಾಲರಾ ಬರುತ್ತಿತ್ತು. ಜನತಾ ಪಾರ್ಟಿಯವರು ಕಾಲರಾ ಬರಬೇಡ, ಇವರು ಜನತಾದಳ, (ಯು) (ಎಸ್) ಕಾಂಗ್ರೆಸ್ಸಿನವರು ಎಂದು ಆ ಖಾಯಿಲೆ ಬಿಟ್ಟುಬಿಡುತ್ತಿತ್ತು ಏನು? ಖಾಯಿಲೆ ಬಂದರೆ ಇಡೀ ಊರಿಗೆ ಬರುತ್ತಿತ್ತು. ಈಗ ಬಂದಿರುವ ಪರಿಸ್ಥಿತಿಯು ಅದೇ ಆಗಿದೆ. ಅನೇಕ ವಿಚಾರಗಳಲ್ಲಿ ನಾವು ಪರಿಹಾರ ಕಂಡುಕೊಳ್ಳುವುದರಲ್ಲಿ ಎಡವಿದ್ದೇವೆ ಎನ್ನುವುದನ್ನು ನೋಡುತ್ತಿದ್ದೇವೆ. ನಾನು ನಮ್ಮ ಕೃಷಿ ಇಲಾಖೆ ಬಗ್ಗೆ ತಮಗೆ ಹೇಳುವುದಾದರೆ ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಕಾಳಜಿ ಇದೆ. ಈ ಇಲಾಖೆಯಲ್ಲಿ ಏನಾದರೂ ಸ್ವಲ್ಪ ನ್ಯಾಯ ದೊರಕಿಸಿಕೊಡಬೇಕೆನ್ನುವ ಮನಸ್ಸು ಇದೆ. ಆದರೆ ಸನ್ನಿವೇಶ ಸಂದರ್ಭಗಳು ಇವತ್ತಿನ ಪರಿಸ್ಥಿತಿಯಲ್ಲಿ ಅವರು ಅದನ್ನು ಮಾಡಲಿಕ್ಕೆ ಆಗುತ್ತಿಲ್ಲ. ನಾನು ಸಂತೋಷ ಪಟ್ಟ ವಿಚಾರ ಅಂದರೆ ಬೆಂಗಳೂರಿನಲ್ಲಿ ಮೆಕ್ಕೆ ಜೋಳದ ಬಗ್ಗೆ ಅವರು ಒಂದುಸಣ್ಣ ಪ್ರದರ್ಶನ ಇಟ್ಟಿದ್ದರು. ಬಹುಶಃ ತಾವೆಲ್ಲಾ ನೋಡಿದ್ದೀರಿ ಎಂದು ಕಾಣುತ್ತದೆ. ನಾನೂ ಹೋಗಿದ್ದೆ. ಆ ಮೆಕ್ಕೆಜೋಳವನ್ನು ಹೈದರಾಬಾದ್ ಕರ್ನಾಟಕದ ಶಾಸಕರು ಗೋವಿನ-ಜೋಳ, ಹಸುವಿನ ಜೋಳ ಅಂತಿದ್ದರು. ಅಂತಹ ಮೆಕ್ಕೆಜೋಳವನ್ನು ಕೊಳ್ಳುವವರಿಲ್ಲದೆ ದುಡ್ಡು ಕೊಡುವವರಿಲ್ಲದೆ ಇಲ್ಲಿ ನಾವು ಅದಕ್ಕೆ ದುಡ್ಡು ಕೊಡದೆ ಮೊನ್ನೆವರೆಗೂ ಗಲಾಟೆ ಮಾಡಿಕೊಂಡು ನಾವಿಲ್ಲಿ ಒದ್ದಾಡಿದೆವು. ಅಲ್ಲಿ ಹೋಗಿ ನೋಡಿದಾಗ, ಏನು ಅದ್ಭುತ; ಮೆಕ್ಕೆಜೋಳದಿಂದ ಏನೇನು ತಯಾರು ಮಾಡಬಹುದು ಆದರಿಂದ ರೈತನಿಗೆ ಎಲ್ಲೆಲ್ಲಿಂದ ಹಣ ಬರುತ್ತದೆ ಎಂಬುದು ನಮಗೆಲ್ಲಾ ಗೊತ್ತಾಯಿತು. You cannot believe it. ಮೆಕ್ಕೆಜೋಳವನ್ನು ಇವತ್ತು ಬೀರ್‌ನಲ್ಲಿ ಉಪಯೋಗಿಸುತ್ತಿದ್ದಾರೆ. I am thankful to our Agricultural Minister ಅದನ್ನು ಅಲ್ಲಿ ಉಪಯೋಗಿಸುತ್ತಾರೆ ಅಂದರೆ Agriculture is industrialised ಅದಕ್ಕೆ ಪದೇ ಪದೇ ನಾನು ಒಂದು ಮಾತು ಒತ್ತಿ ಹೇಳುತ್ತಿರುತ್ತೇನೆ. ವಿಶ್ವೇಶ್ವರಯ್ಯನವರು ಒಂದು ಮಾತು ಹೇಳುತ್ತಿದ್ದರು. Either Industrialise or perish ಅದು ಅವತ್ತಿನದು. ಇವತ್ತು ನಾವು ಇನ್ನೊಂದು ಸ್ಲೋಗನ್ ಹೇಳಬೇಕಾಗಿದೆ. You industrialise the agriculture; otherwise there is no future. You treat the agriculture as industry; otherwise there is no future. ಸುಮ್ಮನೆ ಡಬ್ಲ್ಯುಟಿಒ ಬಂತು ಅದು

ಬಂತು ಇದು ಬಂತು ಗ್ಲೋಬಲೈಜೇಷನ್ ಬಂದುಬಿಟ್ಟಿದೆ, ನಮಗೆ ಬೆಲೆ ಸಿಕ್ಕುತ್ತಾ ಇಲ್ಲ ಎಂದು ಹೇಳುವುದರಲ್ಲಿ ಅರ್ಥವೇ ಇಲ್ಲ. ಈಗ ಪ್ರತಿಯೊಬ್ಬರ ಮನೆಗೂ ಕೊರಿಯಾ ಬಂದ್ಯತೆ, ಜಪಾನ್ ಬಂದ್ಯತೆ, ಚೈನಾ, ಯುಕೆ, ಯುಎಸ್‌ಎ ಎಲ್ಲಾ ತಮ್ಮ ಮನೆಯೊಳಗೆ ಸೇರಿಕೊಂಡಿವೆ. ನನ್ನ ಮನೆಯಲ್ಲಂತೂ ಇದೆಪ್ಪ, ಎಲ್ಲರ ಮನೆಯಲ್ಲೂ ಇರಬಹುದೆಂದುಕೊಂಡಿದ್ದೇನೆ. ಅಂದರೆ ಅಲ್ಲಿಂದ ಬಂದಂತಹ ಪ್ರಾಡಕ್ಟ್ಸ್ ಎಲ್ಲರ ಮನೆ ಹೊಕ್ಕಿವೆ. ಟಿವಿಗಳಲ್ಲಿ ನಾವು ನೋಡುತ್ತಿದ್ದೇವೆ, ನೀವು ಬೇಡ ಅಂದರೂ ನಮ್ಮ ಮೈಂಡ್‌ಗಳ ಮೇಲೆ ಪರಿಣಾಮ ಬೀರುತ್ತವೆ. ಅವು ಇಂತಹ ಪರಿಸ್ಥಿತಿ ಇರುವಾಗ ಈ ಕೃಷಿ ವಲಯದಲ್ಲಿ ಯಾವ ರೀತಿ ಕಾಂಪಿಟೇಷನ್ ಇಟ್ಟುಕೊಳ್ಳಬೇಕೆಂಬ ಬಗ್ಗೆ ಸ್ವಲ್ಪ ಚಿಂತನೆ ಹರಿಸಬೇಕಾಗುತ್ತದೆ. ಯಾರ ಮೇಲೋ ಜವಾಬ್ದಾರಿ ಹಾಕುವುದಲ್ಲ. ಇದು ನಮ್ಮಿಂದ ಆಗುವುದಿಲ್ಲರಿ, ಇದು ಸೆಂಟ್ರಲ್ ಗವರ್ನಮೆಂಟ್ ಮಾಡಬೇಕೆಂದು ಹೇಳುವ ಬದಲು ಇವತ್ತು ಇನ್-ಎಸ್ಕೇಪಬಲ್. ನೀವು ಕಾಂಪಿಟೇಟೀವ್ ವರ್ಲ್ಡ್‌ನಲ್ಲಿ ಸರ್ವೈವ್ ಆಗಲೇಬೇಕು. ಆದರೆ ಈ ಪ್ರೊಟೆಕ್ಟೆಡ್ ಎಕಾನಮಿಯೊಳಗೆ ಅದು ಸಾಧ್ಯವೇ ಇಲ್ಲ. ನನಗೊಂದು ದೃಷ್ಟಾಂತ ನೆನಪಿಗೆ ಬರುತ್ತಿದೆ. ಒಬ್ಬ ರೈತನ ಹತ್ತಿರ ಒಂದು ಕುರಿ ಇತ್ತಂತೆ, ಯಾವಾಗಲೂ ಕಟ್ಟಿಕೊಂಡೇ ಮೇಯಿಸುತ್ತಿದ್ದನಂತೆ. ಅದು ರೈತನನ್ನು ಬೈಯುತ್ತಿತ್ತು. ಏನು ಈ ಪಾಪಿಮುಂಡೇಮಗ ನನ್ನನ್ನು ಆಚೆಗಡೆ ಬಿಡುವುದಿಲ್ಲವಲ್ಲಾ, ಇಲ್ಲೇ ಕಟ್ಟಿಕೊಂಡು ಸಾಯಿಸುತ್ತಾನೆ ನನಗೆ ಅಂತ. ಒಂದು ದಿನ ಏನು ಮಾಡಿತು, ರೈತನನ್ನು ಕಾಡಿಬೇಡಿ ಹಗ್ಗ ಕಳಚಿಕೊಂಡು ಹೋಯಿತು. ಕಾಡಿನ ಕಡೆ ಹೋದರೆ ಅದನ್ನು ಮೇಯಲು ಬಿಟ್ಟವೇನು ಪ್ರಾಣಿಗಳು? ಹುಲಿ ಟಗರು-ಪಗರು ಇವೆಲ್ಲಾ ಬಂದು ಈ ಕುರಿಯನ್ನು ಅಡ್ಡಾಡಿಸಿಬಿಟ್ಟವು. ಕೊನೆಗೆ ಅಯ್ಯೋ ನನ್ನ ಕಟ್ಟಿಕೊಂಡೇ ಮೇಯ್ಸಪ್ಪ, ಬಿಡಬೇಡ ನನ್ನನ್ನು ಎಂದು ರಿಕ್ವೆಸ್ಟ್ ಮಾಡಿಕೊಂಡಿಂತೆ, ಅದು ರೈತನನ್ನು, ನಮ್ಮ ಪರಿಸ್ಥಿತಿ ಕೂಡ ಹಾಗೆಯೇ ಆಗಿದೆ ಇವತ್ತು. we are under the protected economy for the last fifty years. ಎರಡೇ ಎರಡು ಕಾರು, 35 ವರ್ಷ ಉಪಯೋಗಿಸಿದೆವು ಇವತ್ತು ಎಷ್ಟು ಕಾರು ಬೆಂಗಳೂರಿನಲ್ಲಿ ತಿರುಗಾಡಲು ಆಗುವುದಿಲ್ಲ, ಎಷ್ಟು ಮೋಟಾರು ಸೈಕಲುಗಳು? ಎಷ್ಟು ವರ್ಷದಿಂದ ನಾವು ಸ್ಕೂಟರಿಗೆ ಕಾಯುತ್ತಿದ್ದೆವು. ಇವತ್ತು ಇವೆಲ್ಲವೂ available in the Seller's market. We can buy at any cost. ಏಕೆಂದರೆ it is a free economy. Protected economy has gone out of our orders. Competitive economy or laissez faire ಅಂತ ನಾವು ಏನು ಹೇಳುತ್ತೇವೆ, it is a Roman word. Laissez faire is nothing but a competitive economy. Those who compete would survive. This is the philosophy of that sentence. ಈ ಕಾಂಪಿಟೇಷನ್‌ನಲ್ಲಿ ಬರಲು ನಮಗೆ ತಾಪತ್ರಯವಾಗಿಬಿಟ್ಟಿದೆ. ಇಲ್ಲಿ ಕೈಗಾರಿಕಾ ಸಚಿವರು ಇಲ್ಲ. ಕರ್ನಾಟಕದಲ್ಲಿ ಬಹಳ ಕೈಗಾರಿಕೆಗಳು ಆರಂಭವಾಗುತ್ತವೆ, ಸಬ್ಸಿಡಿ ಪಡೆದುಕೊಳ್ಳುತ್ತವೆ. ಎಲ್ಲಾ ಬೆನಿಫಿಟ್ಸ್‌ಗಳನ್ನೂ ತೆಗೆದುಕೊಳ್ಳುತ್ತವೆ. ಪ್ರಾರಂಭವಾದ

ಎರಡು ಮೂರು ವರ್ಷಕ್ಕೇ ನಿಂತುಹೋಗುತ್ತವೆ. ಯಾಕೆ? because they were protected all these years. Their products were guaranteed. They were able to sell at the price whereever they wanted to sell it. ಇವತ್ತು ಅದು ನಡೆಯುವುದಿಲ್ಲ. ನೀವು ಕ್ವಾಲಿಟಿ ಮೈಂಟೇನ್ ಮಾಡದ ಹೊರತು ಸ್ಪರ್ಧಾತ್ಮಕವಲ್ಲದ್ದು ನಡೆಯೋಕೆ ಸಾಧ್ಯವೇ ಇಲ್ಲ. The same principle applies to our agriculture also. ನಮ್ಮ ಕೃಷಿ ಇಲಾಖೆ ಮೆಕ್ಕೆಜೋಳದ ಪ್ರದರ್ಶನ ಏನು ಮಾಡಿದರು ಅದು ಒಳ್ಳೆಯ ಕೆಲಸವೇ, ಇದೇ ತರಹ ಇತರೆ ಅನೇಕ ಕೃಷಿ ಉತ್ಪನ್ನಗಳಿವೆ ನಮ್ಮಲ್ಲಿ. ಉದಾಹರಣೆಗೆ ರಾಗಿ, ಇವತ್ತು ರಾಗಿ ಕೆ.ಜಿ.ಗೆ ನಾಲ್ಕೈದು ರೂ.ಗೆಲ್ಲಾ ಸಿಕ್ಕಿಬಿಡುತ್ತದೆ, ಅಕ್ಕಿ ಮಾತ್ರ 12ರೂಗೆ ಸಿಗುತ್ತದೆ. ನೀವ್ಯಾಕೆ ರಾಗಿ ಬಗ್ಗೆ ಪ್ರಚಾರ ಮಾಡುವುದಿಲ್ಲ? ರಾಗಿಯನ್ನು ರಾಗಿಮಾಲ್ಟ್‌ನಲ್ಲಿ ಉಪಯೋಗಿಸಬಹುದು, ಇವತ್ತು ಫೆಪ್ಸಿ ಕೋಕಾಕೋಲಾ ಎಂದು ನೂರೆಂಟು ಬಂದಿವೆ ನೋಡ್ರಿ, ಅದೇರೀತಿ ಬಾಟಲ್‌ನಲ್ಲಿ ನೀವು ರಾಗಾಟ್ ಎಂದು ಯಾಕೆ ಮಾಡಬಾರದು? ರಾಗಿಯಿಂದ ಆಲ್ಕೋ ಹಾಲ್ ತಯಾರಿಸುತ್ತಾರೆ Why don't you introduce it? Why don't you industrialise the agriculture? Why don't you link the agriculture with industry? Why don't you convert agriculture into industry? ನಮ್ಮ ಕೃಷಿ ಸಚಿವರು ಇದರ ಬಗ್ಗೆ ಗಮನಹರಿಸಿದರೆ ಅದರಿಂದ ಕೃಷಿ ಸಚಿವ ಸ್ಥಾನಕ್ಕೆ ಬಹಳಷ್ಟು ಗೌರವ ತಂದಂತಾಗುವುದು ಎಂಬ ನಂಬಿಕೆ ನನ್ನದು. ಅದರ ಜೊತೆಗೆ ಜೋಳ, ಈ ಜೋಳ ಬೆಳೆದವರು ಪಾಪ ಅಳುತ್ತಾರೆ, ಸಾಮಾನ್ಯವಾಗಿ ಅದಕ್ಕೆ ಬೆಲೆ ಬರುವುದಿಲ್ಲ. ಅದರಿಂದಲೂ ಕೆಲವು ಬೈಪ್ರಾಡಕ್ಟ್ ಮಾಡಲು ಸ್ಕೋಪ್ ಇದೆ; ಈ ಕೈಗಾರಿಕಾ ವಲಯದಡಿ. ಅದು ಯಾವ್ಯಾವುದು ಅನ್ನುವುದನ್ನು ಪತ್ತೆ ಮಾಡಿಸಿ, ಅದರದೊಂದು ಪ್ರದರ್ಶನವಿಟ್ಟು ಜನಗಳಿಗೆ ತಿಳಿವಳಿಕೆ ಕೊಟ್ಟು ಅದಕ್ಕೂ ಬೆಲೆ ಎಂದು ತೋರಿಸಿದರೆ ನಮ್ಮ ರೈತರಿಗೆ ಆಗ ಅರ್ಥವಾಗುತ್ತದೆಂದು ಈ ಸಂದರ್ಭದಲ್ಲಿ ಕೃಷಿ ಸಚಿವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಗ್ಲೋಬಲೈಜೇಷನ್‌ನಿಂದ ನಮ್ಮ ಕೃಷಿ ಹೋಯಿತು ಎಂಬ ಮಾತು ಹೇಳುತ್ತಾರೆ. ತಮಗೆ ಹೇಳುವುದಾದರೆ ಅದರಿಂದ ತಪ್ಪಿಸಿಕೊಳ್ಳಲು ಆಗುವುದೇ ಇಲ್ಲ. We are in the one world. World market. ಒಂದೇ ಒಂದು ಈಗ. ಆ ಪರಿಸ್ಥಿತಿ ಇರುವಾಗ ನಾವು ಗ್ಲೋಬಲೈಜೇಷನ್ ಬೇಡ, ಅದು ಬೇಡ ಇದು ಬೇಡ ಅಂದರೆ ಅದೆಲ್ಲ ನಡೆಯುವುದೇ ಇಲ್ಲ. ನಮ್ಮ ಪಾಡಿಗೆ ನಾವು ಇರಬೇಕು, ಅದೂ ಸಾಧ್ಯವಿಲ್ಲ, ಈಗ. ಎಲ್ಲರ ತರಹ ಇರುತ್ತೇವೆ ಅಂದರೆ ಬದುಕಲು ಸಾಧ್ಯ. ನಮ್ಮ ಪಾಡಿಗೆ ಇಂಡಿವಿಜ್ಯುವಲ್ಲಾಗಿ ಬದುಕಲು ಸಾಧ್ಯವಿಲ್ಲವೆಂಬುದನ್ನು ಪ್ರತಿ ದಿವಸ ನಮ್ಮ ಜೀವನದಲ್ಲಿ ನೋಡುತ್ತಿದ್ದೇವೆ. ಈ ವರ್ಲ್ಡ್ ಮಾರ್ಕೆಟ್ ಕಂಡೀಷನ್‌ನಲ್ಲಿ ಈ ಪ್ರೋಗ್ರಾಂ ಅನ್ನು ಅವರು ಮಾಡಿಕೊಳ್ಳಬೇಕು. ಅದನ್ನು ಮಾಡದೆ, ನಮ್ಮ ತಾತ ಮುತ್ತಾತಂದಿರು ರಾಗಿ ಜೋಳ ಬೆಳೆಯುತ್ತಿದ್ದಂತೆ ಬೆಳೆದರೆ

ಈಗ ನಡೆಯುವುದಿಲ್ಲ, ಇವತ್ತು cost-wise, price-wise economy-wise thinking ಮಾಡದೇ ಇದ್ದರೆ ನಮ್ಮ ಅಗ್ರಿಕಲ್ಚರ್ ನಡೆಯುವುದಿಲ್ಲ. ಇವತ್ತು ಅಗ್ರಿಕಲ್ಚರ್ ಅಂದರೆ ಏಕೆ ಶಾಪ ಹಾಕುತ್ತಿದ್ದೇವೆ ಅಂದರೆ, ನಾವು ಯಾವ ಪ್ರೋಫೆಷನಲ್ ಇದ್ದೇವೆ 80 ಪರ್ಸೆಂಟ್ ಜನ, ಈ 80 ಪರ್ಸೆಂಟ್ ಜನರಿಗೆ ಲೆಕ್ಕಹಾಕಲು ಬರುವುದಿಲ್ಲ, ಕೂಡಲು ಕಳೆಯಲು ಬರುವುದಿಲ್ಲ, ಲಾಭವೆಷ್ಟು ನಷ್ಟವೆಷ್ಟು ಅವರಿಗೆ ಗೊತ್ತಿಲ್ಲ. ಆದಕ್ಕೇ ಅವರು ಬದುಕಿರುವುದು. ಆದರೆ ಮೈಸೂರಲ್ಲೊ, ಬೆಂಗಳೂರಲ್ಲೋ ವಾಸ ಮಾಡುತ್ತಾರೆ ನೋಡ್ರಿ, ಉದಾಹರಣೆಗೆ ಒಬ್ಬ ಬೀಡಿ ಅಂಗಡಿಯವ ಏನಿದ್ದಾನೆ, ಅವನು ಸಂಜೆವರೆಗೂ ಎಷ್ಟು ವ್ಯಾಪಾರ ಆಯಿತು ಎಂದು ಲೆಕ್ಕ ಬರೆದುಕೊಳ್ಳುತ್ತಾನೆ, ಎಷ್ಟು ಮಾಲು ಬಿಕರಿ ಆಯಿತು ಎಂದು ಬರೀತಾನೆ. ಎಷ್ಟು ಲಾಭ ಬಂತು ಎಂದು ಬರೀತಾನೆ. ಇವರೆಲ್ಲಿ ಬರೆಯುತ್ತಾರೆ? ಹಾಗೆ ಬರೆಯದಲೆ ಪಾಪ ಆ ರೈತರು ಬೆಳೆದು ಬೆಳೆದು ಬೆನ್ನೆಲ್ಲಾ ಬಾಗಿ ಇವತ್ತು ಅವನ ಕತೆ ಮುಗಿದುಹೋಗಿದೆ. ಅವನನ್ನು ಹಿಡಿದುಕೊಂಡು ನಾವೆಲ್ಲಾ ಬಂದು ಬಿಟ್ಟಿದ್ದೇವೆ ಅವನಿಗೆ ಜಸ್ಟೀಸ್ ಕೊಡೋಣ ಅಂದರೆ ಸಾಧ್ಯ ಆಗುತ್ತಿಲ್ಲ. ಆದ್ದರಿಂದ ಇದಕ್ಕೆ ಶಿಕ್ಷಣದ ಕಾಂಟ್ರಿಬ್ಯೂಷನ್ ಬೇಕಾಗುತ್ತದೆ. ಜಾಸ್ತಿ ವಿದ್ಯಾವಂತರಾಗಬೇಕು, ತಿಳಿವಳಿಕಸ್ತರು ಆಗಬೇಕು ಅವರಿಗೆಲ್ಲಾ ಜ್ಞಾನ ತುಂಬುವಂತಹ ವ್ಯವಸ್ಥೆ ಬಂದಾಗ ಮಾತ್ರ ನಮ್ಮ ವ್ಯವಸಾಯಗಾರರೂ ಕೂಡ ಬುದ್ಧಿವಂತರು ಹಾಗೂ ವಿಚಾರವಂತರಾಗುತ್ತಾರೆಂದು ನಾನು ಹೇಳಬಯಸುತ್ತೇನೆ. ಅಧ್ಯಕ್ಷರೇ, ನಮ್ಮ ಹೆಬ್ಬಾಳದಲ್ಲಿ ಪ್ರತಿವರ್ಷ ಕೃಷಿ ಮೇಳ ಎಂದು ಮಾಡುತ್ತಾರೆ, ಆಗಸ್ಟ್ ಒಂದನೇ ತಾರೀಖು ಕೃಷಿ ಸಲಕರಣೆ ಬಗ್ಗೆ ಕೃಷಿ ಸಚಿವರು ಮಾಡಿಸುತ್ತಾರೆ. ನಾನು ಸ್ವಾಗತ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ಇದ್ದಾಗ ದಿನಾ ಸಂಜೆ ಹೋಗುತ್ತಿದ್ದೆ, ಅಲ್ಲಿಗೆ ಯಾರ್‍ಯಾರು ಬರುತ್ತಾರೆ, ಯಾವ್ಯಾವ ಪ್ರಾಡಕ್ಟ್ ಸೇಲ್ ಮಾಡುತ್ತಾರೆ ಎಂಬುದನ್ನೂ ಸುಮ್ಮನೆ ನೋಡೋಣ ಎಂದು. ಅಲ್ಲಿಗೆ ಬಂದವರಲ್ಲಿ 75, 80 ಪರ್ಸೆಂಟ್ ಎಲ್ಲಾ ಪ್ಯಾಂಟು, ಟೈ, ಬೂಟು ಸೂಟು, ಇವರೇನೇ. ನಮ್ಮ ಚಡ್ಡಿ, ಪಂಚೆಯವರು ಯಾರೂ ಇಲ್ಲವೇ ಇಲ್ಲ. ಈ ಪ್ರದರ್ಶನ ಮಾಡಿದ್ದು ಯಾರಿಗೆ? ಆದರೂ ಸಹ ಇಲಾಖೆಯವರು ಜಿಲ್ಲೆಗಳಿಂದ ಬಸ್ ಮಾಡಿ ಜನಗಳನ್ನು ಕರೆತಂದಿದ್ದರು. 'It is not done sincerely. ಯಾರದೋ ಒತ್ತಡ ಇರಬಹುದು, ಮಂತ್ರಿ, ಮುಖ್ಯಮಂತ್ರಿಗಳ ಒತ್ತಡ ಇರಬಹುದು. ಹಾಗೆ ಬಂದ ಬಡಪಾಯಿಗಳಿಗೆ ಅಲ್ಲಿರುವ ಇಂಗ್ಲಿಷ್ ವರ್ಡ್ ಅರ್ಥವಾಗುವುದಿಲ್ಲ. ಅಲ್ಲಿರುವ ಮೆಶಿನರಿ ಬಗ್ಗೆ ಅವರು ಇಂಗ್ಲೀಷಿನಲ್ಲಿ ಎಕ್ಸ್‌ಪ್ಲೈನ್ ಮಾಡುತ್ತಾನೆ, ಈ ಚಡ್ಡಿ ಪಂಚೆ ಗಿರಾಕಿಗೆ ಇದು ಅರ್ಥವಾಗುವುದಿಲ್ಲ. ಅಂದರೆ ನಮ್ಮ ಪರಿಸ್ಥಿತಿ ಹೇಗಿದೆ ಅಂದರೆ ಅವರು ಹೇಳುವುದು ನಮಗೆ ಅರ್ಥವಾಗುವುದಿಲ್ಲ, ನಾವು ಹೇಳುವುದು ಅವರಿಗೆ ಅರ್ಥವಾಗುವುದಿಲ್ಲ. ಆದರೂ ಲಕ್ಷಾಂತರ ಕೋಟ್ಯಂತರ ರೂ. ಖರ್ಚುಮಾಡಿಕೊಂಡು ನಾವು ಮಾಡುತ್ತಿದ್ದೇವೆ. ಇದನ್ನು ಏಕೆ ಹೇಳುತ್ತೇನೆ ಅಂದರೆ ವಾಸ್ತವಾಂಶ ಏನಿದೆ ಅದನ್ನು ಅರ್ಥ ಮಾಡಿಕೊಂಡು

ನಮ್ಮ ಸ್ಕೀಂಗಳನ್ನು ಮಾಡದೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ, ಸಾರ್ ಹಿಂದೆ ಒಂದು ಕಾಲದಲ್ಲಿ ಈ ಕೃಷಿಯಲ್ಲಿ 67 ಸ್ಕೀಮ್ಸ್ ಇದ್ದವು ಈಗ ಸರ್ಕಾರ ಅವನ್ನೆಲ್ಲಾ

3.50ಪಿ.ಎಂ.

ತೆಗೆದು 46 ಸ್ಕೀಮ್ಸ್‌ಗೆ ಇಳಿಸಿದೆ. ಈ 67 ಸ್ಕೀಮಗಳನ್ನೇನು ಮಾಡಿದ್ದರು, ಬಹುಶಃ ಮಾಡಿದವರ ಅದನ್ನು ಮರೆತುಬಿಟ್ಟಿದ್ದಾರೇನೋ. ಜ್ಞಾಪಕ ಇರುವುದಿಲ್ಲ. ಇನ್ನು ಯಾರಿಗೋಸ್ಕರ ಮಾಡಿದ್ದಾರೆ, ನಮಗಂತೂ ಒಮ ಜ್ಞಾಪಕವೇ ಇಲ್ಲ. ಅದನ್ನು ಬುದ್ಧಿವಂತಿಕೆಯಿಂದ ವಿಷಯ ಸಮಿತಿಯವರು ಬಹಳ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆ. ಜನ ಮೆಚ್ಚುವಂಥ ಕೆಲಸವನ್ನು ಮಾಡಿದ್ದಾರೆ. ಅವರು 46 ಸಬ್ಜೆಕ್ಟ್‌ಗೆ ಇಳಿಸಿದ್ದಾರೆ. ಇನ್ನೊಂದು ನಾನ್ ಪ್ಲಾನ್‌ನಲ್ಲಿ 41 ಸಬ್ಜೆಕ್ಟ್ ಇತ್ತು. ಅದನ್ನು ತಂದು 37ಕ್ಕೆ ಇಳಿಸಿದ್ದಾರೆ. ಈ ರೀತಿ ಸ್ಕೀಮ್‌ಗಳು ಏನು ಇಲಾಖೆಗಳಲ್ಲಿ ಇವೆ, ಇವುಗಳು ಕಾಲಕಾಲಕ್ಕೆ ರಿವ್ಯೂ ಆಗಬೇಕು. ಒಂದೇ ಸ್ಕೀಮು ಎಲ್ಲಾ ಕಾಲಕ್ಕೂ ನಡೆಯುವುದಿಲ್ಲ. ನಾವು ಚಿಕ್ಕವರಾಗಿದ್ದಾಗ ಬಟ್ಟೆ ಹಾಕಿಕೊಳ್ಳುತ್ತಿದ್ದುದ್ದನ್ನು ಇವತ್ತು ಹಾಕಿಕೊಳ್ಳುತ್ತಿಲ್ಲ. ಚಿಕ್ಕವರಾಗಿದ್ದಾಗ ಏನು ಆಟ ಆಡುತ್ತಿದ್ದೆವು, ಅದನ್ನು ಇವತ್ತು ಆಡುವುದಕ್ಕಾಗುವುದಿಲ್ಲ. ಅವತ್ತು ನೋಡುತ್ತಿದ್ದುದ್ದು ಇವತ್ತು ನೋಡಲಿಕ್ಕೆ ಸಾಧ್ಯವಿಲ್ಲ. ಬದಲಾವಣೆ ಆಗುತ್ತದೆ Change is the order of life. Biological law of life. ಈ ಒಂದು ಸಿಸ್ಟಂ ಇದ್ದರೂ ಸಹ ನಮ್ಮ ಇಲಾಖೆಯಲ್ಲಿ ಅನೇಕ ಸ್ಕೀಮ್‌ಗಳು ಅದು ಯಾರಿಗೆ ತಲುಪಿದೆಯೋ ಅದು ಯಾರಿಗೆ ಬಂದಿಲ್ಲ ಎಂಬುದು ನಮಗೆಲ್ಲಾ ಅದು ಗೊತ್ತಾಗುತ್ತದೆ. ಇದನ್ನು ಅವಾಯ್ಡ್ ಮಾಡುವಂಥದ್ದನ್ನು ತಾವು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಈ ಒಂದು ಅಗ್ರಿಕಲ್ಚರನ್ನು ಇಂಡಸ್ಟ್ರೀ ತರಹ ಟ್ರೀಟ್ ಮಾಡಬೇಕು. ಇದನ್ನು ಪರಿವರ್ತನೆ ಮಾಡಬೇಕೆನ್ನುವ ಕೂಗು ಇವತ್ತಿನದಲ್ಲ ಇದು. ಪ್ರೊಫೆಸರ್ ಎನ್.ಜಿ. ರಂಗಾ ಎಂದು ಒಬ್ಬರು ಇದ್ದರು. ಬಹುಶಃ ತಮಗೆಲ್ಲಾ ಗೊತ್ತಿರತಕ್ಕಂಥವರು. ಅವರು ಅವತ್ತಿನಿಂದಲೂ ಕೂಡ ಒತ್ತಿಒತ್ತಿ ಹೇಳುತ್ತಿದ್ದರು Unless you treat the agriculture as industry ಈ ಪ್ರೊಫೆಷನ್ ಹಾಳಾಗಿ ಹೋಗುತ್ತದೆ. ಈ ವ್ಯವಸಾಯ ಮಾಡುವ ಜನ ಮುಗಿದುಹೋಗುತ್ತಾರೆ. ಇವರು ಯಾವತ್ತೂ ಕಡು ಬಡವರೇ ಆಗಿರುತ್ತಾರೆ. ಭಿಕ್ಷೆ ಬೇಡುವಂಥ ಪರಿಸ್ಥಿತಿ ಬರುತ್ತದೆ ಎಂದು ಅವತ್ತೇ ಹೇಳಿದರು. ಇದೇ ಮಾತನ್ನು ನಮ್ಮ ರಾಜಗೋಪಾಲಚಾರಿಯವರು ಸುಮಾರು 25 ವರ್ಷಗಳ ಹಿಂದೆ 'ಸ್ವರಾಜ್' ಎಂದು ಹೇಳಿ ಒಂದು ಪೇಪರ್ ಬರುತ್ತಿತ್ತು. ತಾವೂ ಕೂಡ ಓದಿದ್ದೀರಿ ಎಂದು ನಂಬಿಕೊಂಡಿದ್ದೇನೆ. ಅವರೇನು ಹೇಳಿದ್ದರು ಎಂದರೆ ಈ ಅಗ್ರಿಕಲ್ಚರ್ ಪ್ರೊಡೆಕ್ಟ್ಸ್ ಏನು ಇದೆ, It should be in the Sellers' market. Unfortunately it is in the Buyers' market ಅಂದರೆ ನಮ್ಮ ಪದಾರ್ಥಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರುವ ತನಕವೂ ನಮ್ಮ ರೇಟ್ ನಮಗೇ ಗೊತ್ತಿಲ್ಲ. ಅವನು ಎಷ್ಟಕ್ಕೆ ಕೇಳುತ್ತಾನೆ. ಅಷ್ಟಕ್ಕೇ ನಾವು

ಮಾರಲೇಬೇಕು. ಈ ಸಿಸ್ಟಂ ಏನು ಇದೆ, ಅದು ರಿವರ್ಸ್ ಆಗಬೇಕು. ಇವತ್ತು ಬೇಜಾರಾಗಿ ಬದುಕೀ ಬೇಡ ಸತ್ತೇ ಹೋಗೋಣ ಎನ್ನುವ ನಿರ್ಧಾರಕ್ಕೆ ಬಂದರೆ ಏನಾದರೂ ಪಾಷಾಣವನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಅದಕ್ಕೂ ಕೂಡ ಪ್ರೈಸ್ ಇದೆ. ಸಯನೈಡ್ ಅವೆಲ್ಲಾ ಬೇಕಾದಷ್ಟು ಇದೆಯಲ್ಲಾಸ ಅವನ್ನೆಲ್ಲಾ ನೀವು ತೆಗೆದುಕೊಳ್ಳುವುದಕ್ಕೆ ಹೋದರೂ ಅದಕ್ಕೂ ಪ್ರೈಸ್ ಇದೆ. ಅಷ್ಟು ದುಡ್ಡು ಕೊಟ್ಟೇ ನಾವು ಸಾಯಬೇಕು. ಆದರೆ ಕಷ್ಟಪಟ್ಟು ಬೆಳೆದಂಥ ಪದಾರ್ಥಕ್ಕೆ He has no right to fix the price. ಅಂದರೆ ಈ ಒಂದು ಬಯರ್ಸ್ ಮಾರ್ಕೆಟ್‌ನಲ್ಲಿರತಕ್ಕ ಅಗ್ರಿಕಲ್ಚರನ್ನು ನೀವು ಸೆಲ್ಲರ್ ಎಕಾನಮಿಯಲ್ಲಿ ತರುವ ಒಂದು ಬೃಹದಾಕಾರವಾದ ತೀರ್ಮಾನವನ್ನು ತಾವು ಮಾಡದಿದ್ದರೆ ಇವೆಲ್ಲಾ ತೀರ್ಮಾನಗಳೂ ಕೂಡ ಒಳ್ಳೆಯದಾಗುವುದಿಲ್ಲ. It is here that everybody should think over. ಇದರಲ್ಲೇನೂ ಪಕ್ಷವಿಲ್ಲ, ಭೇದವಿಲ್ಲ, ಅವರು ಇವರು ಎನ್ನುವ ಭೇದ ಇಲ್ಲವೇ ಇಲ್ಲ. ರಾಗಿ ನಾವು ಬೆಳೆದರೂ ಬೆಲೆ ಸಿಗುವುದಿಲ್ಲ. ನಿಮಗೂ ಬೆಲೆ ಸಿಗುವುದಿಲ್ಲ. ಇದರ ಬಗ್ಗೆ ಒಂದು ಚಿಂತನೆಯನ್ನು ತಾವು ಹರಿಸುವುದು ಬಹಳ ಮುಖ್ಯ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮತ್ತೊಂದು ನಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಟಿಪ್ಸನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟನ್ನು ಸೆಪರೇಟಾಗಿ ನೋಡುತ್ತಾರೆ. ಆ ರೀತಿ ನೋಡುವುದು ತಪ್ಪು. It is linked with Irrigation Department and the Marketing Department. ಇದಕ್ಕೂ ಅದಕ್ಕೂ ಸಂಬಂಧವೇ ಇರುವುದಿಲ್ಲ. ಅನೇಕ ತೀರ್ಮಾನಗಳನ್ನೇನು ಕೃಷಿ ಇಲಾಖೆಯಲ್ಲಿ ನಾವು ತೆಗೆದುಕೊಳ್ಳುತ್ತೇವೆ, ಯಾವುದನ್ನು ಬೆಳೆಯಬೇಕು, ಯಾವುದನ್ನು ಬೆಳೆದರೆ ಬೆಲೆ ಬರುತ್ತದೆ, ಯಾವ ಸಂದರ್ಭದಲ್ಲಿ ಏನು ಬೆಳೆಯಬೇಕು, ಆಲ್ ಇಂಡಿಯಾ ಲೆವೆಲ್ ನಲ್ಲಿ ಪದಾರ್ಥಗಳ ಬೆಲೆ ಏನು ಇದೆ, ಕರ್ನಾಟಕದಲ್ಲಿ ಏನು ಬೆಳೆಯಬೇಕು, ಯಾರೂ ಹೇಳುವವರೇ ಇಲ್ಲ. ಯಾರೋ ನಮ್ಮಂಥವರು ಪತ್ರಿಕೆ ಓದಿದವರು ಮಾಡುತ್ತೇವೆ. ಅಷ್ಟು ಬಿಟ್ಟರೆ ಸಾಮಾನ್ಯ ರೈತನಿಗೆ ಏನು ಬೆಳೆದರೆ ಬೆಲೆ ಬರುತ್ತದೆ ಎನ್ನುವ ಐಡಿಯಾವೇ ಇಲ್ಲ ಅವನಿಗೆ. ಸುಮ್ಮನೆ ಬೆಳೆಯಬೇಕು, ಬೆಳೆದುಬಿಡುತ್ತಾನೆ. ಕಬ್ಬು ಬೆಳೆದ, ಬೆಳೆದ, ಅದನ್ನು ಬೆಂಕಿಗೆ ಹಾಕುವತನಕವೂ ಹೊರಟ. ಆಲೂಗಡ್ಡೆ ಬೆಳೆದರು, ತಂದು ರೋಡ್‌ನಲ್ಲಿ ಸುರಿದರು. ಕೋಲಾರದವರು ಟೊಮೆಟೊ ಬೆಳೆದು ತಂದು ಅದನ್ನು ರಸ್ತೆಗೆ ಸುರಿದರು. ಈ ರೀತಿಯಾಗುವುದನ್ನು ತಪ್ಪಿಸಲಿಕ್ಕೆ Agriculture Department should go along with Marketing Department. ಮತ್ತೆ ಯಾವ ರೀತಿ ನೀರನ್ನು ಬಳಸಿಕೊಳ್ಳಬೇಕೆನ್ನುವುದನ್ನು ಈ ಇರಿಗೇಷನ್ ಡಿಪಾರ್ಟ್‌ನವರಿಗೂ ಅವರಿಗೂ ಸಂಬಂಧವನ್ನು ಇಟ್ಟುಕೊಳ್ಳಬೇಕು. ಇದು ಏನಾಗಿದೆ, ಇರಿಗೇಷನ್‌ನವರು ನೀರು ಬಿಟ್ಟಾಗ ಬೀಜ ಇರುವುದಿಲ್ಲ, ಬೀಜ ಇದ್ದಾಗ ಮತ್ತೊಂದು ಇರುವುದಿಲ್ಲ. ಮಾರ್ಕೆಟಿಂಗ್ ವ್ಯಾಲ್ಯೂ ಗೊತ್ತಾಗುವುದಿಲ್ಲ. ಒಬ್ಬರಿಗೊಬ್ಬರಿಗೂ ಸಂಬಂಧವಿಲ್ಲದೇ

ಇರುವ ರೀತಿ ನಮ್ಮ ಕೃಷಿ ಇಲಾಖೆಯನ್ನು ಟ್ರೀಟ್ ಮಾಡುತ್ತಾರೆ. ಇದು ಆಗಬಾರದು ಇವು ಒಂದಕ್ಕೊಂದು ಸಂಬಂಧ. ನಮ್ಮ ಬಾಡಿಯಲ್ಲಿ ಒಂದೊಂದು ಆರ್ಗನ್‌ಗೆ ಹೇಗೆ ಸಂಬಂಧ ಇದೆ, ಆ ರೀತಿ ಇಲಾಖೆ ಕೂಡ ಈ ರೀತಿ ಸಂಬಂಧ ಇದೆ. ಇದು ಮದರ್ ಡಿಪಾರ್ಟ್‌ಮೆಂಟ್ ವೆಟರ್‌ನರಿ ಡಿಪಾರ್ಟ್‌ಮೆಂಟ್‌ಗೂ ಇದಕ್ಕೂ ಸಂಬಂಧ ಇದೆ. ಮೀನುಗಾರಿಕೆ ಇಲಾಖೆಗೆ ಇದಕ್ಕೂ ಸಂಬಂಧ ಇದೆ. ತೋಟಗಾರಿಕೆಗೂ ಇದಕ್ಕೂ ಸಂಬಂಧ ಇದೆ. ಇದು ಒಂದಕ್ಕೊಂದು ಸಂಬಂಧ ಇಲ್ಲದೆ ನಮ್ಮಪಾಡಿಗೆ ನಾವಿದ್ದೇವೆ ಎಂದರೆ This cannot be a healthy trend. ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ನಮ್ಮ ಪದಾರ್ಥಗಳಿಗೆ ಮೌಲ್ಯಾಧಾರಿತ ಬೆಲೆಯನ್ನು ಕೊಡುವುದಕ್ಕೆ ಒಂದು ಕಾರ್ಯಕ್ರಮವನ್ನು ವ್ಯವಸಾಯ ಇಲಾಖೆಯಲ್ಲಿ ರೂಪಿಸಬೇಕು. ಇದನ್ನು ರೂಪಿಸದಿದ್ದರೆ ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ಜಾಸ್ತಿ ಸಣ್ಣ ರೈತರೇ ಇದ್ದಾರೆ. ನಮ್ಮದೊಂದು ವಿಪರ್ಯಾಸ ಪರಿಸ್ಥಿತಿ. ಏನೇನೋ ಜ್ಞಾನಗಳನ್ನು ತಂದಿದ್ದಾರೆ. ವಿಜ್ಞಾನಿಗಳು ಬಂದಿದ್ದಾರೆ. ದೊಡ್ಡ ದೊಡ್ಡ ಯಂತ್ರಗಳು ಬಂದಿವೆ. ಮೆಕನೈಜೇಷನ್ ಮಾಡುವುದಕ್ಕೆ ಹೇಳುತ್ತಾರೆ. ಆದರೆ 4 ಎಕರೆ, 3 ಎಕರೆ, 2 ಎಕರೆ, 1 ಎಕರೆ ಇರುವ ರೈತ ಇದನ್ನು ಕೊಂಡುಕೊಳ್ಳಲಾರ, ಜೀರ್ಣಿಸಿಕೊಳ್ಳಲಾರ. ಹೀಗಾಗಿ ಆ ರೀತಿ ಬಂದಂಥ ಜ್ಞಾನ ಇವರಿಗೆ ತಲುಪುತ್ತಿಲ್ಲ. ಅದನ್ನು ಹೇಗೆ ತಲುಪಿಸುವುದಕ್ಕೆ ಸಾಧ್ಯ ಎನ್ನುವುದರ ಬಗ್ಗೆ ನಾವು ನೀವೆಲ್ಲಾ ಸ್ವಲ್ಪ ಕಿಂಚಿತ್ ಯೋಚನೆ ಮಾಡಿದರೆ ಬಹುಶಃ ಒಂದು ಸಿಸ್ಟಂ ಒಳಗೆ ಬರುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಸೀಡ್ಸ್ ಬಗ್ಗೆ ಬಹಳ ನೋವಿನಿಂದ ಹೇಳಬೇಕಾಗುತ್ತದೆ. ನಮ್ಮಲ್ಲಿ ಒಂದು ಆಕ್ಟ್ ಇದೆ. ಈ ಸ್ಪೂರಿಯಸ್ ಸೀಡ್ಸ್‌ನ್ನು ಯಾರಾದರೂ ಮಾರಿದರೆ ಒಂದು ಕೇಸನ್ನು ಹಾಕಬೇಕು, ಪ್ರಾಸಿಕ್ಯೂಷನ್ ಮಾಡಬೇಕೆಂದು ಇದೆ. ತಾವು ಯಾವುದಾದರೂ ಒಂದು ಜಿಲ್ಲೆಗೋ ಒಂದು ತಾಲ್ಲೂಕಿಗೋ ವಿಸಿಟ್ ಮಾಡಿ ಸ್ಟಾಟಿಸ್ಟಿಕ್ಸ್ ತೆಗೆದು ನೋಡಿ. ಎಷ್ಟು ಕಡೆ ಈ ರೀತಿ ಸ್ಪೂರಿಯಸ್ ಸೀಡ್ಸ್ ಮಾರಿರುವುದರ ಬಗ್ಗೆ ಸ್ಪೂರಿಯಸ್ ಗೊಬ್ಬರ ಮಾರಿರುವುದರ ಬಗ್ಗೆ ಕೇಸ್ ಹಾಕಿದ್ದಾರೆ, ಪ್ರಾಸಿಕ್ಯೂಷನ್ ಆಗಿದೆ, ಎಷ್ಟು ಕಡೆ ಜೈಲಿಗೆ ಹೋಗಿದ್ದಾರೆ, ದಂಡ ಹಾಕಿದ್ದಾರೆ, ನಾನು ಅನೇಕ ಸಲ ನಮ್ಮ ಅಧಿಕಾರಿಗಳಿಗೆ ಕೇಳಿದೆ. ನಾನೇನೂ ಬಿಟ್ಟಿಲ್ಲ. ಅವರನ್ನೂ ಕೇಳಿದ್ದೇನೆ. ಏಕೆ ಪ್ರಾಸಿಕ್ಯೂಟ್ ಮಾಡುವುದಿಲ್ಲ, ಅವನು ಯಾವುದೋ ದರಿದ್ರ ಜೋಳ ತಂದು ಮಾರುತ್ತಿದ್ದಾನೆ, ಯಾವುದೂ ಸೀಲ್ ಹಾಕಿಕೊಂಡು ಮಾರಿರುತ್ತಿದ್ದಾನೆ, ಅವನ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಅದಕ್ಕವರು ಸಾರ್ ನಮ್ಮಲ್ಲಿ ಸ್ಟಾಫ್ ಇಲ್ಲ ಎಂದು ಹೇಳುತ್ತಾರೆ. ಇವತ್ತು ಆಕ್ಟ್‌ನ ಪ್ರಕಾರ ನಾವು ಪ್ರಾಸಿಕ್ಯೂಟರನ್ನು ಹಿಡಿಯಬೇಕು. ಆ ಪ್ರಾಸಿಕ್ಯೂಟರ್ ನಮಗೆ ಬಗ್ಗುವುದಿಲ್ಲ. Rules are different ಹೆಲ್ತ್ ಡಿಪಾರ್ಟ್‌ಮೆಂಟ್ ತರಹ ಇಮ್ಮಿಡಿಯೇಟ್ ಆಗಿ ಪ್ರಾಸಿಕ್ಯೂಟ್ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ಇಲ್ಲಿ ಮಾನ್ಯ ಮಂತ್ರಿಗಳು

ಏನು ತೊಂದರೆ ಇದೆ, ಪ್ರಾಸಿಕ್ಯೂಷನ್ ಮಾಡುವುದಕ್ಕೆ ಎಂಬುದನ್ನು ನೋಡಬೇಕು. ನಮ್ಮ ಪೋಲೀಸರು ನೋಡಿ, ಹೇಗೆ ಇಮ್ಮೀಡಿಯೇಟ್ ಆಗಿ ಪ್ರಾಸಿಕ್ಯೂಟ್ ಮಾಡುತ್ತಾರೆ. ಆ ತರಹ ಸಿಸ್ಟಂ ಬರಬೇಕು. ಹೆಲ್ತ್ ಡಿಪಾರ್ಟ್‌ಮೆಂಟ್ ನಲ್ಲಿ ಏನಾದರೂ ಹೆಚ್ಚು ಕಡಿಮೆ ಸ್ಪೂರಿಯಸ್ ಫುಡನ್ನು ಮಾರಾಟ ಮಾಡಿದರೆ ಇಮ್ಮೀಡಿಯೇಟ್ ಆಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಅಲ್ಲಿ ಪ್ರಾವಿಷನ್ ಇದೆ. ಆ ರೀತಿ ಸರಳೀಕರಣವಾದಂಥ ಪದ್ಧತಿಯನ್ನು ತಾವು ಜಾರಿಗೆ ತರಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ರೈತ ಮಿತ್ರ ಕೇಂದ್ರ ಎಂದು ಮಾಡಿದ್ದೀರಿ. ಅಲ್ಲೂ ಕೂಡ ಏನು ಮಾಡುವುದಕ್ಕಾಗುತ್ತದೆ, ಅದನ್ನೇ ತಂದು ಮಾರುತ್ತಾರೆ. ಇದನ್ನು ತಪ್ಪಿಸುತಕ್ಕ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಕೃಷಿ ವಿಷಯ ಸಮಿತಿಯಲ್ಲಿ ಮತ್ತೊಂದು ಮಾತನ್ನು ಹೇಳಿದ್ದಾರೆ. ಕರ್ನಾಟಕದಲ್ಲಿ ಈ ಕೃಷಿ ಪಾಠಶಾಲೆ ಎನ್ನುವುದು ಏನು ಇವೆ, ಇವುಗಳು ಹಳ್ಳಿಯ ರೈತರಿಗೆ ಟ್ರೈನಿಂಗ್ ಕೊಡುವ ಕಾರ್ಯಕ್ರಮ. ಇದು ಬಹಳ ಒಳ್ಳೆಯದು; ಇವುಗಳನ್ನು ಸ್ಟ್ರಂಗ್ತನ್ ಮಾಡಬೇಕು. ಜಾಸ್ತಿ ಜನರಿಗೆ ಟ್ರೈನಿಂಗ್ ಕೊಡಬೇಕು ಎಂದು ಹೇಳುವವರ ಪೈಕಿ ನಾನು ಮೊದಲನೆಯವನು. ತರಬೇತಿ ಕೊಡಬೇಕು, ಎಕ್ಸ್‌ಟೆನ್ಷನ್‌ನ್ನು ಜಾಸ್ತಿ ಮಾಡಬೇಕುಎನ್ನುವಂಥ ವಿಚಾರದಲ್ಲಿ ನಾನು ಒತ್ತಿ ಒತ್ತಿ ಹೇಳುತ್ತೇನೆ. ಈ ಕೃಷಿ ಪಾಠಶಾಲೆಯಲ್ಲಿ ಓದಿದಂಥವರಿಗೆ ನೀವು ಆಕರ್ಷಣೆಯಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಇಲ್ಲಿ ಓದಿದವರಿಗೆ ನಾವು ನೌಕರಿ ಕೊಡುತ್ತೇವೆಂತಲೊ ಅಥವಾ ಗೊಬ್ಬರದಲ್ಲಿ ಇನ್ನೇನೊ ಸಬ್ಸಿಡಿ ಕೊಡುತ್ತೇವೆಂತಲೊ, ಇನ್ನೇನು. ಸಬ್ಸಿಡಿಗಳು ನಿಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಬೇಕಾದಷ್ಟು ಇದೆ, ಅಲ್ಲಿ ಓದಿಕೊಂಡು ಬಂದವರಿಗೆ ನಾವು 50 ಪರ್‌ಸೆಂಟ್ ಸಬ್ಸಿಡಿ ಕೊಡುತ್ತೇವೆ, 75 ಪರ್‌ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿ. ನಿಮ್ಮ ಕೃಷಿ ಪಾಠಶಾಲೆಗೆ ಮಕ್ಕಳು ಏಕೆ ಸೇರುವುದಿಲ್ಲವೆಂದು ನಾನು ನೋಡುತ್ತೇನೆ. ನೀವು ಅದನ್ನು ಮಾಡುವುದಿಲ್ಲ. You attract them. Anyhow you are giving the benefits. You attract them to come to the agricultural school ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಇರತಕ್ಕ ಅನೇಕ ಸ್ನೇಹಿತರಿಗೆ ಗೊತ್ತಿರತಕ್ಕ ವಿಚಾರ ಇದು. ಮಾರ್ಕೆಟಿಂಗ್ ಟೆಕ್ನಿಕ್ ಇದೆ. Selling the idea to the market. ಈಗ ಹೊಸದಾಗಿ ಕಾನ್‌ಸೆಪ್ಟ್ ಶುರುವಾಗಿದೆ. ಅದನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ತಮ್ಮ ಎಕ್ಸ್‌ಟೆನ್‌ಷನ್ ಮೆಥೆಡ್ ಒಳಗೆ ಜಾರಿಗೆ ತರಬೇಕೆಂದು ನನ್ನ ಇಚ್ಛೆ. ಅಂದರೇನು? ಕಾನ್‌ಸೆಪ್ಟ್ ಐಡಿಯಾವನ್ನು ಸೇಲ್ ಮಾಡುವುದೆಂದರೇನು? ಇದೇನು ಗುರುಸ್ವಾಮಿ ಎಂದು ಯಾರಾದರೂ ಕೇಳಬಹುದು. ಅಂದರೆ ಒಂದು ಪ್ರೊಡಕ್ಟ್ ಬಂದರೆ ಅದನ್ನು ಸೇಲ್ ಮಾಡಬೇಕಾದರೆ ಯಾವ ರೀತಿ ಅವರು ಮೈಂಡನ್ನು ಇಂಜಕ್ಟ್ ಮಾಡುತ್ತಾರೆ ನೋಡಿ. ಅದು ಟಿವಿ ಮಾಧ್ಯಮವೋ ಮತ್ತೊಂದು ಮಾಧ್ಯಮವೋ, ಏನಾದರೂ ಆಗಿರಲಿ ನಿಮಗೆ ಏನಾದರೂ ಅದನ್ನು

ನೋಡಬೇಕೆನ್ನಿಸುವ ಹಾಗೆ ಮಾಡಿಬಿಡುತ್ತಾರೆ. ಕೊನೆಯಪಕ್ಷ ಕೊಂದುಕೊಳ್ಳಬೇಕೆನ್ನುವ ಮಟ್ಟಕ್ಕೂ ಮಾಡಿಬಿಡುತ್ತಾರೆ. ಆ ಒಂದು ಕಾನ್‌ಸೆಪ್ಟ್ ಟೆಕ್ನಿಕ್ ಇದೆಯಲ್ಲಾ, ಅದು ನಿಮ್ಮ ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್‌ನೊಳಗೂ ಕೂಡ ಬರಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ರೈತರ ಆತ್ಮಹತ್ಯೆ ಬಗ್ಗೆ ಒಂದೇ ಒಂದು ಮಾತು ಹೇಳಲು ಇಚ್ಛಿಪಡುತ್ತೇನೆ. ಬಹುಶಃ ಯಾವ ದೇಶದಲ್ಲಿ ರೈತ ಅಳುತ್ತಾನೆ, ಅಲ್ಲಿ ಎಲ್ಲರೂ ಅಳಬೇಕಾಗುತ್ತದೆ. ಅಳಬೇಕಾದಂತಹ ಪರಿಸ್ಥಿತಿ ಬಂದು ಬಿಟ್ಟಿದೆ. ಹೀಗೆ ಬಂದಿರತಕ್ಕಂಥಹ ಪರಿಸ್ಥಿತಿಗೆ ಕಾರಣ ರೈತ ಒಬ್ಬನೇ ಅಲ್ಲ. ನಮ್ಮಲ್ಲಿರತಕ್ಕ ಇವತ್ತಿನ ಪರಿಸ್ಥಿತಿ, ವಾತಾವರಣ, ಸಂದರ್ಭ, ಸನ್ನಿವೇಶಗಳು, ನಮ್ಮ ಮೆಥಡ್ ಆಫ್ ಫೈನಾನ್ಸಿಂಗ್, ಮೆಥಡ್ ಆಫ್ ಪರ್ಚೇಸಿಂಗ್, ಮಾರ್ಕೆಟಿಂಗ್, ಸೆಲ್ಲಿಂಗ್ ಇವೆಲ್ಲಾ ಸೇರಿಕೊಂಡು ತೊಂದರೆ ಆಗಿ ರೈತ ಇವತ್ತು ಬದುಕಲಿಕ್ಕೆ ಆಗುತ್ತಿಲ್ಲ. ಇದನ್ನು ಎಲ್ಲಾ ಆ್ಯಂಗಲ್‌ನಿಂದ ನಾವು ನೋಡಬೇಕು. ಬರೀ ವ್ಯವಸಾಯದ ಬೆಲೆ ಸಿಕ್ಕಲಿಲ್ಲ ಎನ್ನುವುದು ಒಂದೇ ಅಲ್ಲ. ಈ ಎಲ್ಲಾ ದೃಷ್ಟಿಯಿಂದ ತಾವು ನೋಡಿದಾಗ ಈ ರೈತನ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬಹುದು. ಅವನಿಗೆ ವಿಚಾರ ಗೊತ್ತಿಲ್ಲದೆ ಆ ಕಾನ್‌ಫಿಡೆನ್ಸ್ ಕಳೆದುಕೊಂಡು ಈ ತರಹ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎನ್ನುವ ವಿಚಾರವನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ವಿಷಯ ಸಮಿತಿಯವರು ಮತ್ತೊಂದು ದೊಡ್ಡ ವಿಚಾರವನ್ನು ಹೇಳಿದ್ದಾರೆ. ನಮ್ಮ ಆಗ್ರೋ ಕಾರ್ಪೊರೇಷನ್‌ನಲ್ಲಿ ಆದಂತಹ ಅವಾಂತರಗಳ ಒಂದು ಪಟ್ಟಿ ಮಾಡಿದ್ದಾರೆ. ಬಹಳ ಸಂತೋಷ. ನಾನು ಮಾನ್ಯ ಸಮಿತಿಯ ಅಧ್ಯಕ್ಷರಿಗೆ ಆಭಾರಿ ಆಗಿದ್ದೇನೆ. ಮಾನ್ಯ ಭೈರೇಗೌಡರು ವಿಷಯ ಸಮಿತಿಯ ಅಧ್ಯಕ್ಷರೆಂದು ಕಾಣುತ್ತದೆ. ಬಹಳ ಚೆನ್ನಾಗಿ ರಿಪೋರ್ಟನ್ನು ಬರೆದಿದ್ದಾರೆ. ಎಷ್ಟು ಭಯಂಕರ ದುಡ್ಡನ್ನು ಲಾಸ್ ಮಾಡಿದ್ದಾರೆ ಎಂಬ ಬಗ್ಗೆ ಆ ರಿಪೋರ್ಟನ್ನು ನೋಡಿ. ಈ ದುಡ್ಡು ಯಾರದ್ದು? ರೈತ ಆತ್ಮಹತ್ಯೆ ಮಾಡಿಕೊಳ್ಳದೇ ಮತ್ತೇನು ಡ್ಯಾನ್ಸ್ ಮಾಡುವುದಕ್ಕೆ ಆಗುತ್ತದೆಯೇ? ಅವನಿಗಾಗಿ ಇರುವ ದುಡ್ಡನ್ನು ತಿಂದುಕೊಳ್ಳುತ್ತಾರಲ್ಲಾ, ಅವನು ಎಲ್ಲಿ ಹೋಗಿ ಸಾಯುವುದು? ನೀವು ಅದರ ಬಗ್ಗೆ ಏನಾದರೂ ಸೀರಿಯಸ್ಸಾಗಿ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ಕೈಯಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಡೆಸಲು ಆಗಲಿಲ್ಲ ಎಂದರೆ You kindly privatise it. Somebody will manage it. Why do you want to punish us? ಅದನ್ನು ತಾವು ಈ ದೃಷ್ಟಿಯಿಂದ ದಯಮಾಡಿ ಯೋಚನೆ ಮಾಡಬೇಕು. ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳಲು ಇಚ್ಛಿಪಡುತ್ತೇನೆ. ಕೃಷಿ ವಿಚಾರವಾದ ಮೇಲೆ ಇನ್ನು ತೋಟಗಾರಿಕೆ ವಿಚಾರದ ಬಗ್ಗೆ ಹೇಳುವುದಾದರೆ ಇಲ್ಲಿ ಕೂಡ 41 ಸ್ಕೀಮ್‌ಗಳು ಇದ್ದಾವೆ. ನಮ್ಮ ಮಾನ್ಯ ಕೃಷಿ ಮಂತ್ರಿಗಳು ಇಲ್ಲೇ ಇದ್ದಾರೆಂದು ಕಾಣುತ್ತದೆ. 41 ಸ್ಕೀಮ್‌ಗಳು ತೋಟಗಾರಿಕೆ ಇಲಾಖೆಯಲ್ಲಿರುವಂತಹದು. ಈ 41 ಯೋಜನೆಗಳು ಯಾವ ವರ್ಷದಲ್ಲಿ ಪ್ರಾರಂಭ

ಆಯಿತೋ, ಏನು ಕಥೆಯೋ ಗೊತ್ತಿಲ್ಲ. ಅದು ಎಷ್ಟು ಜನಕ್ಕೆ ತಲುಪಿರುತ್ತದೋ ಇಲ್ಲವೋ ಗೊತ್ತಾಗುವುದಿಲ್ಲ. ಅದನ್ನೆಲ್ಲಾ ಕೂಡ ರಿವ್ಯೆವಲ್ ಮಾಡಬೇಕು. ಇವತ್ತಿಗೆ ರೈತರಿಗೆ ಏನು ಬೇಕಾಗಿದೆಯೋ ಅಂತಹ ಸ್ಕೀಮ್‌ಗಳು ಬರಬೇಕೇ ಹೊರತು ಯಾವುದೋ ಒಂದು ಕಾಲದಲ್ಲಿ ಆದದ್ದು ಅಲ್ಲ ಎನ್ನತಕ್ಕದ್ದನ್ನು ನಾನು ಖಡಾಖಂಡಿತವಾಗಿ ಹೇಳಬೇಕಾಗುತ್ತದೆ. ಈ ತೆಂಗಿನ ಕಾಯಿಗಳ ವಿಚಾರ. ನಾನೊಬ್ಬ ತೆಂಗಿನ ಬೆಳೆಗಾರ. ತೆಂಗಿನ ಬೆಳೆಗಾರನ ಪರಿಸ್ಥಿತಿ ಇವತ್ತು ಏನಾಗಿದೆ ಎಂದರೆ ತೆಂಗು ಬೆಳೆಗಾರ ನೇಣು ಹಾಕಿಕೊಳ್ಳುವ ಪರಿಸ್ಥಿತಿ ಬಂದಿದೆ. ಬೆಲೆ ಏರಿಸಿದ್ದರೂ ನಮ್ಮ ಕಾಯಿಗೆ ಬೆಲೆ ಇಲ್ಲ. ಆ ತೋಟದೊಳಗೆ ಹೋಗಲು ಬೇಜಾರು. ಎಲ್ಲಾ ಗಿಡಗಳಿಗೂ ಬರೇ ಖಾಯಿಲೆ. ನುಸಿ ಪೀಡೆ ಔಷಧಿ ಪತ್ತೆ ಮಾಡಿಲ್ಲ. ಇದುವರೆಗೂ ಕೂಡ ಅದರ ಖಾಯಿಲೆಗೆ ಎಲ್ಲಿಂದ ಔಷಧಿ ಕೊಡುತ್ತಾರೆ ಎಂಬುದು ಭಗವಂತನಿಗೇ ಗೊತ್ತು. ಅದೂ ಇಲ್ಲ.ಅದೂ ಬೇಡ, ಏನಾದರೂ ನೀರಾನಾದರೂ ಮಾಡಿಕೊಂಡು, ಹೆಂಡ ಕುಡಿಸಿ ದುಡ್ಡು ಮಾಡುತ್ತೇವೆಂದರೆ ಅದಕ್ಕೂ ಬಿಡುವ ಹಾಗೆ ಇಲ್ಲ. ಅಂದರೆ ಈಗಲೇ 99 ಪರ್ಸೆಂಟ್ ಇದ್ದಾರೆ, ಇನ್ನು ಒಂದು ಪರ್ಸೆಂಟಿಗೆ ಬಿಡಬೇಕು ಎಂದು ಹೇಳುವವನಲ್ಲ ನಾನು. ಆದರೆ ರೈತ ಬದುಕಲಿಕ್ಕೆ ಯಾವ ವ್ಯವಸ್ಥೆ ಆಗಬೇಕೋ ಅದನ್ನು ನಮಗೆ ಕಲ್ಪಿಸಿಕೊಡಬೇಕು ಅಷ್ಟೇ. ಅದು ನೀರಾ ಆಗಿರಬಹುದು, ಅಡಿಕೆ ಆಗಿರಬಹುದು. ಇನ್ನೊಂದು ಆಗಿರಬಹುದು. You give us good market, good rate, by any means ನೀರಾ ಆಗಿರಬಹುದು, ಮತ್ತೊಂದು ಆಗಿರಬಹುದು. ನಿಜ ಅವತ್ತೊಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ನಾಲ್ಕು ಬಿಲಿಯನ್ ಮರಗಳೇನು ಇದ್ದಾವೆ, ಅಲ್ಲಿಂದ ನಾಲ್ಕು ಕೋಟಿ ಮರಗಳಿಂದ ನೀರಾ ಇಳಿಸಿ ಬಿಟ್ಟರೆ ತೆಗೆದುಕೊಳ್ಳುವವರು ಯಾರು? ಏನಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದು ಒಂದು ಕಡೆ ಇರಲಿ. ಆದರೆ ನೀರಾದಿಂದ ಏನಾದರೂ ಖಾಯಿಲೆ ಹೋಗುತ್ತದೆ ಎನ್ನತಕ್ಕದ್ದನ್ನು ಮೊನ್ನೆ ಯಾರೋ ನಿಮ್ಮ ಹೆಬ್ಬಾಳದ ವಿಜ್ಞಾನಿಗಳು ಹೇಳಿದ್ದಾರೆ ಎನ್ನುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅದು ನಿಜವೇ ಆಗಿದ್ದ ಪಕ್ಷದಲ್ಲಿ ಸಿಎಫ್‌ಟಿಆರ್‌ಐಗೆ ನಮ್ಮ ತೋಟಗಾರಿಕೆ ಮಂತ್ರಿಗಳು ಹೋಗಿ ವಿಚಾರಿಸಿಕೊಂಡು ಬಂದಿದ್ದಾರೆ. ಈ ಒಂದು ನೀರಾ ಎನ್ನುವ ಪಾನೀಯ ಏನು ಇದೆ, ಅದು ಹಾನಿಕರವಲ್ಲ. ಕೆಟ್ಟದ್ದು ಅಲ್ಲ ಎನ್ನತಕ್ಕಂಥಹ ಮಾತನ್ನು ಅವರು ಕೂಡ ಹೇಳಿದ್ದಾರೆ ಎನ್ನುವ ಮಾತನ್ನು ಕೇಳಿದಾಗ ನನಗೆ ಅನ್ನಿಸುತ್ತದೆ. ಇದನ್ನು ಏಕೆ ಸರಳೀಕರಣ ಮಾಡಬಾರದು, ರೈತನಿಗೆ ಒಂದು ಅನುಕೂಲ ಮಾಡಬಾರದು ಎನ್ನತಕ್ಕದ್ದನ್ನು, ಈ ಒಂದು ಮನವಿಯನ್ನು ತಮ್ಮ ಮುಂದೆ ಇವತ್ತು ಇಡಲು ಇಚ್ಛಿಪಡುತ್ತೇನೆ. ನಮ್ಮ ಮಾನ್ಯ ತೋಟಗಾರಿಕಾ ಮಂತ್ರಿಗಳು ಗಮನಿಸಬೇಕು. ತಾಳೆ ಎಣ್ಣೆ ವಿಚಾರ. ತಾಳೆ ಎಣ್ಣೆ ತಂದರೂ ತಂದರೂ, ಏನು ಪ್ರಚಾರ ಮಾಡಿದರು ಎಂದರೆ ಎಲ್ಲಾ ಊರಲ್ಲೂ ಹಾಕಿಸಿ ಬಿಟ್ಟರು. ನನಗೂ ತಂದು ಹಾಕಿಸಿ ಬಿಟ್ಟರು. ಅದನ್ನು ತೆಗೆದುಕೊಳ್ಳುವವರೂ ಇಲ್ಲ.

ಎಣ್ಣೆ ಮಾಡುವವರೂ ಇಲ್ಲ, ಕೊಡುವವರೂ ಇಲ್ಲ. ಏಕೆ ಸಾರ್ ಇಂತಹ ಸ್ಕೀಮ್‌ಗಳನ್ನು ತಂದು ನನಗೆ ಪ್ರಾಣ ತೆಗೆಯುವುದು? ನಾನು ಬೇಡ ಎಂದರೂ ಪ್ರಾಣ ತೆಗೆದು ನನಗೆ ಎಲ್ಲಾ ಹಾಕಿಸಿಬಿಟ್ಟರು. ಇವತ್ತು ಅದನ್ನು ತೆಗೆದುಕೊಳ್ಳುವವರೇ ಇಲ್ಲ. ಏಕೆಂದರೆ ಇವತ್ತು ಹೊರಗಡೆಯಿಂದ ಇಂಪೋರ್ಟ್ ಮಾಡಿ ತೆಗೆದುಕೊಳ್ಳುತ್ತಾರೆ. ಅದನ್ನು ಕೊಂಡು ಕೊಳ್ಳಬೇಕಾದಂತಹ ಫ್ಯಾಕ್ಟರಿಯವರು ಅದನ್ನು ಪ್ರಾರಂಭ ಮಾಡಲು ರೆಡಿ ಇಲ್ಲ, ಕೊಂಡುಕೊಳ್ಳಲು ತಯಾರಿಲ್ಲ. ಏನು ಧರ್ಮ ಸಂಕಟ ಸಾರ್ ಇದು. ನಮ್ಮ ರೈತರಿಗೆ ಲೆಕ್ಕ ಬರೆಯಲು ಬರುವುದಿಲ್ಲ, ಪೆದ್ದ ಎಂದುಕೊಂಡು ಎಲ್ಲವನ್ನೂ ತಂದು ನನ್ನ ತಲೆಯ ಮೇಲೆ ಹಾಕಿ ಬಿಡುವುದೇ? ಇದು ಯಾವ ನ್ಯಾಯ? ದಯಮಾಡಿ ತಾವು ಇದರ ಬಗ್ಗೆ ಚಿಂತನೆ ಹರಿಸಬೇಕಾಗುತ್ತದೆ. ತಾಳೆ ಎಣ್ಣೆ ಬಗ್ಗೆ You will have to revise the whole system, whole scheme also. ಇದು ಬಹಳ ಹಾನಿಕರ ಮಾಡಿದ್ದಾರೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಚ್ಛೆಪಡುತ್ತಿದ್ದೇನೆ. ನಮ್ಮ ವೆಟರಿನರಿ ಡಿಪಾರ್ಟ್‌ಮೆಂಟ್ ವಿಚಾರ. ಈ ವೆಟರಿನರಿ ಡಿಪಾರ್ಟ್‌ಮೆಂಟ್ ಬಗ್ಗೆ ನಾನೇನು ಹೇಳಲು ಸಾಧ್ಯ? ನಾನೊಬ್ಬ ಆಡಳಿತ ಪಕ್ಷದ ಸದಸ್ಯನಾಗಿ ನಾನೇದರೂ ಸರಿಯಾಗಿಲ್ಲದೆ ಇರುವುದನ್ನು ಸರಿ ಇಲ್ಲ, ಎಂದು ಹೇಳಿದರೆ ನನ್ನನ್ನು ನೋಡುವ ದೃಷ್ಟಿಯೇ ಬೇರೆ ಆಗುತ್ತದೆ. ತಾವು ಅನ್ಯಥಾ ಭಾವಿಸಬಾರದು. ಇದು ಎಲ್ಲರಿಗೂ ಸಂಬಂಧಪಟ್ಟಂತಹ ವಿಚಾರ. ಈ ವೆಟರಿನರಿ ಇಲಾಖೆಯಲ್ಲಿ ಎಷ್ಟು ಪ್ರಾಣಿಗಳು ಇದ್ದಾವೊ; ನಮ್ಮ ಹಸುಗಳು ಇದ್ದಾವೋ ಅದಕ್ಕೆ ತಕ್ಕಂತೆ ಸಿಬ್ಬಂದಿ ಇಲ್ಲ. ಆ ಸಿಬ್ಬಂದಿಗೆ ತಕ್ಕಂತೆ ಔಷಧಿ ಇಲ್ಲ. ಆ ಪ್ರಾಣಿಗಳಿಗೆ ತಕ್ಕಂತೆ ದುಡ್ಡು ಕೊಡುವ ಹಾಗಿಲ್ಲ, ಔಷಧಿ ಬರುವ ಹಾಗೆ ಇಲ್ಲ. ಹೇಗೆ ಈ ಪ್ರಾಣಿಗಳು ಉಳಿಯುತ್ತವೆ? ನನಗೇ ಗೊತ್ತು. ನಮ್ಮ ಮೈಸೂರು ತಾಲ್ಲೂಕಿನಲ್ಲಿ 19 ವೆಟರಿನರಿ ಆಸ್ಪತ್ರೆಗಳು. ಇವತ್ತು ಔಷಧಿ ಇಲ್ಲ, ಸಿಬ್ಬಂದಿ ಇಲ್ಲ. ಕೊರತೆ ಇದೆ. ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಕೊಡಿ ಎಂದಾಗ ನಾನು ಸರಿ ಮಾಡುತ್ತೇನೆ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದಾರೆ. ಇಲ್ಲಿ ಅವರು ದಯಮಾಡಿ ಒಂದು ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ವರ್ಲ್ಡ್ ಬ್ಯಾಂಕಿನವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಯಾವ ರೀತಿ ನಿರ್ವಹಣೆ ಮಾಡಬೇಕು? ಎಷ್ಟು ಔಷಧಿಗಳನ್ನು ಕೊಂಡುಕೊಳ್ಳಬೇಕಾದರೆ ಪಶುಗಳಿಗೆ ಏನು ಇಡಬೇಕು? ಎಲ್ಲಿ ತೊಟ್ಟಿ ಕಟ್ಟಬೇಕು? ಆಸ್ಪತ್ರೆ ಹೇಗೆ ಕಟ್ಟಬೇಕು? ಎಷ್ಟು ಪಶುಗಳಿಗೆ ಎಷ್ಟು ಆಸ್ಪತ್ರೆ? ಇದೆಲ್ಲಾ ಒಂದು ಗೈಡ್‌ಲೈನ್ಸ್ ಇದೆ. ಅದನ್ನು ತಾವು ಜಾರಿಗೆ ತಂದಿದ್ದೀರಾ? ಇನ್ನೂ ಜಾರಿಗೆ ಬಂದಿಲ್ಲ ಅದು. ಅದನ್ನು ಏಕೆ ಜಾರಿಗೆ ತಂದಿಲ್ಲ ಎನ್ನುವುದೇ ಒಂದು ದೊಡ್ಡ ಪ್ರಶ್ನೆ ಆಗಿದೆ. ಈಸ್ಟರ್ನ್ ಸ್ಟೇಟ್‌ಗೆ ಸುಮಾರು 6-7 ತಿಂಗಳ ಹಿಂದೆ ಸ್ಟ್ಯಾಂಡಿಂಗ್ ಕಮಿಟಿಯವರು ಟೂರ್ ಹೋಗಿದ್ದೆವು. ನೇಫಾ, ಮಣಿಪುರಕ್ಕೆಲ್ಲಾ ಹೋಗಿದ್ದೆವು. ಅಲ್ಲಿ ಹೋದಾಗ ನಾವು ನೋಡಿದೆವು. ಅಲ್ಲೆಲ್ಲಾ ವೆಟರಿನರಿ ಯೂನಿವರ್ಸಿಟಿಯನ್ನು ಸಣ್ಣ ಸಣ್ಣ ರಾಜ್ಯದವರು ಮಾಡಿಕೊಂಡಿದ್ದಾರೆ. ನಾವು ಇಷ್ಟೊಂದು ದೊಡ್ಡ ರಾಜ್ಯದಲ್ಲಿದ್ದು ಇಷ್ಟೊಂದು ಹಸುಗಳು ಇದ್ದರೂ ಹಾಲು ಸಿಗದೇ ಒದ್ದಾಡುವುದು ಜಾಸ್ತಿ ಆಗಿ ಬಿಟ್ಟಿರುವುದು. ಇದೆಲ್ಲಾ ಇದ್ದರೂ ಸಹ ವೆಟರಿನರಿ ಯೂನಿವರ್ಸಿಟಿ ಮಾಡುವುದಿಲ್ಲ

ಎಂದರೆ ಇದು ಯಾವ ನ್ಯಾಯ? ನಮ್ಮ ಕರ್ನಾಟಕ ರಾಜ್ಯದಲ್ಲಿ ಏಕೆ ಮಾಡಬಾರದು? ಎಲ್ಲಕ್ಕೂ ಒಂದು ಯೂನಿವರ್ಸಿಟಿಯನ್ನು ತಾವು ಮಾಡಿದ್ದೀರಿ. ವೆಟರಿನರಿ ಯೂನಿವರ್ಸಿಟಿ ಎಂದು ಹೇಳಿ ತಾವ್ಯಾಕೆ ಸ್ಥಾಪನೆ ಮಾಡಬಾರದು? ಈ ಬಗ್ಗೆ ಸರ್ಕಾರ ಸ್ವಲ್ಪ ಚಿಂತನೆ ಹರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಮೀನುಗಾರಿಕಾ ಸಚಿವರ ಗಮನವನ್ನು ಈ ಸಂದರ್ಭದಲ್ಲಿ ಸೆಳೆಯಲು ನಾನು ಇಚ್ಛಿಪಡುತ್ತೇನೆ. ಸೀಗಡಿ ಮೀನನ್ನು ಆಂಧ್ರದಲ್ಲಿ ಬೆಳೆದು ಕೋಟಿ ಕೋಟಿಗಟ್ಟಲೆ ಸಂಪಾದನೆಯನ್ನು ಇವತ್ತು ರೈತರು ಮಾಡಿದ್ದಾರೆ. ಪ್ರಾನ್ಸ್‌ನ್ನು ಕರ್ನಾಟಕದಲ್ಲಿ ಬೆಳೆಯುವಂತಹ ಕಾರ್ಯಕ್ರಮಗಳು ಇಲ್ಲ. ಈ ಫಿಷರಿ ಡಿಪಾರ್ಟ್‌ಮೆಂಟ್‌ನಲ್ಲಿ ಕಾರ್ಯಕ್ರಮ ಇಲ್ಲ. ಫೋಸ್ಟರ್ಸ್ ನೋಡಿ ಬೇಕಾದರೆ. ನಾನು ಆಂಧ್ರದಲ್ಲಿ ಕಣ್ಣಾರೆ ನೋಡಿದ್ದೇನೆ. ಈ ಸೀಗಡಿ ಮೀನನ್ನು ಎಕ್ಸ್‌ಪೋರ್ಟ್ ಮಾಡಿ ಕೋಟಿಗಟ್ಟಲೆ ದುಡ್ಡು ರೈತ ಮಾಡುತ್ತಿದ್ದಾನೆ. ಇದನ್ನು ಏಕೆ ಕರ್ನಾಟಕದಲ್ಲಿ ಇಂಟ್ರಡ್ಯೂಸ್ ಮಾಡಿಲ್ಲಅ ನಾವು ಆಂಧ್ರದ ಪಕ್ಕದಲ್ಲಿಯೇ ಇದ್ದೇವಲ್ಲಾ. ಇದು ಎಲ್ಲಾ ತಾಲ್ಲೂಕಿನಲ್ಲೂ ಕೈ ಆಡಿಸುತ್ತದೆ. ಲೋಕಲ್ ಆಗಿರತಕ್ಕ ವಿಲೇಜ್ ಪಂಚಾಯತ್, ಅಲ್ಲಿರತಕ್ಕಂಥ ಸೊಸೈಟಿಯವರು ಅವರ ಮೇಲೆ ಇವರು ತಯಾರಿ ಮಾಡುತ್ತಾರೆ. ಅವನು ಎಲ್ಲಾ ಕಡೆ ನಿಭಾಯಿಸುತ್ತಿದ್ದಾನೆ. ರಾಜಕೀಯವಾಗಿ ಇವತ್ತು ಆ ಫೆಡರೇಷನ್‌ನಲ್ಲಿ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನತಕ್ಕ ವಿಚಾರದ ಬಗ್ಗೆ ತಾವು ಆಡಿಟ್ ರಿಪೋರ್ಟನ್ನು ನೋಡಿದರೆ ಗೊತ್ತಾಗುತ್ತದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬಾರದು. ದಯವಿಟ್ಟು ಈ ಫೆಡರೇಷನ್ ರದ್ದು ಮಾಡಿದರೂ ಚಿಂತೆ ಇಲ್ಲ. ನಮ್ಮ ಲೋಕಲ್ ಸೊಸೈಟಿಗಳಿಗೆ ತಾವು ಎನ್‌ಕರೇಜ್ ಮಾಡಬೇಕು ಎನ್ನುವಂತಹ ಮನವಿಯನ್ನು ನಾನು ಈ ಸಂದರ್ಭದಲ್ಲಿ ಅರ್ಪಿಸಲಿಕ್ಕೆ ಇಚ್ಛಿಪಡುತ್ತೇನೆ. ಭಾರೀ ನೀರಾವರಿ ವಿಚಾರದಲ್ಲಿ ನಾನು ಒಂದೇ ಮಾತು ಹೇಳಿ ಬಿಡುತ್ತೇನೆ.

ವೈಸ್ ಛೇರ್ಮನ್ :— ನೀವು ಹೇಳಿ ಐದು ನಿಮಿಷ ಆಯಿತು. ಇನ್ನೂ ಪುನಃ ಐದು ನಿಮಿಷ ಬೇಕಾ?

ಮಾನ್ಯ ಸದಸ್ಯರು :— ನೀವು ಬೆಲ್ ಹೊಡೆಯುತ್ತಿರುವುದು ಚಪ್ಪಾಳೆ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ.

ಶ್ರೀ ವಿ. ಪಾಪಣ್ಣ :— ಎಲ್ಲಾ ವಿಷಯ ಮಾತನಾಡಲು ಬಿಡಿ. ಏಕೆಂದರೆ ಸರ್ಕಾರಕ್ಕೆ ನಾವೇನಾದರೂ ಮಾತನಾಡಿದರೆ ಎಲ್ಲರೂ ಗಲಾಟೆ ಮಾಡುತ್ತಿದ್ದರು. ಈಗ ಸರ್ಕಾರಕ್ಕೆ ಅವರು ಸರಿಯಾಗಿ ಹೇಳುತ್ತಿದ್ದಾರೆ. ದಯಮಾಡಿ ಅವರಿಗೆ ಅವಕಾಶ ಕೊಡಿ.

ವೈಸ್ ಛೇರ್ಮನ್ :— ನಮಗೆ ಯಾವುದನ್ನು ಮಾತನಾಡಿಸಬೇಕು ಎಂದು ಗೊತ್ತಿದೆ. ನೀವು ಮಾತನಾಡುತ್ತಿದ್ದರೆ ಅವರ ಸಮಯದ ಅವಧಿ ಮುಗಿಯುತ್ತದೆ. ಇನ್ನು ನೀವು ಮಾತನಾಡಿ.

ಶ್ರೀ ಎ.ಎಸ್. ಗುರುಸ್ವಾಮಿ :— ಸಾರ್ ಮಧ್ಯಾಹ್ನ ಊಟವನ್ನೂ ಮಾಡದೇ ಏನೋ ಬರೆದುಕೊಂಡು ಬಂದಿರುತ್ತಾರೆ. ಎಲ್ಲವನ್ನೂ ಹೇಳುವುದಕ್ಕೆ ಅವಕಾಶ ಕೊಡಿ.

ವೈಸ್ ಛೇರ್ಮನ್ :— ನೀವು ಊಟ ಮಾಡಲಿಲ್ಲ ಎಂದು ಹೇಳಿಬಿಟ್ಟು ಸಮಯದ ಅವಧಿ ಕುಂಠಿತಗೊಳಿಸಲು ಆಗುತ್ತದಾ?

ಶ್ರೀ ಎ.ಎಸ್. ಗುರುಸ್ವಾಮಿ :— ನನಗೋಸ್ಕರ ಓದಿಕೊಂಡು ಬಂದಿಲ್ಲ.

ವೈಸ್ ಛೇರ್ಮನ್ :— ಈಗಾಗಲೇ 35 ನಿಮಿಷ ಕಾಲಾವಕಾಶ ಕೊಟ್ಟಿದ್ದೇವೆ. ನಿಮಗೆ 15 ನಿಮಿಷ ಅಧ್ಯಕ್ಷರು ಕೊಟ್ಟಿದ್ದು.

ಶ್ರೀ ಎ.ಎಸ್. ಗುರುಸ್ವಾಮಿ :— ಇಲ್ಲಿ ಮಧ್ಯಮ ನೀರಾವರಿ ಇದೆ. ಇಲ್ಲಿ ಏನು ಆಗಿದೆ ಎಂದರೆ ಪೊಟೆನ್ಷಿಯಲ್ ಇರಿಗೇಟೆಡ್ ಪ್ರಾಜೆಕ್ಟ್ಸ್ ನಮ್ಮಲ್ಲಿ ಇದ್ದಾವೆ. ಇಮ್ಮೀಡಿಯಟ್ ಆಗಿ ಒಂದು ವರ್ಷ, ಎರಡು ವರ್ಷದಲ್ಲಿ ನೀರು ಹಾಯಿಸುವಂತಹ ಸ್ಕೀಮ್‌ಗಳಿಗೆ ಜಾಸ್ತಿ ದುಡ್ಡು ಕೊಟ್ಟು ಬೇರೆ ಲಾಂಗ್ ಟರ್ಮ್ ಪಾಲಿಸೀಸ್ ಏನು ಇದ್ದಾವೆ, ಇವಕ್ಕೆ ಆಮೇಲೆ ಕೊಡುವಂತಹ ಒಂದು ಪಾಲಿಸಿಯನ್ನು ಜಾರಿಗೆ ತರುವುದು ಬಹಳ ಒಳ್ಳೆಯದು ಎಂದು ನಾನು ಹೇಳಲು ಇಚ್ಛಿಪಡುತ್ತೇನೆ. ಮತ್ತೆ ನಮ್ಮ ಲೋಕೋಪಯೋಗಿ ಇಲಾಖೆಯ ವಿಚಾರ. ಮೈಸೂರಿನಲ್ಲಿ ಕೆಲವು ಇಲಾಖೆಗಳು ಇದ್ದಾವೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಪಿಡಬ್ಲ್ಯುಡಿಯಲ್ಲಿ ಇದೆ. ದುಡ್ಡೇ ಕೊಟ್ಟಿಲ್ಲ, ಬಿಲ್ ಕೊಟ್ಟಿಲ್ಲ, ಎಲ್‌ಓಸಿ ಬಂದಿಲ್ಲ ಎಂದು ಹಗಲೆಲ್ಲಾ ಗಲಾಟೆ ಮಾಡುತ್ತಾರೆ. ಎಷ್ಟು ಕೆಲಸ ಆಗಿದೆ ಅಷ್ಟಕ್ಕೆ ಎಲ್‌ಓಸಿ ಕೊಡಿ. ಎಷ್ಟು ಕೆಲಸ ಇದೆ ಅಷ್ಟು ಕೆಲಸ ಮಾಡಿಸಿ. ಮಾಡುವ ಕೆಲಸವನ್ನು ಚೊಕ್ಕವಾಗಿ ಮಾಡಿಸಿಕೊಡಬೇಕು ಎನ್ನುವುದು ನನ್ನ ಒಂದು ಮನವಿ.

ಇನ್ನು ಮೆಡಿಕಲ್ ಎಜ್ಯುಕೇಷನ್ ವಿಚಾರ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರಲ್ಲಿ ನನ್ನದು ಒಂದು ಸಣ್ಣ ಮನವಿ ಇದೆ. ಏನು ಮನವಿ ಅಂದರೆ ಹಿಂದೆ ನಾವೆಲ್ಲ ಓದುತ್ತಿದ್ದಂತಹ ಕಾಲದಲ್ಲಿ ಮೆಡಿಕಲ್ ಸ್ಕೂಲ್ ಎಂದು ಹೇಳಿ ಮೆಡಿಕಲ್ ಕಾಲೇಜಲ್ಲೇ ಇತ್ತು. ಎಂಬಿಬಿಎಸ್ ಓದುವವರು ಒಂದು ವರ್ಗ. ಬಿಇ ಓದುತ್ತಿದ್ದವರು ಇನ್ನೊಂದು ವರ್ಗ. ಪೊಲಿಟಿಕಲ್ ಡಿಪ್ಲೊಮೋ ಮಾಡುತ್ತಿದ್ದವರದ್ದು ಒಂದು ವರ್ಗ ಇತ್ತು. ನಿಮಗೆಲ್ಲಾ ಗೊತ್ತಿದೆ. ಯಾರಿಗೆ ಕೆಪ್ಯಾಸಿಟಿ ಇತ್ತು ಅವರು ಬಿಇ ಓದುತ್ತಿದ್ದರು. ಯಾರಿಗೆ ದುಡ್ಡು ಇತ್ತು, ಬುದ್ಧಿವಂತರು ಇದ್ದರು ಅವರು ಎಂಬಿಬಿಎಸ್ ಮಾಡುತ್ತಿದ್ದರು. ಯಾರಿಗೆ ಓದಲು ದುಡ್ಡಿನ ಅನಾನುಕೂಲತೆ ಇತ್ತು, ಅನುಕೂಲತೆಗಳು ಇರಲಿಲ್ಲ, ಅವರೆಲ್ಲಾ ಮೆಡಿಕಲ್ ಸ್ಕೂಲುಗಳಿಗೆ ಹೋಗಿ ಎಲ್‌ಎಂಪಿ ಕೋರ್ಸ್ ಮಾಡುತ್ತಿದ್ದರು. ಎಲ್.ಎಂ.ಪಿ. ಕೋರ್ಸ್ ಮಾಡಿದ ವೈದ್ಯರುಗಳೇ ಅವೊತ್ತು ಹಳ್ಳಿಗಳಲ್ಲಿ ಇದ್ದುದು. ಬದಲಿಗೆ ಅವರು ಎಂ.ಬಿ.ಬಿ.ಎಸ್. ಮಾಡಿದವರಲ್ಲ, ಇದನ್ನು ತಾವು ಜ್ಞಾಪಿಸಿಕೊಳ್ಳಬೇಕು. ಹಳ್ಳಿಗಳಲ್ಲಿದ್ದು ಯಾರು ಜೀವನ ಸಾಗಿಸಿ

ಬಂದಿದ್ದಾರೋ ಅವರಿಗೆಲ್ಲಾ ಗೊತ್ತಿದೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ವೈದ್ಯರಾರೂ ಹೋಗುವುದಿಲ್ಲವೆಂಬ ಮಾತುಗಳನ್ನು ನಾವು ಅನೇಕ ಸಲ ಕೇಳುತ್ತಿದ್ದೇವೆ. ಹಳ್ಳಿಗಳಲ್ಲಿ ಸೇವೆ ಮಾಡಲು ಯಾವ ವೈದ್ಯರು ಹೋಗುವುದಿಲ್ಲವೆನ್ನುತ್ತಾರೋ ಅವರನ್ನು ಬಿಟ್ಟುಬಿಡಿ. ಬದಲಿಗೆ ಎಲ್.ಎಂ.ಪಿ. ಕೋರ್ಸ್ ಯಾರು ಮಾಡಿರುತ್ತಾರೋ ಅಂಥವರನ್ನು ತಯಾರು ಮಾಡಿ ಹಳ್ಳಿಗಳಲ್ಲಿ ಸೇವೆ ಸಲ್ಲಿಸಲು ಕಳುಹಿಸಿಕೊಡಿ, ಅವರು ಹೋಗುತ್ತಾರೆ. ಏಕೆಂದರೆ, ಅವರ ಬದುಕಿನ ಪ್ರಶ್ನೆಯಾಗಿರುತ್ತದೆ. ಒಂದು ವೇಳೆ ಇವರು ಬುದ್ಧಿವಂತರಾಗಿದ್ದರೆ ಎಂ.ಬಿ.ಬಿ.ಎಸ್. ಕೋರ್ಸ್ ಮಾಡುವುದಕ್ಕೆ ಹೇಳಿ, ಅವರು ಕೋರ್ಸ್ ಮುಗಿಸಿದ ಬಳಿಕ ಉನ್ನತ ಖಾಸಗಿ ಆಸ್ಪತ್ರೆಗಳಿಗೆ ಸೇವೆ ಸಲ್ಲಿಸಲು ಸೇರಿಕೊಳ್ಳುತ್ತಾರೆ. ಆದುದರಿಂದ, ತಾವು ಈ ಕುರಿತು ಯೋಚಿಸಬೇಕು. ಇರುವ ಮೆಡಿಕಲ್ ಕಾಲೇಜುಗಳಲ್ಲಿಯೇ ಈ ವ್ಯವಸ್ಥೆಯನ್ನು ಮಾಡಬಹುದು, ಇದಕ್ಕೆ ಹೊಸದಾಗಿ ಅನುದಾನ ಬೇಕಾಗುವುದಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಕುಟುಂಬ ಕಲ್ಯಾಣ ಯೋಜನೆ ಬಗ್ಗೆ ಹೇಳುವುದಾದರೆ ಲಿಂಕ್ ರೆಸ್ಪಾನ್ಸಿಬಿಲಿಟಿ ತರುವುದರ ಕುರಿತು ರಾಜಗೋಪಾಲಚಾರಿಯವರು ಬಹಳಷ್ಟು ವರ್ಷಗಳ ಹಿಂದೆಯೇ ಹೇಳಿದ್ದರು. ಅಂದರೆ, ಕುಟುಂಬ ನಿಯಂತ್ರಣ ಚಿಕಿತ್ಸೆ ಮಾಡಿಸಿಕೊಂಡವರಿಗೆ ಸರ್ಕಾರದ ವತಿಯಿಂದ ಇಂತಿಂಥ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದೆಂದು ಘೋಷಿಸಿದರೆ ಜನರು ತಾವಾಗಿ ಮುಂದೆ ಬರುತ್ತಾರೆಂಬುದು. ಆದಕಾರಣ 'ಲಿಂಕ್ ರೆಸ್ಪಾನ್ಸಿಬಿಲಿಟಿ' ಕುರಿತು ಸರ್ಕಾರ ಗಮನಹರಿಸಬೇಕು. ಇನ್ನು ನಾನು ಹೊರದೇಶದಲ್ಲಿ ಹೋಗಿ ಬಂದಿರುವಂಥ ಸಂದರ್ಭದಲ್ಲಿ ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದಂತೆ ನನ್ನ ಅನುಭವದ ಕೆಲವು ವಿಚಾರಗಳನ್ನು ಹೇಳುವುದಾದರೆ, All Universities are totally open. ಅಲ್ಲಿ ನಿರ್ಬಂಧವಿಲ್ಲ. ಬುದ್ಧಿವಂತರು ಯಾರಿದ್ದಾರೋ ಅವರು ಓದಬಹುದು, ದಡ್ಡರು ಹೊರಗಡೆ ಬರಬಹುದು. ಇಷ್ಟೇ ಅಲ್ಲಿನ ಫಿಲಾಸಫಿ. ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಕರೆಸ್ಪಾಂಡೆನ್ಸ್ ಕೋರ್ಸ್ ಇದ್ದು, ಅಪ್ಲೈಡ್ ಸಬ್ಜೆಕ್ಟ್ಸ್ ಅನ್ನು ಇಂಟ್ರಡ್ಯೂಸ್ ಮಾಡಿರುವುದಿಲ್ಲ. ಸದನದಲ್ಲಿ ಮಾನ್ಯ ಮಂತ್ರಿಗಳಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಎಲ್ಲಾ ಕ್ಷೇತ್ರಗಳಲ್ಲೂ ಅಪ್ಲೈಡ್ ಸಬ್ಜೆಕ್ಟ್ಸ್ ಇದ್ದು ಜೀವನದಲ್ಲಿ ದಿನನಿತ್ಯವೂ ನಾವು ಉಪಯೋಗಿಸುವಂಥ ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯವನ್ನೊಳಗೊಂಡ ಒಂದು ಕೋರ್ಸ್ ಅನ್ನು ಜಾರಿಗೆ ತಂದಲ್ಲಿ ಬಹಳಷ್ಟು ಮಕ್ಕಳಿಗೆ ಇದರಿಂದ ಅನುಕೂಲವಾಗುತ್ತದೆಂದು ವಿಚಾರ ಹೇಳುತ್ತೇನೆ. ಮತ್ತು 2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ ಆದಷ್ಟು ಬೇಗ ಜಾರಿಗೆ ಬರಲೆಂದು ಆಶಿಸುತ್ತೇನೆ. ಇನ್ನು ವಯಸ್ಕರ ಶಿಕ್ಷಣದ ಕುರಿತು ಹೇಳುವುದಾದರೆ, ಇದಕ್ಕಾಗಿ ಸರ್ಕಾರ ಕೋಟಿಗಟ್ಟಳೆ ಹಣ ಖರ್ಚು ಮಾಡುತ್ತಿರುವುದರಿಂದ ನಾನು ಇದಕ್ಕೊಂದು ಪರಿಹಾರ ಸೂಚಿಸಬಯಸುತ್ತೇನೆ. ಏನೆಂದರೆ, ನಾಟಕಗಳನ್ನು ಆಡಿಸುವ ಮಾಸ್ತರುಗಳು ರಾಜ್ಯಾದ್ಯಂತವಿದ್ದು, ಒಂದೊಂದು ತಾಲ್ಲೂಕಿನಲ್ಲೂ ನೂರು ಜನ ನಾಟಕದ ಮಾಸ್ತರರಿದ್ದಾರೆ. ಇವರ ಬಗ್ಗೆ ಹಳ್ಳಿಯ ಅನಕ್ಷರಸ್ಥ ಜನರಿಗೆ

ಬಹಳಷ್ಟು ಭಕ್ತಿ, ಗೌರವಗಳಿದ್ದು, ಮಾಸ್ತರರ ಕಾಲಿಗೆ ನಮಸ್ಕರಿಸಿ ನಾಟಕ ಕಲಿಯಬಯಸುತ್ತಾರೆ. ಆದುದರಿಂದ, ನಾಟಕದ ಮಾಸ್ತರುಗಳ ಹೆಸರುಗಳನ್ನು ನೋಂದಾಯಿಸಿಕೊಂಡು ಅವರ ಮುಖಾಂತರ ಅನಕ್ಷರಸ್ಥರಿಗೆ ಓದಲು, ಬರೆಯಲು ಕಲಿಸಿದಲ್ಲಿ ಇಂತಿಷ್ಟು ಹಣ ಕೊಡುವುದಾಗಿ ಸರ್ಕಾರ ಒಂದು ದರವನ್ನು ನಿಗದಿಪಡಿಸಬೇಕು. ಒಬ್ಬ ಅನಕ್ಷರಸ್ಥ ಓದಿ, ಬರೆಯಲು ಕಲಿತರೆ ರೂ.200 ಇಲ್ಲವೇ ರೂ.250 ಗಳನ್ನು ಕೊಡುವುದಾಗಿ ದರವನ್ನು ನಿಗದಿಪಡಿಸಿದಲ್ಲಿ ನಾಟಕದ ಮಾಸ್ತರು ಅನಕ್ಷರಸ್ಥ ಜನರನ್ನು ಆರು ತಿಂಗಳಿನಲ್ಲಿ ಸಾಕ್ಷರರನ್ನಾಗಿ ಮಾಡುತ್ತಾರೆ. ಸರ್ಕಾರ ಅವರಿಗೆ ಸಂಬಳ ಕೊಡಬೇಕಿಲ್ಲ. ಓದು, ಬರಹ ಕಲಿತಂಥ ವ್ಯಕ್ತಿಗೆ ಕೊನೆಯಲ್ಲಿ ಒಂದು ಪರೀಕ್ಷೆ ಇಟ್ಟು ಅದರಲ್ಲಿ ಆತ ಉತ್ತೀರ್ಣನಾದಲ್ಲಿ 150 ರೂ. ಇಲ್ಲವೇ 200 ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರದರವನ್ನು ನಿಗದಿಪಡಿಸಿ, ವಯಸ್ಕರ ಶಿಕ್ಷಣ ಪರಿಷತ್‌ನವರು ನಾಟಕದ ಮಾಸ್ತರರ ಸೇವೆಯನ್ನು ಇದಕ್ಕಾಗಿ ಬಳಸಿಕೊಳ್ಳುವ ಮೂಲಕ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪೊಲೀಸ್ ಇಲಾಖೆ ಕುರಿತು ಹೇಳುವುದಾದರೆ, ಮೈಸೂರು ತಾಲ್ಲೂಕಿನ ಮೇಗಲಾಪುರದಲ್ಲಿ ಆಗಿಂದಾಗ್ಗೆ ಕಾನೂನು, ಸುವ್ಯವಸ್ಥೆ ಸಮಸ್ಯೆ ಉದ್ಭವಿಸುವುದರಿಂದ ಅಲ್ಲಿಗೆ ಒಂದು ಔಟ್ ಪೋಸ್ಟ್ ಪೊಲೀಸ್ ಠಾಣೆ ಹಾಗೂ ಎ.ಪಿ.ಎಂ.ಸಿಯಲ್ಲಿ ಒಂದು ಔಟ್ ಪೋಸ್ಟ್ ಪೊಲೀಸ್ ಠಾಣೆ ಹಾಗೂ ಕಡಕೋಳ ಗ್ರಾಮದಲ್ಲಿ ಒಂದು ಪೊಲೀಸ್ ಠಾಣೆ ತೆರೆಯುವುದಕ್ಕೆ ಮಾನ್ಯ ಗೃಹ ಮಂತ್ರಿಗಳು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಬೆಂಗಳೂರಿನ ಜಾಲಹಳ್ಳಿ ಪಕ್ಕದಲ್ಲಿ ಫ್ಲೈಯಿಂಗ್ ಸ್ಕೂಲ್ ಇದ್ದು ಸದರಿ ಶಾಲೆಯಲ್ಲಿ ಶ್ರೀಮಂತರ ಮಕ್ಕಳು ಮಾತ್ರ ಕಲಿಯುತ್ತಿದ್ದು, ಇಲ್ಲಿ ಪ್ರಾಂಶುಪಾಲರಾಗಲಿ, ನಿರ್ದೇಶಕರಾಗಲೀ ಯಾರೂ ಇಲ್ಲದಿರುವುದರಿಂದ ಇದಕ್ಕಾಗಿ ಎಷ್ಟು ಲಕ್ಷ ರೂಪಾಯಿಗಳು ಖರ್ಚಾಗುತ್ತದೆಂದು ಬಜೆಟ್ ನೋಡಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಇಷ್ಟು ಮೊತ್ತದ ಬಜೆಟ್ ಅನ್ನೂ ಸಹ ನಾವು ನಮ್ಮ ರೈತರ ಅನುಕೂಲಕ್ಕಾಗಿ ಇಟ್ಟಿಲ್ಲದಿರುವುದರ ಬಗ್ಗೆ ಖೇದವುಂಟಾಯಿತು. ಇಂತಹ ಒಂದು ದೊಡ್ಡ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಲಿ, ನಿರ್ದೇಶಕರಾಗಲೀ ಯಾರೂ ಇಲ್ಲದಿರುವುದರಿಂದ ಬಹಳಷ್ಟು ಮೊತ್ತದ ಬಜೆಟ್ ಇದಕ್ಕಾಗಿ ವೆಚ್ಚವಾಗುತ್ತಿರುವುದರಿಂದ ಈ ಕುರಿತು ಪರಿಶೀಲಿಸುವುದು ಒಳ್ಳೆಯದು ಮತ್ತು ಅದಕ್ಕಾಗಿ ಒದಗಿಸಿಕೊಡುತ್ತಿರುವ ಹಣವನ್ನು ಉಳಿಸಿ ಬೇರೆ ಕ್ಷೇತ್ರದ ಅಭಿವೃದ್ಧಿಗೆ ವಿನಿಯೋಗಿಸಿದಲ್ಲಿ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಜವಳಿ ಹಾಗೂ ರೇಷ್ಮೆ ಕುರಿತು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಹಿಂದೆ ರೇಷ್ಮೆ ವಸ್ತ್ರ ಧರಿಸುತ್ತಿದ್ದ ವ್ಯಕ್ತಿ ಬಗ್ಗೆ ಅತ್ಯಂತ ಗೌರವವಿರುತ್ತಿತ್ತು. ಊರಿನ ಗೌಡ ರೇಷ್ಮೆ ಪೇಟ ಹಾಕಿಕೊಂಡು ಬರುತ್ತಿದ್ದರೆ ಆತ ದೊಡ್ಡ ಮನುಷ್ಯನೆಂದು ಆತನಿಗೆ ಎಲ್ಲರೂ ಗೌರವಿಸುತ್ತಿದ್ದರು. ಆದರೆ ಇವೊತ್ತು ರೇಷ್ಮೆಗೂ ಹಾಗೂ ರೇಷ್ಮೆ ಪೇಟಕ್ಕೂ ಬೆಲೆ ಇಲ್ಲದಂತಾಗಿದೆ ಮತ್ತು ರೇಷ್ಮೆ ಬೆಳೆಯುವವನಿಗೆ ದಿಕ್ಕು-ದೆಸೆ ಕಾಣದಾಗಿದೆ. ಇಂತಹ ಪರಿಸ್ಥಿತಿ ಏಕೆ ಉಂಟಾಯಿತು? ಕೇಂದ್ರ ಸರ್ಕಾರದ ನೀತಿ ಬಗ್ಗೆ ರಾಜ್ಯ ಸರ್ಕಾರ ದೂರುವುದು ಹಾಗೂ ರಾಜ್ಯದ ಬಗ್ಗೆ ಕೇಂದ್ರ ಸರ್ಕಾರ

ದೂರುವುದು. ಈ ರೀತಿ ಪರಸ್ಪರ ದೂರುತ್ತಿರುವುದರಿಂದ ಈ ಮಧ್ಯೆ ಚೀನಾದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ. ಇದು ನ್ಯಾಯವೇ? ಏಕೆ ಇದಕ್ಕೆ ಪರಿಹಾರ ಕಂಡುಹಿಡಿಯುತ್ತಿಲ್ಲ? ಎಸ್ಕೇಪಿಸಂ ಏಕೆ? ಆಮದು ಮತ್ತು ರಫ್ತು ನೀತಿಯಿಂದ ರೇಷ್ಮೆಗೆ ಹಾಗೂ ರೇಷ್ಮೆ ಬೆಳೆಗಾರರು ಸಾಕಷ್ಟು ನೋವು ಅನುಭವಿಸುತ್ತಿದ್ದಾರೆಂದು ಹೇಳಬಯಸುತ್ತೇನೆ. ಸದನದಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ತಮಗೆ ಗೊತ್ತಿರುವಂತೆ ಹಳ್ಳಿಗಳಲ್ಲಿ ಕೆಲವು ಕ್ರೀಡೆಗಳನ್ನು ಆಡುತ್ತಾರೆ. ಆ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕುರಿತು ತಾವೇಕೆ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ? ಅದಕ್ಕೆ ದುಡ್ಡೂ ಸಹ ಸರ್ಕಾರ ಖರ್ಚು ಮಾಡುವುದಿಲ್ಲ. ಕೇವಲ ನಗರ ಪ್ರದೇಶಗಳಲ್ಲಿ ಮಾತ್ರ ಕ್ರೀಡೆಗಳನ್ನು ಏರ್ಪಡಿಸಿ ಕ್ರೀಡೆಗಳನ್ನು ಆಡುವುದಕ್ಕೆ ಕೋಟಿಗಟ್ಟಳೆ ವ್ಯವಹಾರ ಮಾಡುತ್ತಿರುವುದರಿಂದ ಹಳ್ಳಿಗಳಲ್ಲಿ ಆಟವಾಡುವ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತೇಜನ ನೀಡುವ ಸಲುವಾಗಿ ತಾವು ಏನು ವ್ಯವಸ್ಥೆ ಮಾಡಿದ್ದೀರಿ? ಈ ಕುರಿತು ತಾವು ಗಮನಹರಿಸಬೇಕೆಂದು ಕೇಳುಕೊಳ್ಳುತ್ತೇನೆ. ನಾವು ಒಮ್ಮೆ ಹರಿಯಾಣ ರಾಜ್ಯಕ್ಕೆ ಹೋದ ಸಂದರ್ಭದಲ್ಲಿ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸುವ ಸಲುವಾಗಿ ಒಂದು ಪ್ರಾಧಿಕಾರ ರಚಿಸಿಕೊಂಡಿದ್ದು, ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಕ್ರಮ ಕೈಗೊಂಡಿರುವಂತೆ ಇಲ್ಲಿಯೂ ಅದೇ ರೀತಿಯ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಮಾನ್ಯ ಛೇರ್ಮನ್‌ರ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಮುಜರಾಯಿ ಮಂತ್ರಿಗಳಲ್ಲಿ ನನ್ನ ಮಹಾಮನವಿ ಏನೆಂದರೆ, ರಾಜ್ಯದಲ್ಲಿ ಶ್ರೀಮಂತ ದೇವಸ್ಥಾನಗಳಲ್ಲದೆ ಬಡ ದೇವಸ್ಥಾನಗಳೂ ಇದೆ ಜೊತೆಗೆ ವಕ್ಫ್ ಬೋರ್ಡ್ ಇದ್ದು, ವಕ್ಫ್ ಬೋರ್ಡಿನಲ್ಲಿ ಹೇಗೆ ಹಣವನ್ನು ಒಂದೆಡೆ ಕ್ರೋಢೀಕರಿಸಿಕೊಂಡು ಆ ಸಮಾಜದ, ಧರ್ಮದ ಏಳಿಗೆಗಾಗಿ ಕಾಳಜಿ ವಹಿಸಿ ಹಣ ವಿನಿಯೋಗಿಸುವಂತೆ, ರಾಜ್ಯದಲ್ಲಿ ಶ್ರೀಮಂತ ದೇವಸ್ಥಾನಗಳಿಂದ ಕೋಟಿಗಟ್ಟಲೆ ಆದಾಯ ಬರುತ್ತಿದ್ದರೆ, ಅಷ್ಟೇನೂ ಉತ್ಪತ್ತಿ ಬರದಿರುವ ಬಹಳಷ್ಟು ಬಡ ದೇವಸ್ಥಾನಗಳೂ ಇರುವುದರಿಂದ ವಕ್ಫ್ ಬೋರ್ಡ್ ಮಾದರಿಯಲ್ಲಿಯೇ ತಾವು ಒಂದು ಮಂಡಳಿ ಸ್ಥಾಪಿಸಿ ಬರುವ ಹಣವನ್ನೆಲ್ಲಾ ಒಂದೆಡೆ ಕ್ರೋಢೀಕರಿಸಿ ಹಣವನ್ನು ಸೂಕ್ತವಾಗಿ ವಿನಿಯೋಗಿಸಿ ಬಡ ಹಾಗೂ ಶ್ರೀಮಂತವಾಗಿರುವ ದೇವಸ್ಥಾನಗಳನ್ನು ಸಮಾನವಾಗಿ ತೆಗೆದುಕೊಂಡು ಹೋಗಲು ತಾವೇಕೆ ಪ್ರಯತ್ನಿಸಬಾರದು? ಈ ಬಗ್ಗೆ ನಾನು ಕಳೆದ ಅಧಿವೇಶನದ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದು, ಈಗಲೂ ಆ ಕುರಿತು ಒತ್ತಾಯಿಸುತ್ತಿದ್ದೇನೆ. ಇನ್ನು ಕೊನೆಯದಾಗಿ, ಸಬ್ ರಿಜಿಸ್ಟ್ರಾರ್ ಕಛೇರಿ ಮುಂದೆ ಮದುವೆಯಾಗಲು ಯಾರು ಬರುತ್ತಾರೋ ಅವರುಗಳಿಗೆ ದೇವಸ್ಥಾನಗಳಲ್ಲಿ ಮದುವೆ ಮಾಡಿಕೊಳ್ಳುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ, ಸರ್ಕಾರ ಮಂಡಿಸಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ನಾನು ನೀಡಿರುವ ಸಲಹೆ-ಸೂಚನೆಗಳೆಲ್ಲವನ್ನೂ ಸರ್ಕಾರ ಅಳವಡಿಸಿಕೊಳ್ಳುತ್ತದೆಂದು ಭಾವಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ತುರುವೇಕೆರೆ) :— ಮಾನ್ಯ ಛೇರ್ಮನ್‌ರವರೆ, ಸರ್ಕಾರ ಮಂಡಿಸಿರುವ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಇಡೀ ರಾಜ್ಯ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ನೀರಾವರಿಗೆ ಸಂಬಂಧಿಸಿದ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚಿಸುವುದಕ್ಕೆ ನಾನು ಇಚ್ಛಿಸುತ್ತಿದ್ದೇನೆ. ಇವೊತ್ತು ಗ್ರಾಮೀಣ ಜನರ ಬೇಡಿಕೆ ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿದ್ದು, ಈ ಪೈಕಿ ರಾಜ್ಯದ ಶೇಕಡ 70ರಷ್ಟು ಸಣ್ಣ ರೈತರು, ದೊಡ್ಡ ರೈತರು ಹಾಗೂ ಪರಿಶಿಷ್ಟ ಜಾತಿ : ವರ್ಗಗಳಿಗೆ ಸೇರಿರುವ ಕೂಲಿ ಕಾರ್ಮಿಕರಿಗಳೇ ಕೃಷಿ ಕ್ಷೇತ್ರವನ್ನು ಅವಲಂಬಿಸಿರುತ್ತಾರೆ. ಮತ್ತು ನಿರೀಕ್ಷಿಸಿರುವ ಮಟ್ಟದಲ್ಲಿ ಕೃಷಿ ಕ್ಷೇತ್ರದಿಂದ ಇವರಿಗೆ ಸರ್ಕಾರದ ವತಿಯಿಂದ ಅನುಕೂಲ ಸಿಗುತ್ತಿಲ್ಲದಿರುವುದು ನಮಗೆ ಗೋಚರವಾಗುತ್ತಿದೆ. ಕಾರಣ, ಇವೊತ್ತು ಸರ್ಕಾರ ಹತ್ತಾರು ಕೋಟಿ ರೂಪಾಯಿಗಳನ್ನು ಈ ಇಲಾಖೆಗಳ ಮುಖಾಂತರ ಬಿಡುಗಡೆ ಮಾಡುತ್ತಿದ್ದರೂ, ಆ ಹಣ ಗ್ರಾಮೀಣ ಜನರಿಗೆ ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲದಿರುವುದರಿಂದ ಸದರಿ ಕ್ಷೇತ್ರಗಳ ಮೇಲೆ ಅವಲಂಬಿಸಿರುವವರು ಅದನ್ನು ತೊರೆದು ಜೀವನೋಪಾಯಕ್ಕಾಗಿ ಪಟ್ಟಣ-ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ನಮ್ಮ ರಾಜ್ಯದಲ್ಲಿ

4.20 ಪಿ.ಎಂ.

ಸುಮಾರು 27 ಸಾವಿರ ಕಂದಾಯ ಗ್ರಾಮಗಳಿದೆ. ಇದರಲ್ಲಿ ಕೃಷಿಯನ್ನು ನಂಬಿಕೊಂಡಿರುವ ರೈತಾಪಿ ಜನರು ನಾವು, ಪ್ರಕೃತಿಯನ್ನು ನಂಬಿಕೊಂಡು ಕೆಲಸ ಮಾಡತಕ್ಕ ಜನರು ನಾವಾಗಿದ್ದೇವೆ. ನಮಗೆಲ್ಲ ಗೊತ್ತಿರುವಂತೆ ಹೋದ ವರ್ಷ ಅತಿವೃಷ್ಟಿಯಾಯಿತು. ನೂರಕ್ಕೆ ನೂರು ಭಾಗ ಕೈಗೆ ಬದಂಥ ಬೆಳೆ ಅತಿವೃಷ್ಟಿಯಿಂದ ಹಾಳಾಗಿರುವುದನ್ನು ನಾವು ನೋಡಿದ್ದೇವೆ. ಅದೇ ರೀತಿ ಬರಗಾಲದಿಂದ ಈ ವರ್ಷ ಒಂದು ಕಾಳು ಬಿತ್ತನೆಯನ್ನೂ ಮಾಡದೆಯೆ ಇರತಕ್ಕ ಪರಿಸ್ಥಿತಿ ಬಂದಿದೆ.

(5) ಪ್ರಕಟಣೆ

MR. CHAIRMAN :— Sri E.A. Rashetnikov, Deputy Minister for Atomic Energy from Russia and his team are witnessing the proceedings of the House from Speaker's gallery. On behalf of the House and on my behalf, I warmly welcome the delegates.

(6) ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ(ಮುಂದು)
(ಮುಂದುವರಿದ ಚರ್ಚೆ)

+ ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ :— ಅಧ್ಯಕ್ಷರೇ, ಈ ರೀತಿ ರೈತರು ಇತ್ತೀಚಿನ ದಿವಸಗಳಲ್ಲಿ ಅನೇಕ ಸಂಕಷ್ಟಗಳಿಗೆ ಒಳಗಾಗಿರುವುದು ಸಾಮಾನ್ಯವಾದ ಸಂಗತಿಯಾಗಿದೆ. ಇತ್ತೀಚಿನ ದಿವಸಗಳಲ್ಲಿ ಕೃಷಿ ಉತ್ಪನ್ನಗಳಿಗೆ ಭಯಂಕರವಾದ ರೋಗಗಳು ಕಾಣಿಸಿಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಹೊಲಗದ್ದೆಗಳಲ್ಲಿ ಹಾಕಿರುವ ಬೆಳೆಗಳು ತೆನೆ ಕಟ್ಟುವಂಥ ಸಂದರ್ಭದಲ್ಲಿ ರೋಗ ಕಾಣಿಸಿಕೊಳ್ಳುವುದನ್ನು ನೋಡುತ್ತಿದ್ದೇವೆ. ಕೀಟದ ಭಾದೆ ಬರುತ್ತಿರುವುದನ್ನು ಗಮನಿಸಿದ್ದೇವೆ. ಇವೆಲ್ಲವನ್ನೂ ಮೀರಿ ಮುನ್ನುಗ್ಗಿ ರೈತರು ಬೆಳೆಯನ್ನು ಬೆಳೆದು ಆದರಿಂದ ಜೀವನ ಸಾಗಿಸಲು ಆ ಬೆಳೆಯನ್ನು ಕಟಾವು ಮಾಡಿಕೊಂಡು ಮಾರುಕಟ್ಟೆಗೆ ತೆಗೆದುಕೊಂಡು ಹೋದ ಸಂದರ್ಭದಲ್ಲಿ ರೈತರ ಮೇಲೆ ಬರೆ ಬೀಳತಕ್ಕ, ಪಂಗನಾಮ ಹಾಕತಕ್ಕ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಕೈಗಾರಿಕಾ ಉತ್ಪಾದನೆಯೇನಿದೆ ಆ ವಸ್ತುವಿಗೆ ಸ್ಥಿರವಾದ ವೆಚ್ಚ ಮತ್ತು ಬದಲಾಗುವ ವೆಚ್ಚವನ್ನು ಮಾರಾಟದ ಬೆಲೆಯಲ್ಲಿ ಸದರಿ ವಸ್ತುವಿನ ಮೇಲೆ ಮುದ್ರಿಸಿ ಮಾರಾಟ ಮಾಡುವುದನ್ನು ನಾವು ನೋಡಿದ್ದೇವೆ. ಆದರೆ ನಮ್ಮ ರೈತ ತನ್ನ ಬೆಳೆಯನ್ನು ಯಾವುದೋ ಹರಿದ ಚೀಲದಲ್ಲಿ ತುಂಬಿಕೊಂಡು ಕೃಷಿ ಮಾರುಕಟ್ಟೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋದರೆ ಆ ರೈತನನ್ನು ಕಸಕ್ಕಿಂತ ಕಡೆಯಾಗಿ ಕಾಣುವುದನ್ನು ನೋಡುತ್ತಿದ್ದೇವೆ. ರೈತ ಬೆಳೆದಂಥ ಪದಾರ್ಥಗಳಿಗೆ ಉತ್ತಮವಾದ ಬೆಲೆ ಸಿಗದಿದ್ದ ಸಂದರ್ಭದಲ್ಲಿ ಆ ಮಾರುಕಟ್ಟೆ ಸಮಿತಿಯಿಂದ 75 ಭಾಗ ಹಣವನ್ನು ಕೊಟ್ಟು ಆ ರೈತರ ಬೆಳೆಯನ್ನು ಇಟ್ಟುಕೊಂಡು ಒಳ್ಳೆಯ ಬೆಲೆ ಬಂದಾಗ ಮಾರಾಟ ಮಾಡಲು ಅನುವು ಮಾಡಿಕೊಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪ್ರಥಮ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಆದರೆ ಇವತ್ತಿನವರೆಗೂ ಈ ರೀತಿಯಾದ ವ್ಯವಸ್ಥೆ ಯಾವುದೇ ಮಾರುಕಟ್ಟೆಯಲ್ಲಿ ಜಾರಿಗೆ ಬಂದಿಲ್ಲ. ರಾಜ್ಯದಲ್ಲಿ ಸುಮಾರು ಹನ್ನೆರಡು ಜಿಲ್ಲೆಗಳಲ್ಲಿ ತೆಂಗನ್ನು ಬೆಳೆಯುತ್ತಿದ್ದಾರೆ. ಆದರೆ ಇವತ್ತು ತೆಂಗಿನ ಬೆಲೆ ಪಾತಾಳಕ್ಕೆ ಹೋಗಿಬಿಟ್ಟಿದೆ. ಮೂರುನಾಲ್ಕು ವರ್ಷಗಳ 7ಂದೆ ಸಾವಿರ ತೆಂಗಿನ ಬೆಲೆ ಐದರಿಂದ ಆರು ಸಾವಿರ ಇತ್ತು, ಆದರೆ ಈಗ ಎರಡು ಸಾವಿರಕ್ಕೆ ಬಂದಿದೆ. ಕಳೆದ ಮೂರು ವರ್ಷಗಳಿಂದ ತೆಂಗಿಗೆ ನುಸಿರೋಗ ಬಂದಿರುವುದು ನಮಗೆಲ್ಲಾ ಗೊತ್ತಿದೆ. ಔಷಧಿಯನ್ನು ಸಿಂಪರಣೆ ಮಾಡಿ ಆ ರೋಗವನ್ನು ಹೋಗಲಾಡಿಸುವಲ್ಲಿ ಸರ್ಕಾರ ಪ್ರಯತ್ನ ಮಾಡಿದ್ದರೂ ಇದುವರೆಗೆ ನುಸಿ ರೋಗ ಹೋಗಲಾಡಿಸಲು ಸಾಧ್ಯವಾಗಿಲ್ಲ. ಯಾವುದೇ ಔಷಧಿಯನ್ನು ತೆಂಗಿನ ಮರಕ್ಕೆ ಸಿಂಪರಣೆ ಮಾಡುವುದರಿಂದ ರೋಗವನ್ನು ತಡೆಗಟ್ಟಲು ಆಗುವುದಿಲ್ಲವೆಂಬ ಸಂದರ್ಭದಲ್ಲಿ, ತಂತ್ರಜ್ಞರು ಈಗಾಗಲೇ ಒಂದು ವರದಿಯನ್ನು ಕೊಟ್ಟಿದ್ದಾರೆ. ನುಸಿ ಪೀಡೆ ತಡೆಗಟ್ಟುವ ವ್ಯವಸ್ಥೆಯಲ್ಲಿ ಕೃಷಿ

ವಿಶ್ವವಿದ್ಯಾನಿಲಯದ ಕೀಟ ಶಸ್ತ್ರ ವಿಜ್ಞಾನಿಗಳು ತೋಟಗಾರಿಕಾ ಅಧಿಕಾರಿಗಳು, ಕೃಷಿ ಮತ್ತು ತೋಟಗಾರಿಕಾ ಸಚಿವಾಲಯದ ಅಧಿಕಾರಿಗಳು ನೀಡಿದ ಮಾಹಿತಿಯ ದೀರ್ಘಪರಿಶೀಲನೆಯ ನಂತರ ರಾಸಾಯನಿಕಗಳ ಮೂಲಕ ನುಸಿರೋಗವನ್ನು ತಡೆಗಟ್ಟಲು ಸಾಧ್ಯವಿಲ್ಲವೆಂಬುದನ್ನು ಅರಿತು ಪ್ರಯೋಗಿಕವಾಗಿ ಎಲ್ಲಾ ತೆಂಗು ಬೆಳೆಗಾರರು ಏಕಕಾಲದಲ್ಲಿ ನೀರಾವನ್ನು ಇಳಿಸುವ ಮೂಲಕ ನುಸಿ ರೋಗವನ್ನು ತಡೆಗಟ್ಟಬಹುದು ಎಂದು ವರದಿ ನೀಡಿರುತ್ತಾರೆ. ಯಾವುದೇ ಒಂದು ಪಕ್ಷದ ಸದಸ್ಯರು ನೀಡಿರುವ ವಿಚಾರವಲ್ಲ. ಎಲ್ಲಾ ಮಿತ್ರ ಪಕ್ಷದವರು ಕುಳಿತುಕೊಂಡು ಇದರ ಬಗ್ಗೆ ತೀವ್ರವಾದ ವಿಚಾರಧಾರೆಯನ್ನು ನಡೆಸಿದ ನಂತರ ತೆಗೆದುಕೊಂಡು ಈ ವ್ಯವಸ್ಥೆಗೆ ಸರ್ಕಾರ ಒಪ್ಪಿಗೆ ಕೊಡಲೇ ಬೇಕು ಎಂಬ ಬಗ್ಗೆ ಪರಿಶೀಲನೆ ಮಾಡಲು ಶಿಫಾರಸ್ಸು ಮಾಡಿದ್ದಾರೆ. ಕೋಟಿಗಟ್ಟಲೆ ತೆಂಗಿನ ಮರಕ್ಕೆ ನುಸಿರೋಗ ಬಂದಿರುವ ಹಿನ್ನೆಲೆಯಲ್ಲಿ ಎಲ್ಲಾ ಗಿಡದಲ್ಲೂ ನೀರಾವನ್ನು ಇಳಿಸಲು ಸಾಧ್ಯವಿಲ್ಲ, ಆ ದೃಷ್ಟಿಯಿಂದ ನೀರಾವನ್ನು ಇಳಿಸಲು ಅನುಮತಿ ಕೊಡಲು ಸಾಧ್ಯವಿಲ್ಲವೆಂಬ ಮಾತನ್ನು ಕೃಷಿ ಸಚಿವರು ಹೇಳಿದರು. ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ನೀರಾವನ್ನು ಇಳಿಸುವ ಕೆಲಸ ಪ್ರಾರಂಭವಾಗಿದೆ. ಹಾಸನ ಜಿಲ್ಲೆ, ತುಮಕೂರು ಜಿಲ್ಲೆಯ ಬಹುಭಾಗ, ಮೈಸೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾನೂನಿನ ಚೌಕಟ್ಟಿಗೆ ಬಾರದಿದ್ದರೂ ನೀರಾವನ್ನು ಇಳಿಸುವ ಕೆಲಸವನ್ನು ರೈತರು ಪ್ರಾರಂಭ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ರಾಜ್ಯದ ತೆಂಗು ಬೆಳೆಗಾರರಿಗೆ ಉತ್ತೇಜನ ಕೊಡುವ ನಿಟ್ಟಿನಲ್ಲಿ ಸರ್ಕಾರ ದೊಡ್ಡ ಮನಸ್ಸು ಮಾಡಿ ನೀರಾವನ್ನು ಇಳಿಸಲು ಅನುಮತಿ ನೀಡಬೇಕು.

ಛೇರ್ಮನ್ :— ಮಾನ್ಯ ಕೃಷಿ ಸಚಿವರೆ, ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾ ಇಳಿಸುವ ಬಗ್ಗೆ ಹೋರಾಟ ಮಾಡಿ ಪರವಾನಗಿಯನ್ನು ಪಡೆದಿದ್ದೇವೆ. ನೀರಾವನ್ನು ಕುಡಿದರೆ ಸಾರಾಯಿ ಕುಡಿದಂತಾಗುವುದಿಲ್ಲವೆಂಬುದು ನಮ್ಮ ಹೋರಾಟ. ಸಾರಾಯಿ ಕುಡಿದರೆ ಟಾಡಿಯಾಗುತ್ತದೆ, ಆದಕ್ಕೆ ನಾವು ವಿರೋಧ ಮಾಡಿದ್ದೆವು. ಟಾಡಿ ಟ್ಯಾಪಿಂಗ್ ಮಾಡುವವರೇ ಸುಮಾರು ಹದಿನೈದು ಸಾವಿರ ಕುಟುಂಬದವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದರು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನಮ್ಮ ಹೋರಾಟವು ಯಶಸ್ವಿಯಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ನೀರಾ ಇಳಿಸಲು ಪರವಾನಗಿ ಕೊಟ್ಟಿದ್ದಾರೆ. ನಾವು ಟಾಡಿ ಟ್ಯಾಪರ್ಸ್ ಕೋ-ಅಪರೇಟಿವ್ ಸೊಸೈಟಿ ಮಾಡಿ ಆದರ ಮೂಲಕ ಟಾಡಿಯನ್ನು ಮಾರಾಟ ಮಾಡುತ್ತೇವೆ. ಟಾಡಿಯಿಂದ ನಾವು ಇಡ್ಲಿ, ದೋಸೆ ಮತ್ತು ಔಷಧಿಯಲ್ಲೂ ಬಳಸುತ್ತಿದ್ದೇವೆ. ತಾವು ಸಾರಾಯಿ ಕುಡಿಯುವುದನ್ನು ಕಡಿಮೆ ಮಾಡಬೇಕಾಗಿದ್ದರೆ ಟಾಡಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಲೇ ಬೇಕಾಗುತ್ತದೆ. ಆ ದಿಸೆಯಲ್ಲಿ ನಮ್ಮ ಹೋರಾಟ ನಡೆದಿತ್ತು. ಟಾಡಿಯಲ್ಲಿ ಆಲ್ಕೋಹಾಲ್ ಅಂಶ ಕೇವಲ ಮೂರು ಪರ್ಸೆಂಟ್ ಇರುತ್ತದೆ. ನೀರಾ ಇದ್ದರೂ ಟಾಡಿ ಆದರೂ ಕೇವಲ

ಮೂರು ಪರ್‌ಸೆಂಟ್ ಆಲ್ಕೋಹಾಲ್ ಅಂಶವಿರುತ್ತದೆ. ಸಾರಾಯಿಯಲ್ಲಿ ಸಾಮಾನ್ಯವಾಗಿ 30 ಪರ್‌ಸೆಂಟ್ ಆಲ್ಕೋಹಾಲ್ ಅಂಶವಿರುತ್ತದೆ. ಆದ್ದರಿಂದ ಟಾಡಿ ಬಳಕೆಯಿಂದ ಆಗುವ ಹಾನಿಯಾದರೂ ಏನು? ಆದ್ದರಿಂದ ತಾವು ಇದರ ಬಗ್ಗೆ ಮರುಪರಿಶೀಲನೆ ಮಾಡುವುದು ಒಳ್ಳೆಯದು. ಏಕೆಂದರೆ, ಹಿಂದೆ ನಮ್ಮ ಸರ್ಕಾರವಿದ್ದಾಗಲೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ನೀರಾವನ್ನು ಇಳಿಸುವಲ್ಲಿ ರಿಯಾಯಿತಿಯನ್ನು ಕೊಟ್ಟಿದೆ. ಇವತ್ತು ನಮ್ಮ ಉಡುಪಿ ಜಿಲ್ಲೆಯಲ್ಲಿ ಟಾಡಿ ಸಹಕಾರಿ ಸಂಸ್ಥೆಗಳು ಇದೆ. ಇದರಿಂದ ಬಹಳಷ್ಟು ಅನುಕೂಲವಾಗಿದೆ. ನಾವು ಚಳುವಳಿ ಮಾಡಿಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನ್ಯಾಯ ಒದಗಿಸಿಕೊಂಡಿದ್ದೇವೆ.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ :— ಮಾನ್ಯ ಛೇರ್ಮನ್‌ರವರೇ, ಇವತ್ತು ಚಾಮರಾಜನಗರದಲ್ಲಿ ರಸ್ತೆ ತಡೆ ಮಾಡುತ್ತಿದ್ದ 200 ಜನರನ್ನು ಬಂಧಿಸಲಾಗಿದೆ. ಈ ರೀತಿಯಾಗಿ ಬಹಿರಂಗವಾಗಿ ನೀರಾ ಇಳಿಸುವುದರ ಪರವಾಗಿ ರಾಜ್ಯದ 8-10 ಜಿಲ್ಲೆಗಳಲ್ಲಿ ಚಳುವಳಿಗಳು ನಡೆಯುತ್ತಿದ್ದರೂ ಅದರ ಬಗ್ಗೆ ಸರ್ಕಾರ ಏನಾದರೂ ಒಂದು ತೀರ್ಮಾನ ಮಾಡುವಂತಹ ಪ್ರಯತ್ನವನ್ನೇ ಮಾಡಿಲ್ಲ. ಅಧಿಕಾರಿಗಳೂ ಕೂಡ ನಿಸ್ಸಹಾಯಕರಾಗಿ ಚಳುವಳಿ ನೋಡುತ್ತಾ ನಿಂತಿರುವ ಪರಿಸ್ಥಿತಿ ಇದೆ. ಚಾಮರಾಜನಗರದಲ್ಲಿ ಇವತ್ತು ಸುಮಾರು 300-400 ಜನ ರೈತರನ್ನು ಬಂಧಿಸಿದ್ದಾರೆ. ಅವರಿಗೆ ಯಾವುದೇ ಒಂದು ಕಾನೂನಿನ ಅರಿವು ಇಲ್ಲ. ಅವರಿಗೆ ಕಾನೂನು ತಿಳುವಳಿಕೆ ಕೊಡುವಂತಹ ವ್ಯವಸ್ಥೆಯೂ ಕೂಡ ಇಲ್ಲವಾಗಿದೆ.

ಛೇರ್ಮನ್ :— ಮಾನ್ಯ ತೋಟಗಾರಿಕಾ ಸಚಿವರು ಮತ್ತು ಮಾನ್ಯ ಕೃಷಿ ಸಚಿವರು ದಯವಿಟ್ಟು ನಮ್ಮ ಜಿಲ್ಲೆಯಲ್ಲಿ ಏನು ನಡೆದಿದೆ ಅಲ್ಲಿ ಯಾವ ರೀತಿಯಾಗಿ ಕೋ-ಆಪರೇಟಿವ್ ಸೊಸೈಟೀಸ್ ನಡೆಯುತ್ತಿದೆ ಅಲ್ಲಿ ಯಾವ ರೀತಿ ಟಾಡಿ ಟ್ಯಾಪಿಂಗ್ ಆಗಿದೆ ಎಂಬ ಬಗ್ಗೆ ತಾವು ಸ್ವಲ್ಪ ಗಮನಕ್ಕೆ ತೆಗೆದುಕೊಂಡರೆ ತಮ್ಮ ಅನುಭವಕ್ಕೆ ಅದು ಬರುತ್ತದೆ. ಅದರ ಮೇಲೆ ನೀವು ಡಿಸಿಷನ್ ತೆಗೆದುಕೊಳ್ಳಬಹುದು.

ಶ್ರೀ ಹೆಚ್.ಎನ್. ಮಹಾದೇವಪ್ರಸಾದ್ :— ಈ ವಿಚಾರದ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅನುಮತಿ ಮಾಡಿಕೊಟ್ಟಲ್ಲಿ ನಾವು ನೀರಾ ಇಳಿಸುವ ಬಗ್ಗೆ ಸರ್ಕಾರದ ಮನ ಒಲಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :— ದಯವಿಟ್ಟು ಮಾನ್ಯ ತೋಟಗಾರಿಕಾ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು. ಮಾನ್ಯ ಛೇರ್ಮನ್‌ರವರ ಅಭಿಪ್ರಾಯಕ್ಕಾದರೂ ಅವರು ಸ್ಪಂದಿಸಲಿ. ತಾವು ಆ ಪೀಠದಲ್ಲಿ ಕುಳಿತುಕೊಂಡು ಮಾತನಾಡಿ ರಾಜ್ಯದ ಜನತೆಗೆ ಒಳ್ಳೆಯದು ಮಾಡಿದ್ದೀರಿ.

ಛೇರ್ಮನ್ :— ಮಾನ್ಯ ಸಚಿವರು ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಇದರ ಬಗ್ಗೆ ಉತ್ತರ ಕೊಡಲಿ. ಈಗ ಚರ್ಚೆಯ ಮಧ್ಯದಲ್ಲಿ ಅವರು ಉತ್ತರ ಕೊಡುವುದು ಬೇಡ.

ಶ್ರೀ ಎ. ಕೃಷ್ಣಪ್ಪ :— ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಮತಿ ಕೊಟ್ಟು ಬೇರೆಡೆ ಅನುಮತಿ ಕೊಡದೇ ತಾರತಮ್ಯ ಮಾಡುತ್ತಿದೆ.

ಛೇರ್ಮನ್ :— ಒಂದು ಮುಖ್ಯವಾದ ಅಂಶವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಟಾಡಿ ಟ್ಯಾಪಿಂಗ್ ಅನ್ನು ಏನು ಮಾಡುತ್ತಿದ್ದಾರೆ, ಅಲ್ಲಿ ನಿಜವಾಗಿಯೂ ಕೂಡ ಟಾಡಿ ಟ್ಯಾಪಿಂಗ್ ಕಾರ್ಯಕ್ರಮವೇ ನಡೆಯುತ್ತಿದೆ. ಆದರೆ ಇತರ ಜಿಲ್ಲೆಗಳಲ್ಲಿ ಟಾಡಿ ಟ್ಯಾಪಿಂಗ್ ಬದಲಿಗೆ ಅದಕ್ಕೆ ಕೆಮಿಕಲ್ ಮಿಕ್ಸ್ ಮಾಡಿ ಅದನ್ನೇ ಮಾರಾಟ ಮಾಡುವಂತಹ ಕಾರ್ಯಕ್ರಮ ನಡೆಯುತ್ತಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಗಿಂತ ಇತರ ಜಿಲ್ಲೆಗಳಿಗೆ ಇರುವ ವ್ಯತ್ಯಾಸವಾಗಿದೆ.

ಶ್ರೀ ಎ. ಕೃಷ್ಣಪ್ಪ :— ಸಾರಾಯಿ ಮಾರಿ ಜನರನ್ನು ಹಾಳು ಮಾಡುವುದು ಒಳ್ಳೆಯದೋ, ರೈತನ ತೊಂದರೆ ನಿವಾರಣೆ ಮಾಡುವುದು ಒಳ್ಳೆಯದೋ ಎಂಬ ಬಗ್ಗೆ ಮಾನ್ಯ ಕೃಷಿ ಸಚಿವರು ಯೋಚನೆ ಮಾಡಲಿ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ :— ನಮ್ಮಲ್ಲಿ ತೆಂಗಿಗೆ ಬೆಲೆ ಇಲ್ಲ. ಅದಕ್ಕೆ ಒಳ್ಳೆಯ ಬೆಲೆ ಸಿಗಲಿಲ್ಲವೆಂದಾದರೆ ಆದಕ್ಕೆ ಸರ್ಕಾರ ಬೇರೆ ಯಾವುದಾದರೂ ದಾರಿ ತೋರಿಸಲಿ.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ತೋಟಗಾರಿಕಾ ಸಚಿವರು ನುಸಿಗೆ ಔಷಧಿ ಕಂಡುಹಿಡಿದಿಲ್ಲ ಎಂದು ಸದನದಲ್ಲೇ ಒಪ್ಪಿಕೊಂಡಿದ್ದಾರೆ. ಇದಕ್ಕಾದರೂ ನಮಗೆ ಅನುಮತಿ ಕೊಟ್ಟು ಸರ್ಕಾರ ನೋಡಲಿ.

ಛೇರ್ಮನ್ :— ನುಸಿ ರೋಗಕ್ಕೂ ನೀರಾ ಇಳಿಸುವುದಕ್ಕೂ ಸಂಬಂಧ ಇಲ್ಲ. ನಾನು ಹೇಳಿದ್ದು ಏನೆಂದರೆ, ನೀರಾ ಇಳಿಸುವುದರಿಂದ ಯಾವ ರೀತಿಯ ಅನ್ಯಾಯವೂ ಸಹ ಆಗುವುದಿಲ್ಲ. ನೀರಾ ಇಳಿಸಿ ನೀವು ಟಾಡಿ ಬಳಕೆ ಮಾಡಿದರೆ ಸಾರಾಯಿ ಕುಡಿಯುವುದು ಸ್ವಲ್ಪ ಕಡಿಮೆಯಾಗಬಹುದು. ಸಾರಾಯಿಯಲ್ಲಿ ಶೇ. 30ರಷ್ಟು ಆಲ್ಕೋಹಾಲ್ ಇದೆ. ನೀರಾದಲ್ಲಿ ಟಾಡಿಯಲ್ಲಿ ಶೇ.3ರಷ್ಟು ಮಾತ್ರ ಇದೆ. ನೀರಾ ಕುಡಿದಲ್ಲಿ ಶೇ. 30ರಷ್ಟು ಬದಲಾಗಿ ಶೇ.3ರಷ್ಟು ಮಾತ್ರ ಆಲ್ಕೋಹಾಲ್ ಕುಡಿದಂತಾಗುತ್ತದೆ. ಇದರಿಂದ ಜನರಿಗೇ ಬೆನಿಫಿಟ್ ಆಗುತ್ತದೆ, ಜನರು ಆರೋಗ್ಯವಂತರಾಗುತ್ತಾರೆ. ಆ ದಿವಸಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಈ ಅಂಶಗಳ ಆಧಾರದ ಮೇಲೆ ನಾವು

ಹೋರಾಟ ಮಾಡಿದ್ದೆವು. ಎಲ್ಲಾ ಶಾಸಕರು, ಎಂ.ಪಿ.ಗಳು ಇದರ ಬಗ್ಗೆ ಮನವಿ ಮಾಡಿದಾಗ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾದ ತಕ್ಷಣ ಪ್ರಥಮ ಸಚಿವ ಸಂಪುಟದ ಸಭೆಯಲ್ಲೇ ದಕ್ಷಿಣ ಕನ್ನಡ ಜಿಲ್ಲೆಗೆ ರಿಯಾಯಿತಿಯನ್ನು ಘೋಷಣೆ ಮಾಡಿದ್ದರು.

ಶ್ರೀ ಬಿ. ಸೋಮಶೇಖರ್:— ಮಾನ್ಯ ವೈಸ್ ಛೇರ್ಮನ್‌ರವರೇ, ತಾವು ಅಧ್ಯಕ್ಷ ಪೀಠದಿಂದ ವ್ಯಕ್ತಪಡಿಸಿದ ಅಭಿಪ್ರಾಯ ಕೇಳಿ ಬಹಳ ಸಂತೋಷವಾಯಿತು. ನನ್ನ ಅಭಿಪ್ರಾಯವೂ ಕೂಡ ತಮ್ಮ ಅಭಿಪ್ರಾಯವೇ ಆಗಿದೆ. ನಮ್ಮ ಕ್ಷೇತ್ರದಲ್ಲೂ ಇಂತಹ ಒಂದು ಚಳುವಳಿಯ ಸಭೆ ನಡೆದಾಗ ನಾನು ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇನೆ. ಇದು ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿರುವುದರಿಂದ ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಈ ವಿಷಯದ ಬಗ್ಗೆ ಮಾತನಾಡಲು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಈಗಾಗಲೇ ನಾವು ಕೇಳಿದ್ದೇವೆ. ಅನೇಕ ಮಾನ್ಯ ಸದಸ್ಯರುಗಳು ಈ ವಿಚಾರದ ಬಗ್ಗೆ ಮಾತನಾಡಲು ಇಚ್ಛೆ ವ್ಯಕ್ತಪಡಿಸಿದ್ದಾರೆ. ಆದುದರಿಂದ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:— ಮಾನ್ಯ ಛೇರ್ಮನ್‌ರವರೇ, ತಮ್ಮನ್ನೂ ಸೇರಿಸಿಕೊಂಡು ಸದನದಲ್ಲಿ ಇರತಕ್ಕ ಶೇ.95ರಷ್ಟು ಭಾಗದ ಶಾಸಕರ ಅಭಿಪ್ರಾಯ ನೀರಾ ಇಳಿಸಲು ಅನುಮತಿ ನೀಡಬೇಕೆಂಬುದೇ ಆಗಿದೆ. ಎಲ್ಲಾ ಸದಸ್ಯರ ಕಾಳಜಿಯೂ ಕೂಡ ಇದೇ ಆಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಜನ ಇವತ್ತು ಸದನ ಮುಗಿಯುವುದನ್ನೇ ಕಾಯುತ್ತಿದ್ದಾರೆ. ಸದನ ಮುಗಿದ ತಕ್ಷಣ...

ಶ್ರೀ ಎಸ್.ಎಸ್. ಪಾಟೀಲ್:— ಈ ವಿಚಾರದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು ಏನು ಹೇಳುತ್ತಾರೆ? ಅವರು ತಮ್ಮ ಜಿಲ್ಲೆಯಲ್ಲಿ ನೀರಾ ಇಳಿಸಲು ಅನುಮತಿಯನ್ನು ದೊರಕಿಸಿಕೊಂಡಿದ್ದಾರೆ. ಅವರು ಇತರ ಜಿಲ್ಲೆಗಳಲ್ಲಿ ನೀರಾ ಇಳಿಸಲು ಅನುಮತಿ ನೀಡುವ ಬಗ್ಗೆ ಬೇರೆ ಜಿಲ್ಲೆಗಳಿಗೊಂದು ನ್ಯಾಯವನ್ನು ನೀವು ಏಕೆ ಮಾಡುತ್ತೀರಿ? ಮಾನ್ಯ ಅಧ್ಯಕ್ಷರು ಅವರಿಗೆ ಉತ್ತರಿಸುವಂತೆ ಹೇಳಬೇಕು.

ಛೇರ್ಮನ್:— ಇದರ ಬಗ್ಗೆ ಚರ್ಚೆ ಮಾಡಿ ಉತ್ತರ ಕಂಡು ಹಿಡಿಯೋಣ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:— ಮಾನ್ಯ ಛೇರ್ಮನ್‌ರವರೇ, ನಾನು ಇದರಲ್ಲಿ ಒಂದು ವಿಷಯದ ಬಗ್ಗೆ ಹೇಳಲೇಬೇಕಾಗುತ್ತದೆ. ತಾವು ಹೇಳಿದ ಹಾಗೆ ನೀರಾದಲ್ಲಿ ಶೇ. 3ರಷ್ಟು ಕೂಡ ಆಲ್ಕೋಹಾಲ್ ಇರುವುದಿಲ್ಲ. ಈಗ ಮಾರುತ್ತಿರುವ ಅರ್ರ್ಯಾಕ್‌ನಲ್ಲಿ ಶೇ. 95ರಷ್ಟು ಸ್ಪಿರಿಟ್ ಇರುತ್ತದೆ. ಅದನ್ನು ಕುಡಿದಂತಹ ಮನುಷ್ಯ ಯಾವುದೇ ಕಾರಣಕ್ಕೂ ಕೂಡ ಬದುಕಲಿಕ್ಕೆ ಸಾಧ್ಯವಾಗುವುದಿಲ್ಲ. 80-100 ವರ್ಷ

ಬಾಳತಕ್ಕಂಥ ಮನುಷ್ಯ 30 ವರ್ಷಕ್ಕೇ ಗೊಟಕ್ ಅನ್ನತಕ್ಕಂಥದ್ದನ್ನು ನಾವು ಈಗಾಗಲೇ ಕಾಣುತ್ತಿದ್ದೇವೆ. ಕಾನೂನಿನ ವ್ಯಾಪ್ತಿಯಲ್ಲಿ ವ್ಯವಸ್ಥೆ ತರತಕ್ಕಂಥದ್ದರ ಬಗ್ಗೆ ಮಾನ್ಯ ಮಂತ್ರಿಗಳು ಚಿಂತನೆ ಮಾಡಬೇಕು. ಇವತ್ತಿನ ದಿವಸಗಳಲ್ಲಿ ನಮ್ಮ ತೆಂಗಿನ ಬೆಳೆಗಾರರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿದೂಗಿಸಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ನಾನು ಹೋದ ಸಾರಿ ಸದನದಲ್ಲಿ ವಿಷಯವೊಂದನ್ನು ಚರ್ಚೆಗೆ ತಂದಿದ್ದೆ. ತೆಂಗಿನ ಮರಗಳಿಂದ ಬರತಕ್ಕಂಥ ಎಳೆನೀರನ್ನು ಸ್ಯಾಚೆಟ್ ಸಿಸ್ಟಮ್ ಮಾಡಿ ಮಾರತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಆಗ ನಿವೇದಿಸಿಕೊಂಡಿದ್ದೆ. ಅದು ಆಗುವುದಿಲ್ಲ ಎಂದು ಸನ್ಮಾನ್ಯ ತೋಟಗಾರಿಕಾ ಸಚಿವರು ನನಗೆ ಉತ್ತರ ಹೇಳಿದ್ದರು. ಇವತ್ತು ಕೋಕಾಕೋಲಾ, ಪೆಪ್ಸಿ ಮುಂತಾದ ಪಾನೀಯಗಳ ಬಣ್ಣದ ನೀರನ್ನು 10-15 ರೂ. ಕೊಟ್ಟು ಕುಡಿಯತಕ್ಕಂಥ ವ್ಯವಸ್ಥೆ ಇರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆರೋಗ್ಯಕ್ಕೆ ಒಳ್ಳೆಯದಾಗಿರತಕ್ಕಂಥ ಎಳೆನೀರನ್ನು ಸ್ಯಾಚೆಟ್‌ನಲ್ಲಿ ಒದಗಿಸುವ ಬಗ್ಗೆ ಸರ್ಕಾರ ಯೋಚನೆ ಮಾಡಿ ಅದನ್ನು ಕಾರ್ಯಗತಗೊಳಿಸಬೇಕು ಮುಂದಾಗಬೇಕು ಎಂದು ಈಗಾಗಲೇ ಅನೇಕ ಸದಸ್ಯರುಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸರ್ಕಾರ ಅದನ್ನೂ ಕೂಡ ಮಾಡಲಿಲ್ಲವೆಂದರೆ ರೈತರಿಗೆ ನಾವು ಯಾವ ರೀತಿಯಲ್ಲಿ ಅನುಕೂಲ ಮಾಡಿಕೊಡಲಿಕ್ಕೆ ಸಾಧ್ಯವಾಗುತ್ತದೆ? ಈಗ ತೆಂಗಿನಕಾಯಿಗೆ ಒಂದಕ್ಕೆ ಕೇವಲ ಎರಡು ರೂ.ಗಳಷ್ಟು ಮಾತ್ರ ಬೆಲೆ ಸಿಗುತ್ತಿದೆ. ಕೊಬ್ಬರಿ ಬೆಲೆ ಕುಸಿದಿದೆ. ಹೋದ ವರ್ಷದಿಂದಲೂ ಕೂಡ ಕೊಬ್ಬರಿಯ ಬಗ್ಗೆ ಚರ್ಚೆ ಮಾಡಿ ಮಾಡಿ ಸಾಕಾಗಿದೆ. ಹೋದ ವರ್ಷ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಮಾತ್ರ ಕೊಬ್ಬರಿಯನ್ನು ಪರ್ಚೇಸ್ ಮಾಡಲಿಕ್ಕೆ ಸರ್ಕಾರ ವ್ಯವಸ್ಥೆ ಮಾಡಿತು. ಆದರೆ ನಂತರ ದಿವಸಗಳಲ್ಲಿ ಸುಮಾರು ಆರು ತಿಂಗಳಾದರೂ ಇದಕ್ಕೆ ಸಂಬಂಧಿಸಿದ ಪೇಮೆಂಟ್ ಬರಲಿಲ್ಲ. ಇದುವರೆಗೂ ಕೂಡ ಅದರ ಬಗ್ಗೆ ಚಿಂತನೆ ನಡೆದಿಲ್ಲ. ಮೆಕ್ಕೆ ಜೋಳ ಖರೀದಿಯ ವಿಚಾರದಲ್ಲೂ ಸಹ ಹೀಗೇ ಆಗಿದೆ. ತೆಂಗು ಬೆಳೆಗಾರರಿಗೆ ದೊಡ್ಡ ಅಘಾತವೇ ಆಗಿದೆ. ಮಾನ್ಯ ಕೃಷಿ ಸಚಿವರೂ ಕೂಡ ಈ ವಿಚಾರದಲ್ಲಿ ನಿಸ್ಸಹಾಯಕರಾಗಿದ್ದಾರೆಂದು ನನಗನಿಸುತ್ತದೆ. ತುಮಕೂರು, ಚಿತ್ರದುರ್ಗ, ಹಾಸನ, ಮಂಡ್ಯ, ಮೈಸೂರು, ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಶೇ. 90ರಷ್ಟು ತೆಂಗನ್ನೇ ಬೆಳೆಯಲಾಗುತ್ತಿದೆ. ಇವರಿಗೆಲ್ಲಾ ತುಂಬ ನೋವಾಗಿದೆ. ಬಂದಿರತಕ್ಕಂಥ ಕೊಬ್ಬರಿಯನ್ನು ಸುಲಿಸದೆ ಇವತ್ತೂ ಕೂಡ ಹೋದ ವರ್ಷ ಕೊಬ್ಬರಿಯನ್ನೇ ಇಟ್ಟುಕೊಂಡು ಕಾಯುತ್ತಿರುವ ಪರಿಸ್ಥಿತಿ ಇದೆ. ಸರ್ಕಾರ ಮುಂದೆ ಬಂದು ನಾಫೆಡ್ ಅಥವಾ ಸಹಕಾರ ಸಂಘಗಳ ಮೂಲಕ ಕೊಬ್ಬರಿ ಖರೀದಿಸಿ ನಮಗೆ ಅನುಕೂಲ ಮಾಡಿಕೊಡುತ್ತದೆಂಬ ನಿರೀಕ್ಷೆಯಲ್ಲಿ ಅವರು ಇದ್ದಾರೆ. ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ತೋಟಗಾರಿಕಾ ಸಚಿವರು ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಅನೇಕ ರೈತರು ತಮ್ಮ ಬವಣೆಗಳನ್ನು ಅವರ ಬಳಿ ಹೇಳಿಕೊಂಡು ತಮ್ಮ ಸಮಸ್ಯೆಗಳ ನಿವಾರಣೆಗೆ ಅವರಿಗೆ ಮನವಿಗಳನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು

ತುಮಕೂರಿನಲ್ಲಿ ರಿವ್ಯೂ ಮೀಟಿಂಗ್ ಮಾಡತಕ್ಕ ಸಂದರ್ಭದಲ್ಲಿ ನಾವೂ ಕೂಡ ಈ ವಿಷಯವನ್ನು ಪ್ರಸ್ತಾವ ಮಾಡಿದ್ದವು. ಮಾನ್ಯ ಅಧ್ಯಕ್ಷರೇ, ನಾನು ತಂದಿರುವಂತಹ ಒಂದು ಫೋಟೋವನ್ನು ತಮಗೆ ತೋರಿಸಲಿಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿ ಇರತಕ್ಕಂಥ ಏಕೈಕ ದೊಡ್ಡ ಮಾರುಕಟ್ಟೆಯಾದ ತಿಪಟೂರಿಗೆ ಟ್ರಾಕ್ಟರ್‌ನಲ್ಲಿ ಕೊಬ್ಬರಿಯನ್ನು ತೆಗೆದುಕೊಂಡು ಹೋಗಿ, ಸಾಲಾಗಿ ನಿಲ್ಲಿಸಿ ಇಡೀ ಮೂರು ದಿವಸಗಳ ಕಾಲ ಕಾದು ವಾಪಸ್ ತೆಗೆದುಕೊಂಡು ಹೋಗಿರತಕ್ಕಂಥ ಒಂದು ಚಿತ್ರಣವನ್ನು ನಿಮ್ಮ ಮುಂದೆ ಕಳುಹಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸುಮಾರು ಒಂದು ಕಿ.ಮೀ. ಉದ್ದಕ್ಕೆ ಟ್ರಾಕ್ಟರುಗಳು ಅಂದು ಮಾರುಕಟ್ಟೆಯಲ್ಲಿ ನಿಂತಿದ್ದವು. ಸದರಿ ಮಾರುಕಟ್ಟೆಯಲ್ಲಿ 2000-2100 ರೂ.ಗಳ ಧಾರಣೆ ಕೂಡ ಕೊಡಲಿಕ್ಕೆ ಆಗುತ್ತಿಲ್ಲ. ಈ ರೀತಿಯ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಇವತ್ತು ರೈತ ಯಾವ ಮಟ್ಟಕ್ಕೆ ಹೋಗಿದ್ದಾನೆ ಎಂದರೆ ಆತ ಆತ್ಮಹತ್ಯೆ ಬಗ್ಗೆ ಯೋಚಿಸುತ್ತಿದ್ದಾನೆ. ರೈತ ಕಂಗಾಲಾಗಿ ಮಾರುಕಟ್ಟೆಯಲ್ಲಿ ಕೊಬ್ಬರಿಯನ್ನು ತೆಗೆದುಕೊಂಡು ಹೋಗಿ ಮಾರಲು ಸಾಧ್ಯವಾಗದಂತಹ ಚಿಂತೆಯಲ್ಲಿ ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಉಂಟಾಗಿದೆ. ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ತೋಟಗಾರಿಕಾ ಸಚಿವರು ತಕ್ಷಣ ಇದರ ಬಗ್ಗೆ ಸಭೆಯನ್ನು ಕರೆಯಲಿ. ಗ್ರಾಮೀಣ ಪ್ರದೇಶದ ತೆಂಗು ಬೆಳೆಯುವ ಕಡೆಗಳಿಂದ ಬಂದಿರುವ ಆಡಳಿತ ಪಕ್ಷದ ಸದಸ್ಯರೂ ಕೂಡ ಇದರ ಬಗ್ಗೆ ಸರ್ಕಾರಕ್ಕೆ ಒತ್ತಡ ತರಲಿ. ಈ ರೀತಿಯ ವ್ಯವಸ್ಥೆಯಲ್ಲಿ ನಾವು ತೆಂಗು ಬೆಳೆಗಾರರಿಗೆ ಅನುಕೂಲ ಮಾಡಿಕೊಡಲಿಕ್ಕೆ ಆಗಲಿಲ್ಲವೆಂದರೆ ಖಂಡಿತವಾಗಿಯೂ ಕೂಡ ಆ ಗ್ರಾಮಾಂತರ ಪ್ರದೇಶದ ಜನ ತುಂಬಾ ನೋವನ್ನು ಅನುಭವಿಸತಕ್ಕಂಥ ವ್ಯವಸ್ಥೆಗೆ ಹೋಗುತ್ತಾರೆ ಎಂಬ ಮಾತನ್ನು ಹೇಳಬಯಸುತ್ತೇನೆ. ಈ ವ್ಯವಸ್ಥೆಯಲ್ಲಿ ರೈತ ಬೆಳೆದ ಕೃಷಿ ಹುಟ್ಟುವಳಿಯ ವೆಚ್ಚ ಮಾಡುವಲ್ಲಿ ವಿಫಲವಾಗಿ ಹುಟ್ಟುವಳಿಯನ್ನು ಮಾರುಕಟ್ಟೆಗೆ ತಂದ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಬೆಲೆ ಕಡಿಮೆಯಾಗಿ ಕನಿಷ್ಟ ವೆಚ್ಚ ಕೂಡ ಇವತ್ತು ಭರಿಸಲಿಕ್ಕೆ ಆಗದೆ ಇರುವ ಸಂದರ್ಭ ಬಂದಿದೆ. ಪಾವಗಡ, ಮಧುಗಿರಿ ಮತ್ತು ಸಿರಾ ಈ ಭಾಗಗಳಲ್ಲಿ ಕಡಲೆ ಕಾಯಿ ಹಾಕಿದ್ದು ಅದು ಹುಟ್ಟಲಿಕ್ಕೆ ಕೂಡ ಸಾಧ್ಯವಾಗಿಲ್ಲ. ಸನ್ಮಾನ್ಯ ಸದಸ್ಯರಾದ ವೆಂಕಟರಮಣಪ್ಪನವರು ಸಾವಿರಾರು ರೂಪಾಯಿಗಳ ಬೀಜ ಕೊಂಡು ನೆಲಕ್ಕೆ ಹಾಕಿರತಕ್ಕಂತಹ ಸಂದರ್ಭದಲ್ಲಿ ಒಂದು ಗಿಡವೂ ಕೂಡ ಹುಟ್ಟಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕಾ ಸಚಿವರು) :— ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಹಿರಿಯ ಸದಸ್ಯರು ನೀರಾ ವಿಷಯ ಮಾತನಾಡುತ್ತಿದ್ದಾರೆ. ಕೃಷಿ ಮಂತ್ರಿಗಳ ಕರ್ನಾಟಕ ರಾಜ್ಯದಲ್ಲಿ 8000 ಕೋಟಿ ಗಿಡಗಳಿವೆ, ಕೇವಲ 10 ಲಕ್ಷ ಗಿಡಗಳಿಂದ 9 ಕೋಟಿ ಲೀಟರ್ಸ್ ಟ್ಯಾಡಿ ತಯಾರು ಮಾಡುತ್ತಿದ್ದೇವೆ, ಅದು ಸಾಕಾಗುತ್ತದೆ. ಉಳಿದದ್ದು ಹೇಗೆ ಮಾಡುವುದು, ಏನು ಮಾಡಬೇಕು? ಎಲ್ಲಾ ತೋಟಗಳಲ್ಲಿ ಇವರು ನೀರಾ ತೆಗೆಯುವುದಕ್ಕೆ ಅವಕಾಶ ಮಾಡುತ್ತೀರಾ? ಬಡ ರೈತರಿಗೆ ಮಾಡುತ್ತಾರೆ,

ಸಾಹುಕಾರರಿಗೆ ಮಾಡುತ್ತಾರೆ, ಯಾರಿಗೆ ಮಾಡಬೇಕು, ಯಾರಿಗೆ ಬಿಡಬೇಕು, ಇದು ಒಂದು ಅಂಶ. ನೀರಾ ಮಾಡುವುದಕ್ಕೆ ಅಭ್ಯಂತರವಿಲ್ಲ, ನೀರಾ ಸೂರ್ಯ ಹುಟ್ಟಿದ ತಕ್ಷಣ ಅದು ಸೇಂದಿ ಆಗುತ್ತದೆ. ಸಿಎಫ್ ಟಿಆರ್‌ಐಗೆ ಬರೆದಿದ್ದೇವೆ, ನ್ಯಾಷನಲ್ ಡಿಫೆನ್ಸ್ ಲ್ಯಾಬರೇಟರಿಗೆ ಬರೆದಿದ್ದೇವೆ. ಅದು ಸಮಯ ತೆಗೆದುಕೊಳ್ಳುತ್ತದೆ. ಅದು ಪ್ರೋಸಸ್‌ನಲ್ಲಿದೆ. ಎಂದು ಹೇಳಿದ್ದಾರೆ. ಯಾರ ಗಿಡದಲ್ಲಿ ಯಾರು ತೆಗೆದುಕೊಳ್ಳುತ್ತಾರೆ, ಎಲ್ಲಿ ನೀರಾ ತೆಗೆದುಕೊಳ್ಳುತ್ತಾರೆ? ಯಾರು ಸ್ಟೋರ್ ಮಾಡುತ್ತಾರೆ, ಇದಕ್ಕೆ ಸರಿಯಾದ ಮಾಹಿತಿ ಕೊಡಿ. ಎಲ್ಲಾ ಬಡವರೂ ಇದ್ದಾರೆ. ಒಬ್ಬರು ಇಬ್ಬರು ಇರತಕ್ಕಂಥದ್ದು ಅಲ್ಲ. ನಾವು ಪರ್ಮಿಷನ್ ಕೊಡುತ್ತೇವೆ, ಅಂದುಕೊಳ್ಳಿ. ಎಲ್ಲಾ ಎಂಟು ಸಾವಿರ ಕೋಟಿ ಗಿಡಗಳಿಗಿರುವ ನುಸಿ ರೋಗ ತೆಗೆಯಬೇಕಾಗಿದೆ. ನುಸಿ ರೋಗ ತೆಗೆಯುವುದಕ್ಕೆ ಎಲ್ಲಾ ಗಿಡಗಳಿಂದ ನೀವು ನೀರಾ ತೆಗೆಯುತ್ತೀರಾ? ಯಾರದ್ದು ತೆಗೆಯುತ್ತೀರಿ ಯಾರದ್ದು ಇಲ್ಲ, ಇದು ಎಲ್ಲರ ಗಿಡಗಳಿಂದ ತೆಗೆಯಬೇಕು. ಯಾರೂ ಬಡವರೂ ಅಲ್ಲ, ಯಾರೂ ಸಾಹುಕಾರರು ಅಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :— ಇವತ್ತಿನ ದಿವಸ ಮಾನ್ಯ ಮಂತ್ರಿಗಳು ನೀರಾ ಇಳಿಸುವುದರ ಬಗ್ಗೆ ವಿಷಯ ಪ್ರಸ್ತಾಪ ಮಾಡಿದರು. ತಾವು ಅದನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ ಯಾವ ರೀತಿ ಎಂದು ಗೊತ್ತಾಗುವುದಿಲ್ಲ. ಇದರ ಬಗ್ಗೆ ಚರ್ಚೆ ಮಾಡೋಣ. ಆ ದೃಷ್ಟಿಯಿಂದ ಇವತ್ತು ಕೊಬ್ಬರಿ ಬೆಳೆಗಾರರಿಗೆ ಆಗಿರತಕ್ಕಂತಹ ವ್ಯವಸ್ಥೆಯಲ್ಲಿ ತಕ್ಷಣ ಈ ವಾರದಲ್ಲಿ ಪ್ರಾರಂಭ ಆಗದೆ ಹೋದರೆ, ಇನ್ನು ಹೆಚ್ಚಿನ ತೊಂದರೆಗಳಾಗುತ್ತವೆ. ಸಾಮಾನ್ಯವಾಗಿ ಜುಲೈನಿಂದ ಸೆಪ್ಟಂಬರ್ ಅಕ್ಟೋಬರ್‌ವರೆಗೆ ಮಾರುಕಟ್ಟೆಗೆ ಕೊಬ್ಬರಿ ಬರತಕ್ಕಂಥದ್ದು, ಮಾರುಕಟ್ಟೆ ಪದ್ಧತಿ. ಈಗಾಗಲೇ ಒಂದು ವರ್ಷದಿಂದ ರೈತರು ಕೊಬ್ಬರಿಯನ್ನು ಮನೆಯಲ್ಲಿಟ್ಟುಕೊಂಡು ಮಾರುಕಟ್ಟೆ ಬರುತ್ತದೆ ಎಂದು ಕಾಯುತ್ತಿದ್ದಾರೆ. ಸರ್ಕಾರ ನಿಗದಿ ಮಾಡಿರುವ ಬೆಲೆ 3,550 ರೂಪಾಯಿ. ಮಾರುಕಟ್ಟೆಯಲ್ಲಿ 2,100 ರೂಪಾಯಿ ಬೆಲೆ ಸಿಗುತ್ತಿದೆ. 1450 ರೂಪಾಯಿ ವ್ಯತ್ಯಾಸವಾಗುತ್ತಿದೆ. ಅದಕ್ಕೋಸ್ಕರ ಯಾವ ರೈತ ಕೂಡ ಮಾರುವುದಕ್ಕೆ ಆಗದೆ ಕಂಗಾಲಾಗಿದ್ದಾನೆ. ಆತ್ಮಹತ್ಯೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಯಾವುದೇ ಕಾರಣಕ್ಕೂ ತೆಂಗು ಸುಮಾರು 10 ವರ್ಷಗಳಿಂದ ಗಿಡ ನೆಟ್ಟು ಬೆಳಿಸಿ ಕಾಪಾಡಿ ತೆಂಗಿನ ಕಾಯಿ ಮರದಿಂದ ಮನೆಗೆ ತೆಗೆದುಕೊಂಡು ಹೋಗುವ ವ್ಯವಸ್ಥೆಯಲ್ಲಿ 10 ತಿಂಗಳು ಬೇಕಾಗುತ್ತದೆ. ಕಾಯಿ ಬಿಟ್ಟು ಮನೆಗೆ ತೆಗೆದುಕೊಂಡು ಹೋಗಿ ಅಟ್ಟಕ್ಕೆ ಹಾಕಿ ಕೊಬ್ಬರಿ ಮಾಡುವುದಕ್ಕೆ 10 ತಿಂಗಳುಗಳು ಬೇಕಾಗುತ್ತವೆ. ಸುಮಾರು 20 ತಿಂಗಳು ಅದನ್ನು ಸಂರಕ್ಷಣೆ ಮಾಡಿ ತೆಗೆದುಕೊಂಡು ಮಾರುಕಟ್ಟೆಗೆ ಹೋದರೆ 2000 ರೂ.ಗೆ ಕೂಡ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇದಕ್ಕೋಸ್ಕರ ಸರ್ಕಾರ 3,550 ರೂಪಾಯಿ ದರ ನಿಗದಿ ಮಾಡಿದೆ. ಅದನ್ನು ಖಂಡಿತವಾಗಿ ಈ ವಾರದಿಂದ ಪ್ರಾರಂಭ ಮಾಡಿದರೆ

ಬಹಳ ಅನುಕೂಲವಾಗುತ್ತದೆ ಎಂದು ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸಾರಿ ಕೃಷಿ ಸಚಿವರೂ ಕೂಡ ಆಶ್ವಾಸನೆ ಕೊಟ್ಟಿದ್ದರು. ದೆಹಲಿಯಲ್ಲಿ ಹೋಗಿ ಕೃಷಿ ಸಚಿವರ ಹತ್ತಿರ ಮಾತನಾಡಿಕೊಂಡು ಅವರು ಕೊಡದೆ ಇದ್ದರೂ ಕೂಡ ಸರ್ಕಾರದ ವತಿಯಿಂದ ಆವರ್ತ ನಿಧಿ ಇಟ್ಟಿದ್ದೇವೆ, ಅದರ ಮೂಲಕ ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದುವರೆಗೆ ಅದು ಪ್ರಾರಂಭವಾಗಿಲ್ಲ. ದಯಮಾಡಿ ಅದರ ಬಗ್ಗೆ ಚರ್ಚೆ ಮಾಡಿ ತಕ್ಷಣ ಪ್ರಾರಂಭ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :— ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ತೆಂಗು ಬೆಳೆಗಾರರ ಸಮಸ್ಯೆ ಬಗ್ಗೆ, ಕೊಬ್ಬರಿ ಮಾರುತ್ತಿರುವವರ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ತಾವು ತೆಂಗು ಬೆಳೆಗಾರರ ಪ್ರದೇಶದಿಂದ ಬಂದಿದ್ದೀರಿ. ನಿಮಗೆ ಕೊಬ್ಬರಿ ವಹಿವಾಟು ಕೂಡ ತಿಳಿದಿದೆ. ಕಳೆದ 40-50 ವರ್ಷಗಳಲ್ಲಿ ರಾಜ್ಯಕ್ಕೆ ಇಂತಹ ಪರಿಸ್ಥಿತಿ ಎಂದೂ ಬಂದಿರಲಿಲ್ಲ. ಈಗ ತಾವು ಹೇಳಬೇಕು, ಈ ಸಭೆಯ ಮುಖೇತ ನನಗೂ ಕೂಡ ಬೆಳಕು ಚೆಲ್ಲಬೇಕಾಗುತ್ತದೆ. ನಮಗೂ ಕೂಡ ಅನುಭವಕ್ಕೆ ಬರಬೇಕಾಗುತ್ತದೆ. ನಾವು ಹೋದ ವರ್ಷ ನಫೆಡ್ ಮುಖೇನ 10,000 ಕ್ವಿಂಟಾಲ್‌ನಷ್ಟು ಕೊಬ್ಬರಿ ಕೊಂಡೆವು. 3,500 ರೂಪಾಯಿಯ ಹಾಗೆ ಕೊಂಡುಕೊಂಡು ದುಡ್ಡು ಕೊಡುವುದು ಕಷ್ಟವಾಯಿತು. ಇನ್ನು 70-80 ಲಕ್ಷ ರೂಪಾಯಿ ಕೊಟ್ಟರೆ ಮುಗಿಯುತ್ತದೆ. ತಿಪಟೂರಿನ ಕಡೆಯಿಂದ ದೆಹಲಿ ಮಾರುಕಟ್ಟೆಗೆ ರವಾನೆ ಮಾಡುವುದಕ್ಕಾಗಲಿಲ್ಲ. ಸ್ಟಾಕ್ ಹಾಗೆಯೇ ಕೊಳೆಯುತ್ತಿದೆ. ಜುಲೈನಲ್ಲಿ ಹೊಸ ಅರೈವಲ್ ಬರುತ್ತಿದೆ, ತಾವು ಫೋಟೋ ತೋರಿಸಿದಿರಿ, ಸಾಲುಗಟ್ಟಿ ನಿಂತಿದ್ದಾರೆಂದು ಹೇಳಿದ್ದೀರಿ, ನಿಜ ನಾವು ಒಪ್ಪುತ್ತೇವೆ. ತಮಗೆ ವಹಿವಾಟಿನ ಬಗ್ಗೆ ಗೊತ್ತಿದೆ. ಇಷ್ಟೆಲ್ಲಾ ಇದ್ದಾಗ್ಯೂ ಕೂಡ ಒಂದು ಕಡೆ ನುಸಿ ರೋಗ ಬಂದು ಬೆಳೆ ಕಡಿಮೆಯಾಗಿದೆ, ಬೆಳೆ ಕಡಿಮೆಯಾದರೂ ಬೆಲೆ ಏಕೆ ಇಲ್ಲ ಎನ್ನುವುದನ್ನು ನಿಮ್ಮ ಅನುಭವದಲ್ಲಿ ಹೇಳಬೇಕಾಗುತ್ತದೆ. ತುಮಕೂರು ಮತ್ತು ಕೋಲಾರ ಈ ಭಾಗದಲ್ಲಿ ಬೆಳೆಯುವುದು ಅದು ಕೇವಲ ತಿನ್ನುವುದಕ್ಕೆ ಉಪಯೋಗಿಸುತ್ತೇವೆ. ಎಣ್ಣೆ ಮಾಡುವುದಕ್ಕೆ ಉಪಯೋಗಿಸುವುದಿಲ್ಲ. ಸೌತ್ ಕೆನರಾ ಮತ್ತು ನಾರ್ತ್ ಕೆನರಾದಿಂದ ಬರುವಂತಹ ಮಿಲ್ಲಿಂಗ್ ಕೋಪ್ರಾವನ್ನು ಎಣ್ಣೆ ಮಾಡುವುದಕ್ಕೆ ಉಪಯೋಗಿಸುತ್ತೇವೆ. ಇವತ್ತು ಮಿಲ್ಲಿಂಗ್ ಕೋಪ್ರಾಗೆ ಬೆಲೆ ಇದೆ. ಬಾಲಕೋಪ್ರಾಗೆ ಎರಡು ವರ್ಷದ ಕೆಳಗೆ 100 ರೂಪಾಯಿ ಜಾಸ್ತಿ ಕೊಟ್ಟು ತೆಗೆದುಕೊಳ್ಳುತ್ತಿದ್ದರು. ತಾವೇ ಮಾರುತ್ತಿದ್ದಿರಿ. ತಮಗೆ ಗೊತ್ತಿದೆ. ಆದರೆ ಇವತ್ತು ಬಾಲಕೋಪ್ರಾ ಕೊಳ್ಳುವವರು ಇಲ್ಲ ಎಂದಾಗ ತಿನ್ನುವವರ ಸಂಖ್ಯೆ ಕಡಿಮೆ ಆಗಿದೆ, ಬೆಳೆ ಜಾಸ್ತಿಯಾಗಿದೆ, ಬೇರೆ ಎಲ್ಲಿಂದಲಾದರೂ ಬಾಲ ಕೋಪ್ರಾ ಬರುತ್ತಿದೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಬಾಲಕೋಪ್ರಾಗೆ ಡಿಮಾಂಡ್ ಕಡಿಮೆಯಾಗಿರುವುದು ಬೆಲೆ ಕುಸಿತಕ್ಕೆ ಕಾರಣ. ಉತ್ಪಾದನೆ ಜಾಸ್ತಿಯಾಗಿಲ್ಲ, ಕೋಕನಟ್ ಮೀಲ್ ಎಂದು ಇಂಪೋರ್ಟ್ ಆಗುತ್ತಿದೆ. ಆ ಕೋಕನಟ್ ಮೀಲ್ಸ್ ಅಂದರೆ ಕೊಬ್ಬರಿ ಬೇರೆ ಬೇರೆ

ನಟ್ ಎಂಬ ರೀತಿಯಲ್ಲಿ ಇಂಪೋರ್ಟ್ ಆಗುತ್ತಿದೆ. ಆ ಕಾರಣದಿಂದ ಶ್ರೀಮಂತ ದೇಶಗಳು ಎಕ್ಸ್‌ಪೋರ್ಟ್ ಸಬ್ಸಿಡಿ ಕೊಟ್ಟು ಇಲ್ಲಿ ಡಂಪ್ ಮಾಡುತ್ತಿರುವ ಕಾರಣ ಸ್ಥಳೀಯವಾಗಿ ಬರತಕ್ಕಂತಹ ಬಾಲಕೋಪ್ರಾಕ್ಕೆ ಬೇಡಿಕೆ ಕಡಿಮೆಯಾಗಿದೆ. ಇದನ್ನು ನಾನು ಉತ್ತರ ಕೊಡುವಾಗ ಇದಕ್ಕೆ ಏನು ಪರಿಹಾರ ಕಾರ್ಯಕ್ರಮ ಮಾಡಬೇಕೆಂದು ಹೇಳುತ್ತೇನೆ. ಕೊಬ್ಬರಿ ಬಗ್ಗೆ ತಮಗೆ ಸಾಕಷ್ಟು ಗೊತ್ತಿದೆ, ಸಾಕಷ್ಟು ಬೆಳಕು ಚೆಲ್ಲತಕ್ಕಂತಹ ಸಾಮರ್ಥ್ಯ ಇದೆ. ಬಾಲಕೋಪ್ರಾಕ್ಕೆ ಏಕೆ ಡಿಮ್ಯಾಂಡ್ ಕಡಿಮೆಯಾಗಿದೆ ಎಂಬುದು ಗೊತ್ತಿದೆ. ನಿಮಗೆ ತಿಪಟೂರಿನಿಂದ ದೆಹಲಿವರೆಗೆ ಸಂಪರ್ಕ ಇದೆ. ದಯಪಿಟ್ಟು ಆ ವಿಷಯ ಹೇಳಿ.

ಶ್ರೀ ಎಂ.ಡಿ. ಲಕ್ಷ್ಮೀ ನಾರಾಯಣ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಹಿಮಾಟು ಬಗ್ಗೆ ಮತ್ತು ಕೊಬ್ಬರಿ ಬಗ್ಗೆ ಹೇಳಿದರು. ಡಿಮ್ಯಾಂಡ್ ಮತ್ತು ಸಪ್ಲೈ ಮತ್ತು ಅದರ ಜೊತೆ ನುಸಿ ರೋಗ ಬಂದು ಮರಗಳು ಹಾಳಾಗಿರುವುದು ಒಂದು ಕಡೆ ಆದರೆ, ಕೊಬ್ಬರಿ ರೇಟ್ ಬಿದ್ದು ಕಡಿಮೆಯಾಗಿರುವುದು ಏಕೆ ಎಂದು ಕೇಳಿದರು. ತೆಂಗು ಎನ್ನುವುದು ಮರದಿಂದ ಕಿತ್ತ ಮೇಲೆ ಅದು ಬರತಕ್ಕಂತಹ ಸಮಯ 10 ತಿಂಗಳು ಹಿಡಿಯುತ್ತದೆ. ಅದು ಮನೆಗೆ ತಂದು ಹಾಕಿ ಕೊಬ್ಬರಿ ಮಾಡುವ ಹಂತದಲ್ಲಿ 10 ತಿಂಗಳುಗಳು ಬೇಕಾಗುತ್ತದೆ. ಅದಕ್ಕೆ 20 ತಿಂಗಳು ಸಮಯ ಬೇಕಾಗುತ್ತದೆ. ನುಸಿ ಪೀಡೆ ಹೋದ ವರ್ಷದಿಂದ ಪ್ರಾರಂಭವಾಗಿರತಕ್ಕಂತಹ ಸಂದರ್ಭದಲ್ಲಿ, 20 ತಿಂಗಳು ಬೇಕಾಗುತ್ತದೆ. ಮುಂದಿನ ವರ್ಷಕ್ಕೆ ಕೊಬ್ಬರಿಗೆ ಡಿಮ್ಯಾಂಡ್ ಬರತಕ್ಕಂತಹ ಸಂದರ್ಭ ಇದೆ ಹೋದ ವರ್ಷ ಪೂರ್ಣವಾಗಿ ಕಾಯಿ ಕಿತ್ತು ಹಾಕಿರತಕ್ಕಂತಹ ರೈತರು ತಮ್ಮ ಮನೆ ಅಟ್ಟದಲ್ಲಿ ಶೇಖರಣೆ ಮಾಡಿರುವ ಕೊಬ್ಬರಿ ಇದೆ. ಅದು ಖಾಲಿಯಾಗುವ ರೀತಿಯಲ್ಲಿ ಯಾವುದೇ ಕಾರಣಕ್ಕೂ ಧಾರಣೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಕಳೆದ ಸಾರಿ ಕೂಡ ವಿನಂತಿ ಮಾಡಿದ್ದೇವೆ. ಹೋದ ಸಾರಿ ತೆಗೆದುಕೊಂಡಿದ್ದು ಪೂರ್ಣವಾಗಿ ವೇರ್‌ಹೌಸ್‌ನಲ್ಲಿ ತುಂಬಿ ಹೋಗಿದೆ. ಛತ್ರಗಳಲ್ಲಿ ತುಂಬಿರುವುದು ಮತ್ತು ವೇರ್‌ಹೌಸ್‌ನಲ್ಲಿ ತುಂಬಿರುವುದು ಎಲ್ಲವೂ ಕೂಡ ಹಾಗೆಯೇ ಇದೆ. ಮೆಕ್ಕೆ ಜೋಳದ ಪರಿಸ್ಥಿತಿ ಹೇಗಾಯಿತು, ದಾವಣಗೆರೆ, ಹಾವೇರಿ, ಚಿತ್ರದುರ್ಗ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ಮೆಕ್ಕೆ ಜೋಳದ ಪರಿಸ್ಥಿತಿ ಹೇಗಾಯಿತು ಹಾಗೆಯೇ ಕೊಬ್ಬರಿ ಪರಿಸ್ಥಿತಿಯೂ ಆಗಿದೆ. ಒಂದು ವರ್ಷ ಸರ್ಕಾರ ದೊಡ್ಡ ಮನಸ್ಸು ಮಾಡಬೇಕಾಗುತ್ತದೆ. ಅದು ಖರ್ಚಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು 20 ವರ್ಷದಿಂದ ಅನುಭವ ಇರತಕ್ಕಂತಹ ವ್ಯವಸ್ಥೆಯಲ್ಲಿ ರೈತರ ಪರಿಸ್ಥಿತಿ ಬಗ್ಗೆ ಕಾಳಜಿ ಇರತಕ್ಕಂತಹ ಸರ್ಕಾರ, ರೈತರ ನೆರವಿಗೆ ಧಾವಿಸದೆ ಹೋದರೆ ಖಂಡಿತ ರೈತ ನಿರಾಶೆಯಾಗುತ್ತಾನೆ, ರೈತ ಆತ್ಮಹತ್ಯೆ ಮಾಡಿಕೊಳ್ಳುವ ವ್ಯವಸ್ಥೆಯಾಗುತ್ತದೆ. ದಯಮಾಡಿ ಸನ್ಮಾನ್ಯ ಮಂತ್ರಿಗಳು

4.50 ಪಿ.ಎಂ.

ಇವತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕುಳಿತು ಚರ್ಚೆ ಮಾಡಬೇಕು ಇದಕ್ಕೆ

ಮೂರು ಜನ ಮಂತ್ರಿಗಳು, ಅವರು ತೋಟಗಾರಿಕೆ, ಕೃಷಿ ಹಾಗೂ ಆಹಾರ ಮಂತ್ರಿಗಳು ಸೇರಿಕೊಂಡು ಖಂಡಿತವಾಗಿ ಮುಂದಿನ ವಾರದಿಂದಲೇ ಅದನ್ನು ಶೀಘ್ರವಾಗಿ ತೆರೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಆಗ್ರಹ ಮಾಡುತ್ತಾ, ಇತ್ತೀಚಿನ ದಿವಸಗಳಲ್ಲಿ 'ರೈತ ಮಿತ್ರ ಕೇಂದ್ರ' ಎನ್ನುವುದನ್ನು ಹೋಬಳಿ ಮಟ್ಟದಲ್ಲಿ ಮಾಡಿರುವುದನ್ನು ನಾನು ಶ್ಲಾಘನೆ ಮಾಡುತ್ತೇನೆ. ಅದು ಬಹಳ ಉತ್ತಮ ರೀತಿಯಲ್ಲಿದೆ. ಆದರೆ ಆ ರೈತ ಮಿತ್ರ ಕೇಂದ್ರ ಎಂದು ಮಾಡಿ ಅಲ್ಲಿರತಕ್ಕಂಥ ಅಗ್ರಿಕಲ್ಚರ್ ಅಸಿಸ್ಟೆಂಟ್ ಏನಿದ್ದಾರೆ ಅವರು ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇವತ್ತು ಒಂದು ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್ ಇರುತ್ತಾನೆ, ಆತ ಸರಿಯಾಗಿ ಪ್ರತಿದಿವಸ ಕೂಡ ಹಳ್ಳಿಗೆ ಹೋಗಿ ರೈತರಿಗೆ ಸರಿಯಾದಂತಹ ಮಾಹಿತಿಯನ್ನು ಕೊಟ್ಟು ಒಳ್ಳೆಯ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಮೊನ್ನೆ ನನ್ನ ಕ್ಷೇತ್ರದಲ್ಲಿ ರೈತ ಮಿತ್ರ ಕೇಂದ್ರದಿಂದ ಒಂದು ಸಭೆ ಮಾಡಿ ಅಲ್ಲಿ ಗುಂಪು ವಿಮಾ ಯೋಜನೆ ಬಗ್ಗೆ ಚರ್ಚೆಯಾಯಿತು. ವಿಮಾ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಆದರೆ ಆ ವಿಮಾ ಯೋಜನೆ ಸರಿಯಾಗಿ ಅನುಷ್ಠಾನಗೊಳಿಸುತ್ತಿಲ್ಲ. ಏಕೆಂದರೆ ಈ ತಿಂಗಳ 30ನೇ ತಾರೀಖು ಗಡುವು ಇದೆಯೆಂದು ಆ ಸಭೆಯಲ್ಲಿ ಅಧಿಕಾರಿಗಳು ಹೇಳಿದರು. ಆದರೆ ಇದುವರೆಗೂ ನಾವು ಬೀಜ ಬಿತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ರೈತ ಮಳೆ ಬಾರದೆ ಕಂಗಾಲಾಗಿ ಬೀಜವನ್ನು ಬಿತ್ತದೆ ಇರುವಂತಹ ಸಂದರ್ಭದಲ್ಲಿ ಈ ತಿಂಗಳ 30ನೇ ತಾರೀಖಿನೊಳಗೆ ವಿಮೆ ಯೋಜನೆ ಮಾಡಬೇಕೆಂದು ಅಲ್ಲಿನ ಅಧಿಕಾರಿಗಳು ರೈತರಿಗೆ ಹೇಳಿದರೆ ಯಾವರೀತಿ ವಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಅದನ್ನು ನಾನು ಒಪ್ಪಲಿಲ್ಲ. ಅಧಿಕಾರಿಗಳ ಜೊತೆ ಇದರ ಬಗ್ಗೆ ನಾನು ಚರ್ಚೆ ಮಾಡಿದೆ. ಅದಕ್ಕೆ ಅಧಿಕಾರಿಗಳು ಇಲ್ಲ ನಮಗೆ ಇನ್‌ಸ್ಟ್ರಕ್ಷನ್ ಈ ರೀತಿ ಇದೆ, ಈ ತಿಂಗಳ ಮೂವತ್ತನೆ ತಾರೀಖು ವಿಮೆ ಮಾಡದೇ ಹೋದರೆ ಹಾಳಾಗಿ ಹೋದಂತಹ ಬೆಳೆಗೆ ವಿಮೆ ಕೊಡುವುದಕ್ಕಾಗುವುದಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಆದುದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚಿಂತನೆ ಮಾಡಿ, ಈ ಯೋಜನೆ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಗ್ರಾಮಪಂಚಾಯಿತಿ ಮಟ್ಟದವರೆಗೂ ಕೃಷಿ ಇಲಾಖೆ ಕಾರ್ಯಕ್ರಮಗಳು ಹೋಗಬೇಕೆಂದು ನನ್ನ ಇಚ್ಛೆ. ಆದರೆ ಅವುಗಳು ಸಮರ್ಪಕವಾಗಿ ಗ್ರಾಮಪಂಚಾಯಿತಿ ಮಟ್ಟಕ್ಕೆ ತಲುಪುತ್ತಿಲ್ಲ. ಶಾಸಕರುಗಳು ಇಡೀ ಕ್ಷೇತ್ರವನ್ನು ಸುತ್ತುವಂತಹ ಸಂದರ್ಭದಲ್ಲಿ ಪೂರ್ತಿಯಾದಂತಹ ಮಾಹಿತಿಯನ್ನು ನಮಗೆ ಒದಗಿಸಿದರೆ ಖಂಡಿತವಾಗಿ ಕೂಡ ನಾವು ಅವುಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಪ್ರಮಾಣ ಸಂಸ್ಥೆ, ಇದರ ಬಗ್ಗೆ ಹೇಳುವುದಾದರೆ ಬೀಜದ ವಿಷಯದಲ್ಲಿ ಈಗಾಗಲೇ ಮಾನ್ಯ ಗುರುಸ್ವಾಮಿಯವರು ಒಂದು ಮಾತನ್ನು ಹೇಳಿದ್ದಾರೆ. ಕಳಪೆ ಬೀಜ ವಿತರಣೆ ಆಗುತ್ತಿರುವಂತಹ ಸಂದರ್ಭದಲ್ಲಿ

ನನ್ನ ಕ್ಷೇತ್ರದಲ್ಲಿ ಸುಮಾರು ನಾಲ್ಕು ಕಡೆಗಳಲ್ಲಿ ಬಿತ್ತಿದಂತಹ ಬೆಳೆಯಲ್ಲಿ ತೆನೆಗಳು ಬರದೆ ಬರಡು ಬೆಳೆಯನ್ನು ಕೊಯ್ಯುವಂತಹ ಪರಿಸ್ಥಿತಿ ಒದಗಿ ಬಂದಿದೆ. ಆದಕ್ಕೋಸ್ಕರ ಆದಕ್ಕೆ ಸಮರ್ಪಕವಾದಂತಹ ಅಧಿಕಾರಿಗಳನ್ನು ಬಿಟ್ಟು ಅದರ ಬಗ್ಗೆ ವಿಚಾರಣೆ ಮಾಡಿಸಿ ಆ ಸಂಸ್ಥೆಯ ವಿಚಾರದಲ್ಲಿ ತಾವು ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ತೋಟಗಾರಿಕೆ ವಿಷಯದಲ್ಲಿ ಹೇಳುವುದಾದರೆ, ಇತ್ತೀಚಿನ ದಿವಸಗಳಲ್ಲಿ ಉದಾಹರಣೆಗೆ ಈ ಫಾರ್ಮ್‌ಗಳಲ್ಲಿ ಸೀಬೆ, ಸಪೋಟ ಬೆಳೆಯುತ್ತಿದ್ದು, ಅಲ್ಲಿ ಎಲ್ಲೂ ಕೂಡ ನೀರು ಇಲ್ಲದೆ ಇರುವಂತಹ ಪರಿಸ್ಥಿತಿ ಇದೆ. ನಮ್ಮ ಭಾಗಗಳಲ್ಲಿ ಇವತ್ತು ಅಡಿಕೆ, ತೆಂಗು ಹಾಗೂ ಮಾವಿನ ಸಸಿ ಇರಬಹುದು, ಸಪೋಟ, ಸೀಬೆ ಇವುಗಳನ್ನು ಹಾಕಿದಂತಹ ಸಂದರ್ಭದಲ್ಲಿ ಅವುಗಳು ಬತ್ತಿಹೋಗತಕ್ಕಂಥ ವಿಚಾರ ಇದೆ. ತಾವು ತಮ್ಮ ಇಲಾಖಾ ವತಿಯಿಂದ ಹಣವನ್ನು ಕೊಡುತ್ತೀರಿ, ಆದರೆ ಅದು ಸರಿಯಾದ ರೀತಿಯಲ್ಲಿ ವಿನಿಯೋಗ ಆಗುತ್ತಿಲ್ಲವೆಂದು ಹೇಳುತ್ತೇನೆ. ಆದಕ್ಕೋಸ್ಕರ ಆ ಸಸಿಗಳನ್ನು ಬೆಳೆಸುವುದಕ್ಕೆ ವಿಶೇಷವಾಗಿ ರೈತರಿಗೋಸ್ಕರ ತೋಟಗಾರಿಕೆಯನ್ನು ಇಟ್ಟಿರುವಂತಹ ತಾವು ಅಲ್ಲಿ ಬೋರ್ ವ್ಯವಸ್ಥೆಯನ್ನು ಮಾಡುವ ಕ್ರಮವನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ವಿಶೇಷವಾಗಿ ಗಮನ ಹರಿಸಬೇಕಾಗುತ್ತದೆ ಎಂದು ಹೇಳುತ್ತಾ, ಇವತ್ತು ರೈತ ಮಳೆ ಬಾರದೆ ಕಂಗಾಲಾಗಿರುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಲ ಸಂವರ್ಧನೆ ಯೋಜನೆಯಲ್ಲಿ 2000 ಕೆರೆಗಳನ್ನು ಹೂಳು ತೆಗೆಯಬೇಕೆಂದು ಉಲ್ಲೇಖ ಮಾಡಿ ಹೇಳಿದರು, ಅದು ಬಹಳ ಒಳ್ಳೆಯ ವಿಚಾರ. ನಾನು ಇದನ್ನು ಶ್ಲಾಘನೆ ಮಾಡುತ್ತೇನೆ. ಆದರೆ ನನ್ನ ಒಂದು ಪ್ರಾರ್ಥನೆ ಏನೆಂದರೆ, ಇವತ್ತಿನ ದಿವಸ ಏನಾಗಿದೆ ಎಂದರೆ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಾದ ಕುಮಾರ್ ಬಂಗಾರಪ್ಪನವರು ಬೆಳಿಗ್ಗೆ ಕೆರೆಗಳ ಹೂಳೆತ್ತುವ ವಿಷಯದಲ್ಲಿ ಒಂದು ಮಾತನ್ನು ಹೇಳಿದರು. ಅದರ ಬಗ್ಗೆ ನನ್ನ ಸಲಹೆ ಮಾನ್ಯ ಮಂತ್ರಿಗಳಿಗೆ ತಿಳಿಸತಕ್ಕಂಥಾದ್ದು ಏನೆಂದರೆ, ಇವತ್ತು ಕೆರೆಗಳನ್ನು ಹೂಳೆತ್ತುವಂತಹ ವಿಚಾರದಲ್ಲಿ ಈಗಾಗಲೇ ಎಲ್ಲಾ ಶಾಸಕರೂ ಕೂಡ ಕೆರೆಗಳ ಲಿಸ್ಟ್ ಅನ್ನು ಕೊಟ್ಟಿದ್ದು, ಇವತ್ತು ಕೆರೆಗಳು ಏನು ಒಂದು ಲಿಂಕ್ ಅನ್ನು ಮಾಡಿಕೊಂಡಿವೆ, ಒಂದು ಕೆರೆಯಿಂದ ಇನ್ನೊಂದು ಕೆರೆಗೆ ಹಾಗೂ ಮತ್ತೊಂದು ಕೆರೆಗೆ, ಈ 7-8 ಕೆರೆಗಳಿಗೆ ನೀರು ಬರತಕ್ಕಂಥ ಸಂದರ್ಭದಲ್ಲಿ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಬಹಳಷ್ಟು ವಿಷಯಗಳನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಾನು ಏಕೆ ಹೇಳುತ್ತೇನೆಂದರೆ ಮೊದಲು ಕೆರೆಗೆ ನೀರು ಬರತಕ್ಕಂಥ ಸಂದರ್ಭದಲ್ಲಿ ಅದನ್ನು ತುಂಬಾ ಆಳವನ್ನಾಗಿ ಮಾಡಿ, ನಂತರ ಕೆಳಗಡೆ ಇರತಕ್ಕಂಥ ಐದು ಕೆರೆಗಳಿಗೆ ನೀರು ಬರುವುದಕ್ಕೆ ವ್ಯವಸ್ಥೆ ಮಾಡಿದರೆ ಅದು ತುಂಬಾ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ ಅಧಿಕಾರಿಗಳು ಈಗಾಗಲೇ ಒಂದು ಲಿಸ್ಟ್ ಅನ್ನು ತಯಾರು ಮಾಡಿದ್ದಾರೆ. ಯಾವುದೋ ಒಂದು

ಕೆರೆಯಲ್ಲಿ ಹೂಳು ತೆಗೆಯತಕ್ಕಂಥ ವ್ಯವಸ್ಥೆ ಮಾಡಿದರೆ ಖಂಡಿತವಾಗಿ ಕೂಡ ಮೇಲುಗಡೆ ಇರುವಂತಹ ನಾಲ್ಕೈದು ಕೆರೆಗಳು ಬಿಟ್ಟು ಹೋಗುತ್ತವೆ. ಆದಕ್ಕೋಸ್ಕರ ಮೇಲುಭಾಗದಲ್ಲಿ ಇರತಕ್ಕಂಥ ಕೆರೆಯ ಹೂಳನ್ನು ತೆಗೆದಾಗ ಆದರಲ್ಲಿ ಸಂಪೂರ್ಣವಾಗಿ ನೀರು ನಿಂತು, ಆದರಿಂದ ಕೆಳಗಡೆ ಇರತಕ್ಕಂಥ ಕೆರೆಗಳಿಗೆ ನೀರು ಬರತಕ್ಕಂಥ ವ್ಯವಸ್ಥೆ ಆಗುತ್ತದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಾಗೂ ನಾನು ಒಂದು ಮಾತನ್ನು ಬಹಳ ನೊಂದು ಹೇಳುತ್ತೇನೆ, ತಾವೇನು ಸಣ್ಣ ಕೆರೆಗಳಿಗೆ ಆದ್ಯತೆ ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಇವತ್ತು ಕೃಷಿ ಅವಲಂಬನೆಯಾಗಿರುವ ಕೃಷಿ ರೈತ ತಮ್ಮ ಜಮೀನುಗಳಲ್ಲಿ ಸಣ್ಣ ಸಣ್ಣ 2-3 ಎಕರೆಗಳಲ್ಲಿ ಇರತಕ್ಕಂಥ ಗೋಕಟ್ಟೆಗಳನ್ನು ಜಿಲ್ಲಾಪಂಚಾಯತ್‌ಗೆ ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಇವತ್ತಿನವರೆಗೂ ಎಂದರೆ ಹತ್ತಿಪ್ಪತ್ತು ವರ್ಷವಾದರೂ ಕೂಡ ಯಾವುದೇ ಕಾರಣಕ್ಕೆ ಇಂಪ್ಲಿಮೆಂಟ್ ಮಾಡತಕ್ಕಂಥ ವ್ಯವಸ್ಥೆ ಮಾಡಿಲ್ಲ. ಆದಕ್ಕೋಸ್ಕರ ದಯಮಾಡಿ ಜಿಲ್ಲಾಪಂಚಾಯತ್ ನಲ್ಲಿ ಇರತಕ್ಕಂತಥ ಸಣ್ಣಪುಟ್ಟ ಗೋಕಟ್ಟೆಗಳನ್ನು ಕೃಷಿ ಇಲಾಖೆಗೆ ವರ್ಗಾವಣೆ ಮಾಡಿ, ಆ ಕೃಷಿ ಇಲಾಖಾವತಿಯಿಂದ ರೈತರಿಗೆ ಉತ್ತಮವಾಗಿ ಅನುಕೂಲ ಮಾಡಿಕೊಡಬೇಕೆಂದು ನನ್ನ ಮನವಿ. ಇದುವರೆಗೂ ಕೂಡ ಜಿಲ್ಲಾಪಂಚಾಯತ್ ನಲ್ಲಿ ಒಂದೇ ಒಂದು ಗೋಕಟ್ಟೆಗಳನ್ನು ಕೂಡ ತೆಗೆದುಕೊಂಡಿಲ್ಲ. ಆದರ ಬಗ್ಗೆ ಸಾಕಷ್ಟು ನನ್ನ ಹತ್ತಿರ ದಾಖಲಾತಿಗಳು ಇವೆ. ಆದುದರಿಂದ ಆ ರೈತನಿಗೆ ಅನುಕೂಲವಾಗಬೇಕೆಂದರೆ ಹತ್ತಿಪ್ಪತ್ತು ಎಕರೆ ಜಮೀನು ಹೊಂದಿರತಕ್ಕಂಥ ರೈತನಿಗೆ ಗೋಕಟ್ಟೆಗಳನ್ನು ಆಳವಾಗಿ ಮಾಡಿ ಆದರಲ್ಲಿರತಕ್ಕಂಥ ಮಣ್ಣು ತೆಗೆದು, ಆದಕ್ಕೆ ಒಂದು ತೂಬು ಇಡಿಸಿಕೊಂಡಾಗ ಖಂಡಿತವಾಗಿ ಅನುಕೂಲವಾಗುತ್ತದೆಂದು ಹೇಳುತ್ತಾ, ಆದನ್ನು ಕೃಷಿ ಇಲಾಖೆಗೆ ವರ್ಗಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲಾಖೆಗಳ ಬೇಡಿಕೆ ಬಗ್ಗೆ ಮಾತನಾಡುವುದಕ್ಕೆ ಅನುವು ಮಾಡಿಕೊಟ್ಟಂತಹ ಸಂದರ್ಭದಲ್ಲಿ ಅನೇಕ ದೂಷಪೂರಿತ ವಿಷಯಗಳು ತುಂಬಿರತಕ್ಕಂಥ ಇಲಾಖೆಗಳಲ್ಲಿ ಅವುಗಳನ್ನು ಬದಲಾವಣೆ ಮಾಡಬೇಕು. ಇನ್ನು ನುಸಿ ರೋಗ ವಿಷಯದಲ್ಲಿ ನೀರಾ ಇಳಿಸುವಂತಾದ್ದು ಒಂದು ಕಡೆಯಾದರೆ ತೆಂಗಿನ ಬೆಳೆಗಾರರಿಗೆ ಆಗಿರತಕ್ಕಂಥ ಅನ್ಯಾಯದಲ್ಲಿ ಕೊಬ್ಬರಿಯನ್ನು ತಕ್ಷಣವೇ ಎಂದರೆ ಈ ವಾರದಲ್ಲಿ ಖರೀದಿ ಮಾಡತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ಹಾಕುತ್ತಾ, ಈ ವಿಚಾರವನ್ನು ಖಂಡಿತವಾಗಿ ಮಾಡಬೇಕೆಂದು ಆಗ್ರಹ ಪೂರ್ವಕವಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಆಧ್ಯಕ್ಷರೆ, ನಾನು ಮುಖ್ಯವಾಗಿ ಶಿಕ್ಷಣ ಇಲಾಖೆ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ಇದ್ದೆ. ಆದರೆ ವಯಸ್ಕರ ಹಾಗೂ ಉನ್ನತ ಶಿಕ್ಷಣ ಮಂತ್ರಿಗಳು ಇಲ್ಲಿ ಇಲ್ಲ.

ಚೇರ್‌ಮನ್ :— ನೀವು ಚರ್ಚೆಯನ್ನು ಪ್ರಾರಂಭಮಾಡಿ.

ಶ್ರೀ ಸಿ.ಎಸ್. ನಾಡಗೌಡ :— ಶಿಕ್ಷಣ ಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ.

ಶ್ರೀ ಬಿ. ಸೋಮಶೇಖರ್ :— ಹಾಗಾದರೆ ಈ ಮನೆಗೆ ಅಷ್ಟು ಗೌರವ ಇಲ್ಲವೇ? ಮಾನ್ಯ ಅಧ್ಯಕ್ಷರೆ, ನಾವು ಸರ್ಕಾರವನ್ನು ನೋಡಿದ್ದೇವೆ. ಪ್ರತಿಯೊಬ್ಬ ಮಂತ್ರಿಗಳೂ ಕೂಡ ಅವರವರ ಇಲಾಖೆ ಬಗ್ಗೆ ಚರ್ಚೆ ನಡೆಯುತ್ತಿರುವಾಗ ನೋಟ್ಸ್ ಮಾಡಿಕೊಳ್ಳಬೇಕು. ಇಲ್ಲಿ ಯಾವ ಮಂತ್ರಿಗಳು ಕಾಣಿಸುತ್ತಿಲ್ಲ. ಎಲ್ಲರೂ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಯಾವ್ಯಾವ ಬೇಡಿಕೆಗಳನ್ನು ಇವತ್ತು ಮಂಡಿಸಿದ್ದಾರೆ, ಆ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ, ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ.

ಚೇರ್‌ಮನ್ :— ಬೇಡಿಕೆಗಳನ್ನು ಇವತ್ತು ಮಂಡಿಸಿದಂತಹ ಹೆಚ್ಚಿನ ಮಂತ್ರಿಗಳು ಇಲ್ಲೆ ಇದ್ದಾರೆ.

ಶ್ರೀ ಸಿ.ಎಸ್. ನಾಡಗೌಡ :— ಐದು ದಿವಸವಾಯಿತು ಸಭೆ ಹೀಗೆ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಆ ಮನೆಗೆ ಕೂಡ ಹೋಗಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ಈ ಸದನಕ್ಕೆ ಇರುವಂತಹ ಮಹತ್ವವೇ ಬೇರೆ. ಇಲ್ಲಿ ನೇರವಾಗಿ ಜನರಿಂದ ಆರಿಸಿ ಬಂದಿರುವಂತಹ ಪ್ರಜಾಪ್ರತಿನಿಧಿಗಳು ಇದ್ದಾರೆ. ಅವರು ಚರ್ಚೆ ಮಾಡಬೇಕಾಗಿದೆ.

ಚೇರ್‌ಮನ್ :— ಎಲ್ಲಾ ಮಂತ್ರಿಗಳು ಇದ್ದಾರೆ.

ಶ್ರೀ ಬಿ. ಸೋಮಶೇಖರ್ :— ಆರೋಗ್ಯ ಮಂತ್ರಿಗಳು ಇಲ್ಲ, ಶಿಕ್ಷಣ ಮಂತ್ರಿಗಳು ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರ್ಯಾರು ಇದ್ದಾರೆ ಎಂದು ಹೇಳುತ್ತೇನೆ. ತೋಟಗಾರಿಕಾ ಮಂತ್ರಿಗಳು ಇದ್ದಾರೆ. ಪಶುಸಂಗೋಪನೆ ಮಂತ್ರಿಗಳು ಇಲ್ಲ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಮಂತ್ರಿ ಇದ್ದಾರೆ. ಮಾಹಿತಿ ತಂತ್ರಜ್ಞಾನ ಸಚಿವರು ಇದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು, ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ ಮತ್ತು ಲೇಖನ ಸಾಮಗ್ರಿ ಮತ್ತು ಮುದ್ರಣ ಮಂತ್ರಿಗಳು ಎಲ್ಲಿದ್ದಾರೆ? ಯಾವ ಮಂತ್ರಿಗಳೂ ಸದನದಲ್ಲಿ ಇಲ್ಲ.

ಚೇರ್ಮನ್ :— ಮಾನ್ಯ ಸೋಮಶೇಖರ್‌ರವರೇ, ಈಗ ತಾವು ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡಿ, ಅಷ್ಟರಲ್ಲಿ ಶಿಕ್ಷಣ ಸಚಿವರು ಸಭೆಗೆ ಬರುತ್ತಾರೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಚೇರ್ಮನ್‌ರವರೇ, ಸರ್ಕಾರ ಇವತ್ತು ಸುಮಾರು 14 ಬೇಡಿಕೆಗಳನ್ನು ಸದನದ ಮುಂದೆ ಚರ್ಚೆಗೋಸ್ಕರ ಮಂಡಿಸಿದ್ದಾರೆ. ಅದರಲ್ಲಿ ಎಲ್ಲಾ ಇಲಾಖೆಗಳ ಬೇಡಿಕೆ ಬಗ್ಗೆ ನಾನು ಮಾತನಾಡಲು ಇಚ್ಛಿಸುವುದಿಲ್ಲ.

ನನ್ನ ಬಹು ಭಾಗದ ಚರ್ಚೆ ಕೇವಲ ಶಿಕ್ಷಣ ಇಲಾಖೆಗೆ ಸಂಬಂಧಿಸಿದ್ದಾಗಿದೆ. ಈಗ ಮಾನ್ಯ ತೋಟಗಾರಿಕೆಯ ಮಂತ್ರಿಗಳು ಸಭೆಯಲ್ಲಿರುವುದರಿಂದ ಅವರಿಗೆ ನಾನು ಎರಡು-ಮೂರು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈ ತೋಟಗಾರಿಕೆ ಇಲಾಖೆ ಬಹಳ ವಿಸ್ತಾರವಾದಂತಹ ಇಲಾಖೆಯಾಗಿದೆ. ಹಿಂದೆ ಇದ್ದಹಾಗೆ ಕೇವಲ ಪಾರ್ಕ್, ಉದ್ಯಾನವನಗಳು, ಇದ್ದಹಾಗೆ ಇಲ್ಲ. ಇವತ್ತು ಆರ್ಥಿಕ ಬೆಳೆಗಳನ್ನು ಬೆಳೆಯಬೇಕಾದರೆ ಮತ್ತು ರೈತನ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಬೇಕಾದರೆ ತೋಟಗಾರಿಕಾ ಬೆಳೆಗಳನ್ನು ಬೆಳೆಯುವಂಥಾದ್ದು ಬಹಳ ಅವಶ್ಯಕವಾಗಿದೆ. ನಾವು ತೋಟಗಾರಿಕಾ ಬೆಳೆಗಳೆಂದು ತೆಂಗು, ತಾಳೆ, ಅಡಿಕೆ, ಮಾವು, ಎಂದು ಏನಿದೆ ಇವುಗಳನ್ನು ಅಭಿವೃದ್ಧಿಪಡಿಸುವಂಥಾದ್ದು, ಆಗಬೇಕು. ರೈತರಿಗೆ ಇಂತಹ ಉತ್ತಮವಾದಂತಹ ಸಸಿಗಳನ್ನು ವಿತರಣೆ ಮಾಡುವಂಥಾದ್ದು, ಇದರಿಂದ ಹಣ್ಣುಗಳು, ತರಕಾರಿಗಳನ್ನು ಹೆಚ್ಚು ಉತ್ಪಾದನೆ ಮಾಡುವಂಥಾದ್ದು ಈ ತೋಟಗಾರಿಕೆಯ ಇಲಾಖೆಯ ಕೆಲಸವಾಗಿರುತ್ತದೆ. ಈ ಇಲಾಖೆ ಬಹಳ ಹಳೆಯದಾದಂತಹ ಇಲಾಖೆಯಾಗಿದೆ. ನಮ್ಮ ಭಾರತ ದೇಶದಲ್ಲಿ ಹಿಮಾಚಲ್ ಪ್ರದೇಶವನ್ನು ಬಿಟ್ಟರೆ ಕರ್ನಾಟಕ ರಾಜ್ಯ ಈ ತೋಟಗಾರಿಕೆಯಲ್ಲಿ ಎರಡನೇ ಮಹತ್ತರವಾದಂತಹ ರಾಜ್ಯವಾಗಿದೆ. ಇದರಲ್ಲಿ ತೋಟಗಾರಿಕಾ ಕ್ಷೇತ್ರಗಳ ಫಾರಂ ಸುಮಾರು 310 ಇದೆ, ಸಾವಿರಾರು ಎಕರೆ ಪ್ರದೇಶ ಇದಕ್ಕೆ ಮೀಸಲಾಗಿದೆ. ಆದರೆ ಅಲ್ಲಿ ಈ ತೋಟಗಾರಿಕೆಯ ಪರಿಸ್ಥಿತಿಯನ್ನು ನೋಡಿದರೆ ತುಂಬಾ ಚಿಂತಾಜನಕವಾಗಿದೆ. ಈ ಕ್ಷೇತ್ರಗಳಿಂದ ಎಷ್ಟು ಉತ್ಪತ್ತಿಯನ್ನು ತೆಗೆಯಬೇಕೋ ಅಷ್ಟನ್ನು ತೆಗೆಯುವುದಕ್ಕೆ ಆಗುತ್ತಾ ಇಲ್ಲ. ರೈತರಿಗೆ ಎಷ್ಟು ಸಸಿಗಳನ್ನು, ಗಿಡಗಳನ್ನು, ಕೊಡಬೇಕಾಗಿತ್ತೊ, ಅದನ್ನು ಕೊಡುವುದಕ್ಕಾಗುತ್ತಿಲ್ಲ, ಮತ್ತು ಅಲ್ಲಿರುವಂತಹ ಬೆಳೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕಾಗಿತ್ತು, ಎಷ್ಟು ಆದಾಯವನ್ನು ತೆಗೆಯಬೇಕೊ, ಅದನ್ನು ತೆಗೆಯುವುದಕ್ಕೆ ಆಗುತ್ತಾ ಇಲ್ಲ. ಈ ವಿಚಾರಗಳ ಬಗ್ಗೆ ನಾವು 1985ರಲ್ಲಿ ಅಭಿವೃದ್ಧಿ ಪಡಿಸುವಂತಹದಕ್ಕೆ ಪ್ರಯತ್ನವನ್ನು ಮಾಡಿದೆವು. ಅದು ಹೇಗೆಂದರೆ ಪ್ಲಾಂಟವೈಸ್ ತೆಂಗು ಇರಬಹುದು, ಸಪೋಟವಿರಬಹುದು, ಈ ರೀತಿಯಾಗಿ ಬೇರೆ ಬೇರೆ ಗಿಡಗಳು ಇರಬಹುದು. ಇವು ಎಷ್ಟು ಮರಗಳು ಯಾವ್ಯಾವ ಕ್ಷೇತ್ರಗಳಲ್ಲಿವೆ, ಎಷ್ಟು ಗ್ರಾಫ್ಟ್ಸ್ ಮಾಡಬಹುದೆಂಬ ಬಗ್ಗೆ ಇಲಾಖೆಯ ಅಧಿಕಾರಿಗಳನ್ನು ಕೂರಿಸಿಕೊಂಡು, ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟು ರಾಜ್ಯದ ಪ್ರತಿ ಜಿಲ್ಲೆಗಳಿಗೆ ಹೋಗಿ ಅಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ಕುಳಿತು ಪ್ಲಾಂಟ್ ವೈಸ್ ಟಾರ್ಗೆಟ್ ಅನ್ನು ಕೊಟ್ಟಿದ್ದೇವೆ. ನಾವು ಅವರೊಡನೆ ಎಷ್ಟು ತೆಂಗಿನ ಸಸಿಗಳನ್ನು ಬೆಳೆಸಬಹುದು, ಎಷ್ಟು ಮಾವಿನ ಮರಗಳು ಇವೆ, ಆದರಿಂದ ಎಷ್ಟು ಗ್ರ್ಯಾಫ್ಟ್ಸ್ ಮಾಡಬಹುದು, ಎಷ್ಟು ಸಪೋಟ ಮರಗಳು ಇವೆ, ಇವೆಲ್ಲದ್ದರ ಬಗ್ಗೆ ಅಧಿಕಾರಿಗಳು ಏನು ಹೇಳುತ್ತಾರೆನ್ನುವುದನ್ನು ನೋಡಿ, ಇದರ ಬಗ್ಗೆ ಟಾರ್ಗೆಟ್ ಕೊಟ್ಟು ಒಂದು ಪುಸ್ತಕವನ್ನು ತಯಾರು ಮಾಡಿ, ಅದರಿಂದ ಎಷ್ಟು ಆದಾಯ ಬರುತ್ತದೆ, ಎಷ್ಟು ಮರಗಳಿವೆ, ಎಷ್ಟು ಕೆ.ಜಿ. ಹಣ್ಣು ಬರುತ್ತದೆ, ಎಂಬ ಬಗ್ಗೆ ಅಧಿಕಾರಿಗಳಿಗೆ ಬಿಟ್ಟಾಗ ಅವರು ಪ್ರಯತ್ನ ಮಾಡಿ ಇದರ

ಆದಾಯ 97 ಲಕ್ಷ ರೂಪಾಯಿಗಳು ಇದ್ದಂಥಾದ್ದು ಮೂರು ಕೋಟಿ ರೂಪಾಯಿಗಳ ಆದಾಯ ಎರಡು-ಮೂರು ತಿಂಗಳಲ್ಲಿ ಆಯಿತು. ಇದಾದನಂತರ ಈ ಕೆಲಸ ಹಾಗೆ ನಿಂತು ಹೋಯಿತು. ತಾವು ಈ ರೀತಿಯಲ್ಲೇ ಜಿಲ್ಲೆಗಳ ವರದಿಗಳನ್ನು ತರಿಸಿಕೊಂಡು ನಿಮ್ಮ ಎಲ್ಲಾ ಇಲಾಖೆಯವರಿಗೆ ಕೊಡಬೇಕು, ನೀವು ಕೊಡುವಂತಹ ಟಾರ್ಗೆಟ್ ಅನ್ನು ಅವರು ಸಾಧನೆ ಮಾಡಬೇಕು. ಇದಕ್ಕೆ ಏನೇನು ಅನುಕೂಲಗಳು ಬೇಕಾಗುತ್ತದೆಯೋ ಅದು ಬೋರ್‌ವೆಲ್ ಕೆಟ್ಟುಹೋಗಿದ್ದರೆ ಅದನ್ನು ಸರಿಮಾಡುವಂಥಾದ್ದು, ಪೈಪ್ ಲೈನ್‌ಗಳು ಕೆಟ್ಟು ಹೋಗಿದ್ದರೆ, ಮತ್ತೆ ಬೋರ್‌ವೆಲ್‌ಗಳನ್ನು ತೆಗೆಯಬೇಕೆಂದರೆ ಇಂತಹ ಕೆಲಸಗಳನ್ನು ಮಾಡಿಸಬೇಕು. ಸರ್ಕಾರ ಇಂತಹ ತೊಂದರೆಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಬೇಕು. ತಾವು ಈ ರೀತಿಯಾಗಿ ಮಾಡಿದ್ದೇ ಆದರೆ ಕರ್ನಾಟಕ ರಾಜ್ಯವನ್ನು ಸಂಪೂರ್ಣವಾಗಿ ತೋಟಗಾರಿಕೆಯ ಕ್ಷೇತ್ರವನ್ನಾಗಿ ಮಾಡಬಹುದು. ಇದರಿಂದ ಹಣ್ಣು, ತರಕಾರಿಗಳನ್ನು, ಬೆಳೆಯಬಹುದು ಮತ್ತು ಆದಾಯವನ್ನು ಮಾಡಬಹುದು. ಈ ದಿಶೆಯಲ್ಲಿ ತಾವು ಏನೇನು ಪ್ರಯತ್ನಗಳನ್ನು ಮಾಡಬೇಕೆಂದು ಇದ್ದೀರಿ, ಅದನ್ನು ನಾನು ಕೇಳಿದ್ದೇನೆ. ಈ ತೋಟಗಾರಿಕೆಯ ಇಲಾಖೆಯನ್ನು ಖಾಸಗಿ ವ್ಯಕ್ತಿಗಳಿಗೆ ಕೊಟ್ಟರೆ ಇದರಿಂದ ಸರ್ಕಾರಕ್ಕೆ ಅನ್ಯಾಯವಾಗುತ್ತದೆ. ಇವರಿಗೆ ಈ ಇಲಾಖೆಯನ್ನು ಕೊಡಬೇಡಿ, ತಾವೇ ಇದನ್ನು ಅಭಿವೃದ್ಧಿ ಮಾಡುವಂತಹ ಪ್ರಯತ್ನ ಮಾಡಬೇಕು. ಇನ್ನು ಎರಡನೆಯದಾಗಿ ಹಾಪಕಾಮ್ಸ್ ನಾವು ಪ್ರತಿ ಜಿಲ್ಲೆಗಳಲ್ಲೂ ಜಿಲ್ಲಾ ಸಹಕಾರ ಸಂಘಗಳನ್ನು ಮಾಡಿದೆವು, ಮತ್ತೆ "ತೋಟಗಾರಿಕಾ ಬೆಳೆಗಾರರ ಮತ್ತು ಮಾರಾಟ ಸಂಸ್ಕರಣಾ ಸಹಕಾರ ಸಂಘ"ಗಳೆಂದು ಜಿಲ್ಲಾಮಟ್ಟದ ಸಮಿತಿಗಳನ್ನು ಮಾಡಿದೆವು. ಮೈಸೂರು ಹಾರ್ಟಿಕಲ್ಚರ್ ಸೊಸೈಟಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದರು. ಈ ಸಂಸ್ಕರಣಾ, ಮಾರಾಟ, ಸಹಕಾರಗಳು ಏನಿವೆ ಇವು ಕೆಲಸ ಮಾಡುತ್ತಿಲ್ಲ. ಈ ಸಹಕಾರ ಸಂಘಗಳ ಕೆಲಸವನ್ನು ಚುರುಕುಗೊಳಿಸಿದರೆ ಜಿಲ್ಲೆಗಳಲ್ಲಿ ಉತ್ಪತ್ತಿ ಮಾಡಿದಂತಹ ಹಣ್ಣುಗಳು, ತರಕಾರಿಗಳನ್ನು ಕೊಂಡುಕೊಳ್ಳುವಂಥಾದ್ದು, ಮಾರಾಟ ಮಾಡುವಂತಹ ಜಾಲವನ್ನು ನಿರ್ಮಾಣ ಮಾಡಬಹುದು. ಆದರ ಮುಖಾಂತರ ಒಂದು ಫೆಡರೇಷನ್ ಅನ್ನು ಮಾಡಬೇಕೆಂದು ಇತ್ತು. ಈ ಎಲ್ಲಾ ಸಹಕಾರ ಸಂಘಗಳನ್ನು ಸೇರಿಸಿ ಒಂದು "ಹಾರ್ಟಿಕಲ್ಚರ್ ಫೆಡರೇಷನ್" ಎಂದು ಮಾಡಿ ಆದರ ಮುಖಾಂತರ ಹೆಚ್ಚು ಹೆಚ್ಚಾಗಿ ಏನು ಬೆಳೆಯುತ್ತಾರೆ, ಅದನ್ನು ಬೇರೆ ರಾಜ್ಯಗಳಿಗೆ ಮತ್ತು ಹೊರ ದೇಶಗಳಿಗೆ ಕಳುಹಿಸುವಂತಹ ಕೆಲಸವನ್ನು ಸಕ್ರಿಯವಾಗಿ ಮಾಡಬಹುದಾಗಿತ್ತು, ಅದನ್ನು ಏಕೋ ಮಾಡಿಲ್ಲ. ತಾವು ಅದನ್ನು ಮಾಡಬಹುದು. ಇನ್ನು ಮೂರನೆಯದಾಗಿ ನಮ್ಮ ಕೆಮ್ಮಣ್ಣುಗುಂಡಿ ಇರಬಹುದು, ಕೂರ್ಗ್ ಇರಬಹುದು, ಈ ಕಡೆಗಳಲ್ಲಿ ಸಾವಿರಾರು ಲೀಟರ್ ನೀರು ಹರಿದು ಹೋಗುತ್ತಿದೆ. ಇದು ಕುಡಿಯಲು ಉತ್ತಮವಾದಂತಹ ಮಿನರಲ್ ವಾಟರ್ ಆಗಿದೆ. ಇದು ಶುದ್ಧವಾದ ನೀರಾಗಿದ್ದು, ಇದಕ್ಕೆ ತೋಟಗಾರಿಕೆಯ ಇಲಾಖೆಯ ಸಹಕಾರ ಸಂಘಗಳು ಬಾಟಲ್‌ಗಳನ್ನು ಮಾಡಿ ಅದನ್ನು ಮಾರಾಟ

ಮಾಡಿದರೆ ಇದರಿಂದಲೂ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ಆದಾಯ ಬರುತ್ತದೆ. ತಾವು ಈ ಕೆಲಸವನ್ನು ಮಾಡಬಹುದು. ಇದು ನನ್ನ ಸಲಹೆಯಾಗಿದೆ. ಇನ್ನು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಹಾಗೆ ಸದನದಲ್ಲಿ ಈ ಇಲಾಖೆಗೆ ಸಂಬಂಧಪಟ್ಟಂತಹ ಅಧಿಕಾರಿಗಳು ಇದ್ದಾರೆಂದು ತಿಳಿದುಕೊಂಡಿದ್ದೇನೆ. ಇವತ್ತು ಪ್ರಾಥಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಗ್ರಂಥಾಲಯ, ಮತ್ತು ಮುದ್ರಣ, ಹಾಗೂ ಉನ್ನತ ಶಿಕ್ಷಣ, ತಾಂತ್ರಿಕ ಇಲಾಖೆ, ಈ ಎಲ್ಲಾ ಇಲಾಖೆಗಳ ಬಗ್ಗೆ ಇವತ್ತು ಗೊಂದಲಮಯವಾದಂತಹ ವಾತಾವರಣ ಸೃಷ್ಟಿಯಾಗಿದೆ. ಅದರಲ್ಲಿ ಪ್ರಮುಖವಾದಂತಹ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಕಳೆದ ಒಂದು ವರ್ಷದಿಂದಿಚೆಗೆ ನಮ್ಮ ಪೋಷಕರಲ್ಲಿ, ವಿದ್ಯಾರ್ಥಿಗಳಲ್ಲಿ ಗೊಂದಲವಾಗಿ, ಪ್ರವೇಶದಲ್ಲೂ ಸಹ ಗೊಂದಲವಾಗಿರುವುದನ್ನು ನೋಡಿದ್ದೇವೆ. ನಾವು ಈ ಬಗ್ಗೆ ಎಷ್ಟೆ ಕಾನೂನು ಅನ್ನು ಜಾರಿಗೆ ತಂದರೂ, ಆದೇಶಗಳನ್ನು ಹೊರಡಿಸಿದರೂ ಸಹ, ಈ ಡೊನೇಷನ್ ಹಾವಳಿಯನ್ನು ಇನ್ನು ತಪ್ಪಿಸುವುದಕ್ಕೆ ಆಗಿಲ್ಲ. ಮಾನ್ಯ ವಿಶ್ವನಾಥ್‌ರವರು ಗ್ರಾಮೀಣ ಪ್ರದೇಶದಿಂದ ಬಂದಿರುವಂಥವರು ಅವರಿಗೆ ಈ ಶಿಕ್ಷಣ ಇಲಾಖೆಯ ಬಗ್ಗೆ ಬಹಳ ಕಳಕಳಿ ಇದೆಯೆಂದು ತಿಳಿದುಕೊಂಡಿದ್ದೇನೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮವಾದಂತಹ ಶಿಕ್ಷಣವನ್ನು ಕೊಡಬೇಕು, ಅವರ ಭವಿಷ್ಯವನ್ನು ಉಜ್ವಲ ಮಾಡಬೇಕೆಂಬ ಬಗ್ಗೆ ಅವರು ಮಾಡಿದಂತಹ ಭಾಷಣಗಳಲ್ಲಿ ಕೇಳಿದ್ದೇನೆ. ಕೆಲವು ವಿಚಾರಗಳಲ್ಲಿ ಒಳ್ಳೆಯ ಸಲಹೆಯನ್ನು ತೆಗೆದುಕೊಂಡಿದ್ದಾರೆ. ಈ ಡೊನೇಷನ್ ಹಾವಳಿಯನ್ನು ಅವರ ಕೈಯಲ್ಲಿ ತಡೆಯುವುದಕ್ಕೆ ಆಗಿಲ್ಲ ಎನ್ನುವುದು ನೋವಿನ ಸಂಗತಿಯಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಬಹಳ ಮಹತ್ತರವಾದಂತಹ ಇಲಾಖೆಯಾಗಿದೆ. ಈ ಇಲಾಖೆಯು ಕೆಳಹಂತದಲ್ಲಿರುವಂತಹ ಮಕ್ಕಳನ್ನು ಅದರಲ್ಲೂ ಹಳ್ಳಿಗಾಡಿನ ಮಕ್ಕಳನ್ನು ಶಾಲೆಗಳಿಗೆ ಕರೆತರುವಂತಹ ವಿಚಾರ ಏನಿದೆ. ಇದರಲ್ಲಿ ಕೇಂದ್ರ ಸರ್ಕಾರದವರು ಈ ಶಿಕ್ಷಣ ನೀತಿಯ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರಾಜ್ಯಸರ್ಕಾರಗಳಿಗೆ ಕೊಟ್ಟಿದ್ದಾರೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದಲೂ ಕೋಟ್ಯಾಂತರ ರೂಪಾಯಿಗಳು ಬರುತ್ತಿದೆ. ಈ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಅನುಷ್ಠಾನದಲ್ಲಿದೆ, ಎಂಬುದನ್ನು ತುಲನೆ ಮಾಡಿ ನೋಡಿದಾಗ ಕೆಲವು ಕಾರ್ಯಕ್ರಮಗಳು ಸ್ವಲ್ಪಮಟ್ಟಿಗೆ ಚೆನ್ನಾಗಿದೆ, ಇನ್ನು ಕೆಲವು ಕಾರ್ಯಕ್ರಮಗಳು ಅಷ್ಟು ಸಮರ್ಪಕವಾಗಿ ಆಗಿಲ್ಲವೆನ್ನುವಂಥಾದ್ದು ನನ್ನ ಅಭಿಪ್ರಾಯವಾಗಿದೆ. ಮಕ್ಕಳು ಒಂದು ವರ್ಷದಿಂದ ಹದಿನಾಲ್ಕು ವರ್ಷದೊಳಗೆ ಅಂದರೆ 9ನೇ ತರಗತಿಯವರೆಗೆ ಎಷ್ಟು ಮಕ್ಕಳು ಶಾಲೆಗೆ ಸೇರುತ್ತಾರೆ, ಶೇಕಡವಾರು 10ನೇ ತರಗತಿಯವರೆಗೆ ಎಷ್ಟು ಜನ ಉಳಿಯುತ್ತಾರೆ ಎಂಬುದು ಮುಖ್ಯ. ಎಷ್ಟು ಮಕ್ಕಳು ಡ್ರಾಪ್ ಔಟ್ ಆಗುತ್ತಾರೆ, ಅದನ್ನು ತಡೆಗಟ್ಟಲು ಚಿನ್ನರ ಅಂಗಳ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದು ಸ್ವಲ್ಪಮಟ್ಟಿಗೆ ಯಶಸ್ವಿಯಾಯಿತು, ಮಕ್ಕಳು ಉಪಹಾರ ಸಿಗುತ್ತದೆ ಎಂದು ಹಾಗೂ ಪ್ರಾಥಮಿಕ ಶಿಕ್ಷಣ ಸಿಗುತ್ತದೆನ್ನುವ ಎರಡು ಉದ್ದೇಶದಿಂದಲೂ ಬಂದರು. ಆ ಒಂದು

ಕಾರ್ಯಕ್ರಮ ಮುಕ್ತಾಯವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಮುಂದೆ ಡ್ರಾಪ್ ಔಟ್ ಆಗದಂತೆ ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂದು ನೋಡಿದರೆ ಏನೂ ಕಾರ್ಯಕ್ರಮ ಹಾಕಿಕೊಂಡಂತೆ ಕಾಣುತ್ತಿಲ್ಲ. ಇನ್ನು ಕೇಂದ್ರ ಸರ್ಕಾರದ ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಷನ್ ಪ್ರಾಜೆಕ್ಟ್ ಯೋಜನೆ ಕೂಡ ಶಾಲೆಗಳಲ್ಲಿ ಮಕ್ಕಳು ಬಿಟ್ಟುಹೋಗದಂತೆ ಇರುವ ಕ್ರಮವಾಗಿದೆ. ಇದಾಗಬೇಕಾದರೆ ಮಕ್ಕಳು ಶಾಲೆಗಳಲ್ಲಿ ಉಪಹಾರ ಅಥವಾ ಬಟ್ಟೆಯನ್ನು ಕೊಟ್ಟರೆ ಮಾತ್ರ ಶಾಲೆಗಳಿಗೆ ಬರುತ್ತಾರೆನ್ನುವುದಕ್ಕೆ ಬದಲಾಗಿ ಈ ಶಾಲೆಗಳಲ್ಲಿ ವಾತಾವರಣ ಹೆಚ್ಚು ಆಕರ್ಷಣೀಯವಾಗಿರುವಂತೆ ರೂಪಿಸಬೇಕು. ಅದು ಹೇಗೆಂದರೆ ಪ್ರತಿಯೊಂದು ಶಾಲೆಗಳಲ್ಲೂ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಅನುಪಾತ ಸರಿಯಾಗಿರಬೇಕು, ಎಲ್ಲಿ ಶಾಲೆಗಳಿಗೆ ಕಟ್ಟಡಗಳಿಲ್ಲ ಅದನ್ನು ಒದಗಿಸಿಕೊಡುವುದು, ಬಿದ್ದು ಹೋಗಿರುವ ಶಾಲೆಗಳ ಕಟ್ಟಡವನ್ನು ರಿಪೇರಿ ಮಾಡುವುದು ಹಾಗೂ ಪ್ರಾಥಮಿಕ ಹಂತದಲ್ಲಿ ಹೆಣ್ಣುಮಕ್ಕಳಿಗೆ ಆ ಶಾಲೆಗಳಲ್ಲಿ ಶೌಚಾಲಯಗಳನ್ನು ಒದಗಿಸಿಕೊಡುವುದು ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸುವುದು ಇಷ್ಟು ಕೆಲಸಗಳಾದರೆ ಮಕ್ಕಳಿಗೆ ಶಾಲೆಗಳು ಆಕರ್ಷಣೀಯವಾಗುವಂತೆ ಎಷ್ಟೊ ಉಪಯುಕ್ತವಾಗುತ್ತದೆ. ಭಾರತ ಸರ್ಕಾರದ ಕಂಟ್ರೋಲರ್ ಅಂಡ್ ಆಡಿಟ್

(ಉಪಾಧ್ಯಕ್ಷರು (ಶ್ರೀ ಮನೋಹರ ತಹಸೀಲ್ದಾರ್‌ರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಜನರಲ್‌ರವರ ಒಂದು ವರದಿ ಬಂದಿದೆ, ಇದರಲ್ಲಿ ನಿಮ್ಮ ಇಲಾಖೆಗೆ ಸಂಬಂಧಿಸಿದಂತೆ ಕೆಲವೊಂದು ಆಬ್‌ಸರ್ವೇಷನ್‌ಗಳನ್ನು ನೋಡಿದೆ. ತರಗತಿಗಳ ಕೊಠಡಿಗಳನ್ನು ಕಟ್ಟಿಸಿ ಕೊಡುವುದರಲ್ಲಿರಬಹುದು, ಉಚಿತ ಪಠ್ಯಪುಸ್ತಕಗಳನ್ನು ಕೊಡುವುದರಲ್ಲಿರಬಹುದು, ಸಕಾಲದಲ್ಲಿ ಕ್ರಮ ತೆಗೆದುಕೊಂಡರೆ ಆ ಮಕ್ಕಳು ಶಾಲೆಗೆ ಬರುತ್ತವೆ. ಆ ಕಾರ್ಯಕ್ರಮ ತೆಗೆದುಕೊಂಡರೆ 1-5ನೇ ತರಗತಿಯವರೆಗೆ ಓದುವ ಎಸ್‌ಸಿ : ಎಸ್‌ಟಿ ಮಕ್ಕಳುಗಳು ಹಾಗೂ 5-7ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಓದುವ ಎಸ್‌ಸಿ : ಎಸ್‌ಟಿ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಕೊಡುವ ಕಾರ್ಯಕ್ರಮ ಆದಾಗಿದೆ. 1995-2000ರವರೆಗೆ ಈ ಪುಸ್ತಕಗಳನ್ನು ಸಮರ್ಪಕವಾಗಿ ವಿತರಣೆ ಮಾಡಿಲ್ಲವೆನ್ನುವ ವರದಿ ಇದೆ. ಮತ್ತೊಂದು ತರಗತಿಗಳ ಕೊಠಡಿಗಳನ್ನು ಕಟ್ಟುವಲ್ಲಿ ಆಗಿರುವ ವಿಳಂಬವಾಗಿ ಫೆಬ್ರವರಿ 2000 ರವರೆಗೆ ಜಿಲ್ಲಾಪಂಚಾಯಿತಿಯಿಂದ 577 ಕಿರಿಯ ಪ್ರಾಥಮಿಕ ಶಾಲೆಗಳಿಗೆ ಇನ್ನು ಕಟ್ಟಡಗಳೆ ಇಲ್ಲ. ಅದರಲ್ಲಿ ಡಿಪಿಎಪಿ ಕಾರ್ಯಕ್ರಮವಿರಬಹುದು, ಆಪರೇಷನ್ ಬ್ಲಾಕ್ ಬೋರ್ಡ್ ಕಾರ್ಯಕ್ರಮವಿರಬಹುದು ಹೀಗೆ ಜಿಲ್ಲಾಪಂಚಾಯಿತಿ ಹಾಗೂ ಕೇಂದ್ರದ ಹಲವಾರು ಯೋಜನೆಗಳಿವೆ. ಅದರಲ್ಲಿ ಏನು ಹೇಳಿದ್ದಾರೆಂದರೆ,

"The State Government has provided funds including Central Assistance to ZPs for construction of class-rooms. But ZPs and the Commissioner for Public Instruction were not monitoring the construction of class-rooms".

ಅಂದರೆ 1999-2000ನೇ ಇಸವಿಯಲ್ಲೂ 1650 ಕ್ಲಾಸ್ ರೂಂಗಳನ್ನು ಸಂಪೂರ್ಣವಾಗಿ ಕಟ್ಟಿಲ್ಲವೆಂದು ಹಾಗೂ ಕ್ಲಾಸ್ ರೂಂಗಳ ರಿಪೇರಿ ಕೆಲಸ ಕೂಡ ಸರಿಯಾಗಿ ಆಗಿಲ್ಲವೆಂದು ವರದಿಯಲ್ಲಿ ಹೇಳಲಾಗಿದೆ ಇನ್ನು ಶಾಲಾ ಸಮವಸ್ತ್ರಗಳ ಸರಬರಾಜಿನಲ್ಲಿ ಕೊರತೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಅದು ವಿದ್ಯಾವಿಕಾಸ ಯೋಜನೆ ಇರಬಹುದು, ಇದರಲ್ಲೂ ಕೂಡ ಶೇಕಡ 26-30ವರೆಗೆ ಮಾತ್ರ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿದೆ ಅದೂ ಕೂಡ ಸಮರ್ಪಕವಾಗಿ ಆಗಿಲ್ಲವೆಂದು ವರದಿಯಲ್ಲಿ ಹೇಳಲಾಗಿದೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ವಿಚಾರಗಳಲ್ಲಿ ಸುಮಾರು ಒಂದು ಮುಕ್ಕಾಲು ವರ್ಷಗಳಿಂದ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರೆ, ಹೆಚ್ಚು ಹಣವನ್ನು ಕೇಂದ್ರದಿಂದ ತಂದು, ಈಗಿರುವ ಶಾಲೆಗಳ ಪರಿಸ್ಥಿತಿಯನ್ನು ಉತ್ತಮಪಡಿಸಿದಿದ್ದರೆ, ಡ್ರಾಪ್‌ಔಟ್ ರೇಟ್ ಅನ್ನು ಕಡಿಮೆ ಮಾಡುವ ಅವಕಾಶವಿತ್ತು. ಆದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲವೆಂಬುದು ನನ್ನ ಅನಿಸಿಕೆ. ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಎಂದು ಇತ್ತು ಅದನ್ನು ಈಗ ಸ್ಕೂಲ್ ಡೆವಲಪ್‌ಮೆಂಟ್ ಅಂಡ್ ಮಾನಿಟರಿಂಗ್ ಕಮಿಟಿ ಎಂದು ಮಾಡಿದ್ದಿರಿ, ಮೊದಲಿದ್ದುದ್ದಕ್ಕೂ ಈಗ ಮಾಡಿರುವುದಕ್ಕೂ ಏನು ವ್ಯತ್ಯಾಸವೆಂದರೆ, ಎಸ್‌ಬಿಸಿನಲ್ಲಿ ಪೋಷಕರು ಇರುತ್ತಿರಲ್ಲಾ, ಇದರಲ್ಲಿ ಪೋಷಕರು ಸೇರಿದಂತೆ 9 ಜನರ ಒಂದು ಕಮಿಟಿ ಮಾಡಿದ್ದೀರಿ, ಅದರಲ್ಲಿ ಚುನಾವಣೆಯನ್ನೂ ಕೂಡ ಇಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಬಂದಿದೆಯೊ ಅಥವಾ ತಾವೇ ಮಾಡಿದ್ದೀರೋ ಗೊತ್ತಿಲ್ಲ. ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿಗಳಲ್ಲಿ ಆಗುವ ಚುನಾವಣೆಗಳ ರೀತಿಯಲ್ಲಿ ಶಾಲೆಗಳಲ್ಲೂ ಆಗುತ್ತವೆ. ಒಂದು ಕಡೆ ಉನ್ನತ ಶಿಕ್ಷಣ ಸಚಿವರು ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಚುನಾವಣೆಗಳನ್ನೆಲ್ಲಾ ರದ್ದು ಮಾಡುತ್ತಿದ್ದಾರೆ, ಇಲ್ಲಿ ಸಣ್ಣ ಮಕ್ಕಳ ಶಾಲೆಗಳಲ್ಲಿ ಚುನಾವಣೆಗಳನ್ನು ಪರಿಚಯಿಸಲಾಗುತ್ತಿದೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :— ಏಕೆ ನಾವು ಎಸ್‌ಡಿಎಂಸಿ ಮಾಡಿದ್ದೇವೆಂದರೆ, ಇಲ್ಲಿ ತನಕ ಅಲ್ಲಿ ಕೆಲವು ಎಂಎಲ್‌ಎ ಕೂಡ ಅಧ್ಯಕ್ಷರಾಗಿದ್ದರು ಜಿಲ್ಲಾ ಪಂಚಾಯಿತಿಯವರು ಅಧ್ಯಕ್ಷರಿದ್ದರು ಹಾಗೂ ಸ್ವಲ್ಪ ರಾಜಕಾರಣಕ್ಕೂ ಕೂಡ ಅಲ್ಲಿ ಅವಕಾಶವಿತ್ತು, ಆದರೆ ಕೆಲವು ಸಂದರ್ಭಗಳಲ್ಲಿ ಆಸಕ್ತಿ ಇರಲಿಲ್ಲ. ಆದುದರಿಂದ ಆ ಪೋಷಕರೇ ಆ 9 ಜನ ಎಕ್ಸಿಕ್ಯೂಟಿವ್ ಕಮಿಟಿಯಲ್ಲಿದ್ದರೆ ಬಹಳ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ, ಜೊತೆಗೆ

ಅಲ್ಲಿಯೇ 9 ಒಂಭತ್ತು ಜನರು ಕುಳಿತು ಚರ್ಚೆ ಮಾಡಿ ಆಯ್ಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆಯೇ ಹೊರತು, ರಾಜಕಾರಣವಾಗುತ್ತದೆನ್ನುವ ದೃಷ್ಟಿಯಿಂದ ಅದನ್ನು ಮಾಡಿರುವುದಲ್ಲ.

ಶ್ರೀ ಹೆಚ್.ಸಿ. ಮಹದೇವಪ್ರಸಾದ್ :— ಅಧ್ಯಕ್ಷರೆ ಪ್ರತಿ ಹಳ್ಳಿಗಳಲ್ಲೂ ಕೂಡ ಎರಡು ಗುಂಪುಗಳಿರುತ್ತವೆ. ಈ ಸ್ಕೂಲ್ ಕಮಿಟಿಗೋಸ್ಕರ ಆ ಹಳ್ಳಿಯ ಲೀಡರ್ ಒಬ್ಬ ಇನ್ನೆಲ್ಲೋ ಸ್ಕೂಲ್‌ನಲ್ಲಿ ಓದುತ್ತಿರುವ ಹುಡುಗನನ್ನು ಕರೆದುಕೊಂಡು ಬಂದು ಈ ಸ್ಕೂಲ್‌ನಲ್ಲಿ ಸೇರಿಸಿ ಆ ಕಮಿಟಿಗೆ ಸೇರಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಹೀಗಾಗಿ, ಓಟಿಂಗ್ ಹೇಗೆ ಮಾಡಬೇಕು, ಅವರ ಆಯ್ಕೆ ಹೇಗೆ ಮಾಡಬೇಕು ಬಂದು ಮಕ್ಕಳಿಗೆ ಪಾಠ ಹೇಳಿಕೊಡುವುದು ಅಲ್ಲಿನ ಶಿಕ್ಷಕರಿಗೆ, ಬೀಜಗೆ ಈ ಕಮಿಟಿಯನ್ನು ರಚನೆ ಮಾಡುವುದೇ ಕೆಲವು ಹಳ್ಳಿಗಳಲ್ಲಿ ದೊಡ್ಡ ತಲೆನೋವಾಗಿದೆ.

ಶ್ರೀ ಹೆಚ್. ವಿಶ್ವನಾಥ್ :— ಯಾವುದೇ ಸರ್ಕಾರದ ಯೋಜನೆಯನ್ನು ಸಕಾರಾತ್ಮಕ ಧೋರಣೆಯಿಂದ ನೋಡಬೇಕು.

ಶ್ರೀ ಹೆಚ್.ಸಿ. ಮಹಾದೇವ ಪ್ರಸಾದ್ :— ನಿಮ್ಮ ಪ್ರಯೋಗವನ್ನು ಒಪ್ಪಿಕೊಳ್ಳುತ್ತೇವೆ ಆದರೆ, ಅದಕ್ಕೆ ನಿಯಮವನ್ನಾದರೂ ರಚನೆ ಮಾಡಿ ಇಲ್ಲದಿದ್ದರೆ ಒಮ್ಮತವಾಗಿ ಆಗುವ ಕಡೆ ತೊಂದರೆ ಇಲ್ಲ, ಈ ಕಮಿಟಿಯನ್ನೇ ಪ್ರಿಸ್ಟೀಜ್ ಆಗಿ ತೆಗೆದುಕೊಂಡಿರುವ ಕೆಲವು ಗ್ರಾಮಗಳಲ್ಲಿ, ಪೋಲಿಸ್ ಹಾಗೂ ಶಿಕ್ಷಣ ಇಲಾಖೆಯವರಿಗೆ ಇದು ದೊಡ್ಡ ಸಮಸ್ಯೆಯಾಗಿದೆ. ಅದರ ಬಗ್ಗೆ ಸರಿಯಾದ ಮಾರ್ಗಸೂಚನೆ ಕೊಡಬೇಕು.

5.20 ಪಿ.ಎಂ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಉಪಾಧ್ಯಕ್ಷರೆ, ಇಷ್ಟರವರೆಗೆ ನಾವು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ದುಡಿದಿದ್ದೇವೆ. ಬೆಂಚು ಕುರ್ಚಿ ಮುಂತಾದವನ್ನು ಮಾಡಿಸುವುದಕ್ಕೆ ನಾನೇ ಅಲ್ಲಿಗೆ ಹೋಗಿ ಮಾಡಿಸಿದ್ದೇನೆ. ಮತ್ತು ಶಾಲೆಗಳಲ್ಲಿ ಹೆಚ್ಚಿನ ಫಲಿತಾಂಶ ತರಲಿಕ್ಕೆ ಕೂಡ ನಾವು ಪ್ರಯತ್ನ ಮಾಡಿದ್ದೇವೆ. ಈಗಿನ ಆದೇಶದ ಪ್ರಕಾರ ಎಲ್ಲಾ ಕಡೆಗಳಲ್ಲಿ ಏನಾಗಿದೆ ಎಂದರೆ ದೊಡ್ಡ ಎಲೆಕ್ಷನ್ ತರಹ ಅಂದರೆ ಈ ಗ್ರಾಮ ಪಂಚಾಯತಿಯ ಚುನಾವಣೆಯಾಗಿ ಮಾಡಲಿಕ್ಕೆ ಹೊರಟಿದ್ದಾರೆ. ಯಾರ್‍ಯಾರೊ ಸಮಾಜ ಘಾತುಕ ಶಕ್ತಿಗಳು ಪೋಷಕರ ಹೆಸರಿನಲ್ಲಿ ಬಂದು ನಮ್ಮ ಶಾಲೆಯ ಆಡಳಿತದಲ್ಲಿ ಅವರು ಕೈಹಾಕಿ ಕೆಲಸ ಮಾಡುವಂತೆ ಆಗಿದೆ. ಅದರಿಂದಾಗಿ ಆಯಾಯ ಏರಿಯಾದಲ್ಲಿ ಇದ್ದ ಶಾಲೆಗಳ ಜವಾಬ್ದಾರಿಯನ್ನು ಹೊತ್ತುಕೊಂಡಂಥ ನಮ್ಮಂಥ ಶಾಸಕರುಗಳಿಗೆ ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಮರುಪರಿಶೀಲನೆ ಮಾಡುವುದು ಒಳ್ಳೆಯದೆಂದು ನಮ್ಮೆಲ್ಲರ ಅನಿಸಿಕೆಯಾಗಿದೆ.

ಶ್ರೀ ಬಿ. ಸೋಮಶೇಖರ್:— ಶ್ರೀ ಕೆ.ಬಿ. ಮಲ್ಲಿಕಾರ್ಜನ ಅವರು ಅವರ ಕ್ಷೇತ್ರದಲ್ಲಿ ನಡೆದಂಥ ಒಂದು ಪ್ರಕರಣವನ್ನು ಹೇಳಿದರು. ಅದೇನೆಂದರೆ ಸ್ವಂತ ಮಕ್ಕಳು ಇಲ್ಲದಂಥ ಪೋಷಕರೊಬ್ಬರು ಶಾಸಕರ ಊರಿನಲ್ಲಿಯ ಈ ಚುನಾವಣೆಗೆ ನಿಲ್ಲಬೇಕೆನ್ನುವ ದೃಷ್ಟಿಯಿಂದ ಬೇರೆ ಯಾವುದೋ ಒಬ್ಬ ಹುಡುಗನ ಪೋಷಕರು ಎಂದು ಹೇಳಿಕೊಂಡು ಆ ಹುಡುಗನನ್ನು ಶಾಲೆಗೆ ಸೇರಿಸಿ ಈ ಚುನಾವಣೆಗೆ ನಿಂತಿದ್ದಾರೆ. ಈ ಜಿಲ್ಲಾಪಂಚಾಯತ್, ಮುನ್ಸಿಪಾಲಿಟಿ, ಗ್ರಾಮಪಂಚಾಯತ್ ಚುನಾವಣೆಗಳು ಯಾವ ಮಟ್ಟದಲ್ಲಿ ಆಗುತ್ತಿವೆ, ಚುನಾವಣೆಗಳು ಯಾವ ದಿಕ್ಕಿನಲ್ಲಿ ಹೋಗುತ್ತಿವೆ ಎನ್ನುವುದು ತಮಗೆಲ್ಲ ಗೊತ್ತಿದೆ. ಅದರ ಜೊತೆಗೆ ಪ್ರಾಥಮಿಕ ಹಂತದಲ್ಲಿ ಓದುವಂಥ ಮಕ್ಕಳುಗಳ ಶಾಲೆಗಳಲ್ಲಿ ಇಂಥ ಚುನಾವಣಾ ಸ್ಪರ್ಧೆಗಳನ್ನು ಇಟ್ಟರೆ ಅದು ಎಷ್ಟರಮಟ್ಟಿಗೆ ಆಗಬಹುದು? ಏಕೆಂದರೆ ಉದ್ದೇಶ ಒಳ್ಳೆಯದಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಏಕೆ ಬರುತ್ತಾರೆಂದರೆ ಈ ಶಾಲೆಯಲ್ಲಿ ಏನೋ ಆಸ್ತಿ ಇದೆ, ಅದನ್ನು ಮಾರಿಕೊಳ್ಳಬಹುದೆನ್ನುವ ಉದ್ದೇಶ ಇಟ್ಟುಕೊಂಡು ಬರುತ್ತಾರೆ. ಈಗ ಈ ಮುನ್ಸಿಪಲ್ ಎಲೆಕ್ಷನ್‌ನಲ್ಲಿ ಒಬ್ಬ ಅಭ್ಯರ್ಥಿ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ, ಸಿಂಡಿಕೇಟ್ ಎಲೆಕ್ಷನ್ಸ್‌ನಲ್ಲಿ ಸುಮಾರು 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಾರೆಂದರೆ ಇವರು ಯಾವ ಉದ್ದೇಶದಿಂದ ಖರ್ಚು ಮಾಡುತ್ತಾರೆ? ಅದರಲ್ಲಿ ಎರಡರಷ್ಟು ದುಡಿಯಬಹುದೆನ್ನುವ ಉದ್ದೇಶದಿಂದ ಖರ್ಚು ಮಾಡುತ್ತಾರೆ. ಈ ಎಕ್ಸಿಕ್ಯೂಟೀವ್ ಆಫೀಸರ್ಸ್, ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ಸ್ ಇವರೆಲ್ಲಾ ಚುನಾಯಿತ ಪ್ರತಿನಿಧಿಗಳ ಕೈಕೆಳಗೆ ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನಾವು ನೋಡುತ್ತಿದ್ದೇವೆ. ಹೀಗಿರುವಾಗ ಒಬ್ಬ ಪ್ರೈಮರಿ ಸ್ಕೂಲ್ ಟೀಚರ್ ಎಷ್ಟರಮಟ್ಟಿಗೆ ಈ ಕಮಿಟಿಯ ಕೈಕೆಳಗೆ ಕೆಲಸ ಮಾಡುತ್ತಾನೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಆದಕ್ಕೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಈ ಪ್ರಾಥಮಿಕ ಶಿಕ್ಷಣದ ವ್ಯವಹಾರಗಳನ್ನು ಆದಷ್ಟುಮಟ್ಟಿಗೆ ರಾಜಕೀಯದಿಂದ ದೂರ ಇಡತಕ್ಕಂಥದ್ದು ಬಹಳ ಅವಶ್ಯಕತೆಯಿದೆ. ಏಕೆಂದರೆ ಶಾಲೆಗಳನ್ನು ಹೊಸದಾಗಿ ಮಂಜೂರಾತಿ ಮಾಡುವುದು, ಶಿಕ್ಷಕರನ್ನು ವರ್ಗಾವಣೆ ಮಾಡುವುದರಲ್ಲಿ ಎಲ್ಲಾ ಹಂತದಲ್ಲೂ ಕೂಡ ಇವತ್ತು ರಾಜಕೀಯ ಪ್ರವೇಶ ಮಾಡುವಂಥದ್ದನ್ನು ನಾವು ನೋಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:— ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸೋಮಶೇಖರ್ ಅವರು ಹೇಳಿದ ಹಾಗೆ ಈ ರಾಜಕೀಯ ಪ್ರತಿಯೊಂದರಲ್ಲೂ ಪ್ರವೇಶ ಆಗಿರುವುದು ನಿಜವೆಂದು ನನಗೂ ಅನ್ನಿಸುತ್ತಿದೆ. ಶೈಕ್ಷಣಿಕವಾಗಿ ಏಳು ಜಿಲ್ಲೆಗಳಲ್ಲಿ ಇಂಬ್ಯಾಲೆನ್ಸ್ ಆಗಿದೆ, ಆರ್ಥಿಕವಾಗಿ ಕೂಡ ಆ ಪ್ರದೇಶ ಹಿಂದುಳಿದಿದೆ ಎಂದು ಹೇಳುತ್ತಲೇ ಇದ್ದೇವೆ. ತಾಲ್ಲೂಕುವಾರು ಹೈಸ್ಕೂಲ್‌ಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಗೆ ಮೂರು ಹೈಸ್ಕೂಲ್‌ಗಳು ಬೇಕೆಂದು ನಾವು ಸರ್ಕಾರಕ್ಕೆ ಪ್ರಪೊಸಲ್ ಕಳುಹಿಸಿದ್ದೆವು. ಆದರೆ ಸರ್ಕಾರದಿಂದ ಒಂದು ಹೈಸ್ಕೂಲ್‌ಗೆ ಮಾತ್ರ

ಮಂಜೂರು ಕೊಟ್ಟಿದ್ದಾರೆ. ಆದರೆ ಬೇರೆ ಕಡೆ ಆಡಳಿತ ಪಕ್ಷದ ಸದಸ್ಯರ ಕ್ಷೇತ್ರಗಳಿಗೆ 3-3 ಹೈಸ್ಕೂಲ್‌ಗಳನ್ನು ಮತ್ತು ಒಬೊಬ್ಬ ಮಂತ್ರಿಗಳ ಕ್ಷೇತ್ರಕ್ಕೆ ಆರಾರು ಹೈಸ್ಕೂಲ್‌ಗಳನ್ನು ಪ್ರಾರಂಭಿಸುವುದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ಈ ರೀತಿ ಇರುವಾಗ ರಾಜಕೀಯ ಇದರಲ್ಲಿ ಇಲ್ಲವೆಂದು ಮಂತ್ರಿಗಳಾದ ತಾವು ಹೇಗೆ ಹೇಳುತ್ತೀರಿ?

ಶ್ರೀ ಹೆಚ್. ವಿಶ್ವನಾಥ್:— ದಯಮಾಡಿ ಇದರಲ್ಲಿ ಯಾವ ಪಕ್ಷದ ರಾಜಕಾರಣವನ್ನೂ ಸಹ ಮಾಡಿಲ್ಲ. ಹೈಸ್ಕೂಲ್‌ಗಳ ಅಗತ್ಯತೆ ಎಲ್ಲಿಗೆ ಇದೆಯೋ ಅಲ್ಲಿಗೆ ಮಂಜೂರಾತಿ ಕೊಟ್ಟಿದ್ದೇವೆ ಹೊರತು ಇದರಲ್ಲಿ ಬೇರೆ ಏನೂ ಇಲ್ಲ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ಈ ಸಮಸ್ಯೆ ಸುಮಾರು 15 ವರ್ಷಗಳಿಂದ ನಡೆಯುತ್ತಿದೆ. ನಾನು 1987-88ನೇ ಸಾಲಿನಲ್ಲಿ ಶಿಕ್ಷಣ ಖಾತೆಯನ್ನು ನಡೆಸುತ್ತಿರುವಾಗ ಹೈಸ್ಕೂಲ್‌ಗಳನ್ನು, ಪ್ರಾಥಮಿಕ ಶಾಲೆಗಳನ್ನು ಮಂಜೂರಾತಿ ಮಾಡಬೇಕಾದರೆ ರಾಜಕೀಯ, ರಾಜಕೀಯ ಪಕ್ಷಗಳ ಆಧಾರದ ಮೇಲೆ ಅಲ್ಲ, ವೈಜ್ಞಾನಿಕವಾಗಿ ಅವಶ್ಯಕತೆಯ ಆಧಾರದ ಮೇಲೆ ಕೊಡಬೇಕೆನ್ನುವಂಥ ಒಂದು ಪ್ರಯತ್ನವನ್ನು ಮಾಡಿದೆ. ಅಂದರೆ ಒಂದು 'ಸ್ಕೂಲ್ ಮ್ಯಾಪಿಂಗ್' ಎಂದು ಮಾಡಿದೆವು. ಸ್ಕೂಲ್ ಮ್ಯಾಪಿಂಗ್ ಎಂದರೆ ನೀಡ್ ಬೇಸ್ಡ್, ಈಗ ನಡೆಯುತ್ತಿರುವ ಸ್ಕೂಲ್‌ಗಳು ಎಷ್ಟಿವೆ, ಒಂದು ಶಾಲೆಗೂ ಮತ್ತೊಂದು ಶಾಲೆಗೂ ಎಷ್ಟು ಅಂತರ ಇದೆ, ಯಾವ ಊರು ಸೆಂಟರ್ ಪ್ಲೇಸ್ ಆಗುತ್ತದೆ, ಎಂದು ಶೈಕ್ಷಣಿಕ, ಅರ್ಹತೆ, ಅವಶ್ಯಕತೆ ಆಧಾರದ ಮೇಲೆ ಸರ್ವೆ ಮಾಡಿ ಇಂಥ ಕಡೆ ಪ್ರೈಮರಿ ಸ್ಕೂಲ್ ಇರಬೇಕು. ಇಂಥ ಕಡೆ ಹೈಸ್ಕೂಲ್ ಇರಬೇಕು, ಇಂಥ ಕಡೆ ಜೂನಿಯರ್ ಕಾಲೇಜು ಇರಬೇಕೆಂದು ಮ್ಯಾಪಿಂಗ್ ಮಾಡಿದ್ದೆವು. ಈ ಪ್ರೈವೇಟ್ ಸ್ಕೂಲ್‌ನವರು ಏನು ಮಾಡುತ್ತಾರೆಂದರೆ, ಒಂದು ಮ್ಯಾನೇಜ್‌ಮೆಂಟ್ ಒಂದು ಊರಿನಲ್ಲಿ ಹೈಸ್ಕೂಲ್ ಪ್ರಾರಂಭಿಸಿದರೆ, ಅವರೇ ಇನ್ನೊಂದು ಮ್ಯಾನೇಜ್‌ಮೆಂಟ್‌ನ್ನು ಸೃಷ್ಟಿಮಾಡಿಕೊಂಡು ಅಲ್ಲಿಯೇ ಇನ್ನೊಂದು ಹೈಸ್ಕೂಲ್‌ನ್ನು ಪ್ರಾರಂಭಿಸುತ್ತೇವೆಂದು ಯಾರದೋ ಒತ್ತಡ ತಂದು ಮಂತ್ರಿಗಳನ್ನು ಒತ್ತಾಯ ಏನೋ ಮಾಡಿ ಇನ್ನೊಂದು ಹೈಸ್ಕೂಲ್‌ಗೆ ಮಂಜೂರಾತಿ ತೆಗೆದುಕೊಂಡು ಹೋಗುತ್ತಾರೆ. ಮತ್ತು ಎರಡು ಹೈಸ್ಕೂಲ್‌ಗಳು ಒಂದೇ ಊರಿನಲ್ಲಿ ಇರುತ್ತವೆ. ಮತ್ತು ಅಲ್ಲಿ ಅನಾರೋಗ್ಯಕರ ಸ್ಪರ್ಧೆ ಸೃಷ್ಟಿಯಾಗುತ್ತದೆ. ಆ ದೃಷ್ಟಿಯಿಂದ ನಾವು ಆವಾಗ ಸ್ಕೂಲ್ ಮ್ಯಾಪಿಂಗ್ ಸಿಸ್ಟಮ್‌ನ್ನು ಪ್ರಾರಂಭ ಮಾಡಿದೆವು. ಬಹುಶಃ ಅದು 1988ರಲ್ಲಿಯೇ ನಿಂತುಹೋಯಿತೆಂದು ತೋರುತ್ತದೆ. ನನ್ನ ಸಲಹೆ ಏನೆಂದರೆ ಒಂದು ಉದಾಹರಣೆ ಮೂಲಕ ಹೇಳುವುದಾದರೆ, ಪೆಟ್ರೋಲ್ ಬಂಕ್ ಅಥವಾ ಗ್ಯಾಸ್ ಏಜೆನ್ಸಿಯನ್ನು ತೆಗೆದುಕೊಳ್ಳಬೇಕಾದರೆ ಕಂಪನಿಯವರೇ ಬಂದು ಎಲ್ಲೆಲ್ಲಿ ಅವಶ್ಯಕತೆಯಿದೆ ಎನ್ನುವುದನ್ನು ಗುರುತಿಸಿ ಇಂಥ ಕಡೆ ತೆಗೆಯಬೇಕೆಂದು ಅವರು ಜಾಹೀರಾತು ಕೊಡುತ್ತಾರೆ. ಆವಾಗ ಅಲ್ಲಿಗೆ ಅಪ್ಲಿಕೇಷನ್ಸ್ ಹಾಕಿಕೊಳ್ಳಬೇಕು. ಅದೇ ರೀತಿ ನೀಡ್ ಬೇಸ್ಡ್ ಆಧಾರದ

ಮೇಲೆ ಎಲ್ಲೆಲ್ಲಿ ಹೈಸ್ಕೂಲ್‌ಗಳು, ಪ್ರಾಥಮಿಕ ಶಾಲೆಗಳು ಬೇಕೆಂಬುದನ್ನು ಗುರುತಿಸಿ ಅದನ್ನು ಮ್ಯಾಪಿಂಗ್ ಮಾಡಿ ಲೆಜಿಸ್ಲೇಚರ್ ಮುಂದೆ ತನ್ನಿ. ಇಲ್ಲಿಗೆ ತಂದು ಅದಕ್ಕೆ ಆಕ್ಟನ್ನು ಮಾಡಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಪ್ರೂವ್ ಆದಮೇಲೆ, ಅದು ಮಂತ್ರಿಗಳಿಗೆ ಇಷ್ಟಬಂದ ಹಾಗೆ ಮಂಜೂರಾತಿ ಕೊಡುವ ಹಾಗೆ ಇರಬಾರದು. ಅಧಿಕಾರಿಗಳು ಆಯಾಯ ಮ್ಯಾಪಿಂಗ್ ಆಧಾರದ ಮೇಲೆ ಸ್ಯಾಂಕ್ಷನ್ ಮಾಡುತ್ತಾ ಹೋಗಬೇಕು. ಇದು ನಿಜವಾದಂಥ 'ಸ್ಕೂಲ್ ಮ್ಯಾಪಿಂಗ್'. ಇದು ಬಿಟ್ಟು ಪ್ರತಿಯೊಂದಕ್ಕೂ ಡಿಸ್ಕ್ರಿಷನ್ ಪವರ್ ಎಂದು ನನ್ನ ಕಾರ್ಯಕರ್ತರಿಗೆ ಸುನು ಸಹಾಯ ಮಾಡದಿದ್ದರೆ ಹೇಗೆ, ನಮ್ಮ ಪಕ್ಷದವರಿಗೆ ನಾನು ಸಹಾಯ ಮಾಡದಿದ್ದರೆ ಹೇಗೆ ಎಂದು ಅಧಿಕಾರಕ್ಕೆ ಬಂದಾಗ ನಾವು ತಿಳಿದುಕೊಳ್ಳುವುದು, ನೀವು ಅಧಿಕಾರಕ್ಕೆ ಬಂದಾಗ- ನನ್ನ ಊರಿಗೆ ಈ ಊರು ಸಪೋರ್ಟ್ ಮಾಡಿದೆ, ಈ ಊರಿಗೆ ನಾನು ಒಂದು ಹೈಸ್ಕೂಲ್‌ನ್ನು ಮಂಜೂರು ಮಾಡದಿದ್ದರೆ ಹೇಗೆ? ಇಂಥ ಒಂದು ಪರ್‌ಸೆಪ್ಷನ್ ಇಟ್ಟುಕೊಂಡು ನಾವು ಶಾಲೆಗಳನ್ನು ಮಂಜೂರು ಮಾಡಿದರೆ ಶಿಕ್ಷಣ ಹೇಗಾಗುತ್ತದೆ? ಆದ್ದರಿಂದ 'ಸ್ಕೂಲ್ ಮ್ಯಾಪಿಂಗ್'ನ್ನು ಮೊದಲು ಮಾಡಬೇಕು. ಜೊತೆಗೆ ಎಲ್ಲಿ ಹೆಚ್ಚಿಗೆ ಶಿಕ್ಷಕರು ಇದ್ದಾರೆ, ಯಾವ ಶಾಲೆಯಲ್ಲಿ ಶಿಕ್ಷಕರು ಇಲ್ಲ ಅಲ್ಲಿಗೆ ಹೆಚ್ಚಿಗೆ ಶಿಕ್ಷಕರು ಇರುವ ಕಡೆಯಿಂದ ಶಿಫ್ಟ್ ಮಾಡುವಂಥ ಕೆಲಸವನ್ನು ಮಾಡುತ್ತಿದ್ದು ಇದನ್ನು ಕಟ್ಟುನಿಟ್ಟಾಗಿ ಮಾಡಬೇಕೆಂದು ನನ್ನ ಆಸೆಯಾಗಿದೆ. ತಾವು ಈಗಾಗಲೇ ಪ್ರಾರಂಭ ಮಾಡಿದ್ದೀರಿ. ಬಹಳ ಸಂತೋಷ. ಈ ಸ್ಕೂಲ್ ಮ್ಯಾಪಿಂಗ್ ಮಾಡಿ ಆ ಬಗ್ಗೆ ಆಕ್ಟನ್ನು ತಂದು ಇಲ್ಲಿ ಮತ್ತು ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು ಅದರಂತೆ ಮಾಡುವುದಕ್ಕೆ ಮುಂದಿನ ಸಲವಾದರೂ ತೆಗೆದುಕೊಂಡು ಬನ್ನಿ. ಇನ್ನು ಅನುದಾನಿತ ಶಾಲೆಗಳ ಆಡಳಿತವರ್ಗದವರು ಸಿಬ್ಬಂದಿಯನ್ನು ನೇಮಕ ಮಾಡುವುದರಲ್ಲಿ ಬಹಳ ರಾಜಕೀಯ ಮಾಡುತ್ತಿರುವುದು, ಭ್ರಷ್ಟಾಚಾರ ನಡೆಸುತ್ತಿರುವುದು ತಮಗೆ ಗೊತ್ತಿದೆ. ಈಗ ಯಾವ ಮುಲಾಜಿಲ್ಲದೆ ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವ ಶಿಕ್ಷಕರನ್ನು ವರ್ಗಾವಣೆ ಮಾಡತಕ್ಕಂಥದ್ದನ್ನು ತಾವು ಮಾಡಿದ್ದೀರಿ. ನಮ್ಮ ಸರ್ಕಾರ ಇದ್ದಾಗ ಗ್ರಾಂಟ್-ಇನ್-ಏಡ್ ಕೋಡ್‌ನ್ನು ಅಮೆಂಡ್‌ಮೆಂಟ್ ಮಾಡಿ 1987-88ರಲ್ಲಿ ಒಂದು ಸೆಂಟ್ರಲೈಸ್ಡ್ ರಿಕ್ರೂಟ್‌ಮೆಂಟ್ ಕಮಿಟಿ ಮಾಡಿದ್ದೆವು. ದುರ್ದೈವವಶಾತ್ ಅದಕ್ಕೆ ಶೆಡ್ಯೂಲ್ಡ್ ಕಾಸ್ಟ್ ಮ್ಯಾನೇಜ್‌ಮೆಂಟ್‌ನವರೇ ಹೈಕೋರ್ಟ್‌ನಿಂದ ಸ್ಟೇ ತಂದರು. ಏಕೆಂದರೆ ಮ್ಯಾನೇಜ್‌ಮೆಂಟ್‌ನವರು ಟೀಚರ್ಸ್ ಹತ್ತಿರ ಲಂಚ ತೆಗೆದುಕೊಂಡು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಿದ್ದರು. ಈ ಕಮಿಟಿ ಮಾಡಿದ್ದರಿಂದ ಅವರಿಗೆ ಬರುತ್ತಿದ್ದ ಲಂಚದ ಹಣ ಕೈತಪ್ಪಿಹೋದ್ದರಿಂದ ಅವರೇ ಹೋಗಿ ಸ್ಟೇ ತಂದರು. ನಂತರ ಆ ಬಗ್ಗೆ ಏನಾಯಿತು ಎನ್ನುವುದು ಗೊತ್ತಿಲ್ಲ. ಇವತ್ತು ನನ್ನ ಸಲಹೆ ಏನೆಂದರೆ ಅನುದಾನಿತ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡಬೇಕಾದರೆ ಸರ್ಕಾರದಿಂದ ಒಂದು ಜಿಲ್ಲಾ ಮಟ್ಟದ ಅಥವಾ ರಾಜ್ಯ ಮಟ್ಟದ ಸೆಂಟ್ರಲೈಸ್ಡ್ ರಿಕ್ರೂಟ್‌ಮೆಂಟ್ ಕಮಿಟಿ

ಮಾಡಬೇಕು. ಮ್ಯಾನೇಜ್‌ಮೆಂಟ್‌ನಿಂದ ಕೂಡ ಒಬ್ಬರು ಸೆಲೆಕ್ಷನ್ ಮೆಂಬರ್ ಎಂದು ಇರಬಹುದು. ಆವಾಗ ಲಂಚ ನಡೆಯುವುದಿಲ್ಲ. ರೋಸ್ಟರ್‌ನ್ನು ಸರಿಯಾಗಿ ಫಾಲೋ ಮಾಡುತ್ತಾರೆ ಮತ್ತು ಸರ್ಕಾರದಿಂದ ಕೊಡತಕ್ಕಂಥ ಅನುದಾನ ಕೂಡ ಸರಿಯಾಗಿ ಸದ್ವಿನಿಯೋಗ ಆಗುತ್ತದೆ ಎನ್ನುವುದು ನನ್ನ ಆಸೆ. ಅದನ್ನು ತಾವು ಮಾಡಬೇಕು. ನಾನು ಮೊದಲೇ ಹೇಳಿದ ಹಾಗೆ 'ಸ್ಕೂಲ್ ಮ್ಯಾಪಿಂಗ್' ಪದ್ಧತಿಯನ್ನು ಮಾಡತಕ್ಕಂಥ ಪ್ರಯತ್ನವನ್ನು ಕಾಶ್ಮೀರದಲ್ಲಿ ಡಾ: ಫಾರೂಕ್ ಅಬ್ದುಲ್ಲಾ ಅವರು ಮಾಡಿದ್ದು ಅದು ಅತ್ಯಂತ ಯಶಸ್ವಿಯಾಗಿದೆ ಏನ್ನುವಂಥದ್ದು ನನ್ನ ಗಮನಕ್ಕೆ ಬಂದಿದೆ. ಇದು ಬೇರೆ ಯಾವುದೇ ರಾಜ್ಯದಲ್ಲಿ ಮಾಡಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳಾದ ತಾವು ಮಾಡಿ. ಇಲ್ಲದಿದ್ದರೆ ನೀವು ಒತ್ತಡವನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ರಾಜಕಾರಣಗಳನ್ನು ನಿಷ್ಟೂರ ಮಾಡಿಕೊಳ್ಳಬಾರದೆನ್ನುವ ಉದ್ದೇಶದಿಂದ ಡಿಸ್ಕ್ರಿಷನ್ ಪವರ್ ಇಟ್ಟುಕೊಳ್ಳದೆ ಒಂದು ತತ್ವದ, ಅವಶ್ಯಕತೆ ಆಧಾರದ ಮೇಲೆ ಸ್ಕೂಲ್‌ಗಳಿಗೆ ಮಂಜೂರಾತಿಯನ್ನು ಕೊಟ್ಟರೆ ಯಾರ ಅಭ್ಯಂತರವೂ ಇರುವುದಿಲ್ಲ. ಹಾಗೆಯೇ ಶಾಲೆಗಳಿಗೆ ಅಡ್ಮಿಷನ್ಸ್‌ನ್ನು ಸರ್ಕಾರವೇ ಮಾಡಬೇಕು. ಈ ಎಲ್.ಕೆ.ಜಿ., ಯು.ಕೆ.ಜಿ.ಗಳಿಗೆ ಮಕ್ಕಳನ್ನು ಸೇರಿಸುವುದಕ್ಕೆ ವಂತಿಗೆ ಹಾವಳಿ ಕೇವಲ ಮೈಸೂರು, ಬೆಂಗಳೂರು ಮತ್ತು ಮಂಗಳೂರಿನಲ್ಲಿ ಇತ್ತು. ಇವತ್ತು ಇದು ಹಳ್ಳಿಹಳ್ಳಿಯಲ್ಲೂ ಹಬ್ಬಿಹೋಗಿದೆ. ಬೆಂಗಳೂರು ಸಿಟಿಯಲ್ಲಿ ಒಂದು ಕಾನ್ವೆಂಟ್‌ಗೆ ಸೇರಿಸಬೇಕಾದರೆ ಕನಿಷ್ಟ ಪಕ್ಷ 10 ಸಾವಿರ ರೂ.ಗಳನ್ನು ವಂತಿಗೆ ರೂಪದಲ್ಲಿ ಕೊಡಬೇಕು. ಗರಿಷ್ಟ ಒಂದು ಲಕ್ಷದವರೆಗೂ ಇದೆ. ಈಗ ಹಳ್ಳಿಹಳ್ಳಿಯಲ್ಲೂ ಡೊನೇಷನ್ ಹಾವಳಿ ಪ್ರಾರಂಭವಾಗಿದೆ. ಇಂಗ್ಲೀಷ್ ಮೀಡಿಯಂಗೆ ಡೊನೇಷನ್ ಇಲ್ಲದೆ ಸ್ಕೂಲ್‌ಗೆ ಸೇರಿಸುವ ಹಾಗಿಲ್ಲ. ಸ್ವಲ್ಪ ಅನುಕೂಲಸ್ಥರು ಸಾಲ ಮಾಡಿಯಾದರೂ ಡೊನೇಷನ್ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ. ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿ ಪಿ.ಯು.ಸಿ.ಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ವಿಷಯ, ಬಿ.ಎಂ.ಎಸ್. ಮುಂತಾದ ಬೇರೆ ಬೇರೆ ಕಾಲೇಜುಗಳಲ್ಲಿ ಅರ್ಹತೆ ಆಧಾರದ ಮೇಲೆ, ಅಂಕಗಳು, ರೋಸ್ಟರ್ ಆಧಾರದ ಮೇಲೆ ಅಡ್ಮಿಷನ್ಸ್‌ನ್ನು ಮಾಡಿಕೊಂಡಿಲ್ಲ. ಶೇಕಡ 90ರಷ್ಟು ಅಂಕ ಬಂದಿರತಕ್ಕಂಥ ವಿದ್ಯಾರ್ಥಿಗೆ ಸೀಟು ಇಲ್ಲ ಎಂದು ಹೇಳುತ್ತಾರೆ. 65 ರಿಂದ 70 ಪರ್ಸೆಂಟ್ ಅಂಕ ಬಂದಂಥವರಿಗೆ ಒಂದು ಸೀಟು ಇದೆ, ನಾಳೆ ಬಂದರೆ ಸೀಟು ಮುಗಿದುಹೋಗುತ್ತದೆ, ಇಷ್ಟು ಹಣ ಕೊಟ್ಟರೆ ಇವತ್ತೇ ಅಡ್ಮಿಷನ್ ಆಗುತ್ತದೆ, ಒಂದು ವೇಳೆ ಈ ವಿದ್ಯಾರ್ಥಿ ನಾಳೆ ಬಂದರೆ ಆ ಸೀಟು ಹೊರಟು ಹೋಗಿ 55 ಪರ್ಸೆಂಟ್ ಅಂಕ ತೆಗೆದುಕೊಂಡವನಿಗೆ ಇಷ್ಟು ಹಣ ಕೊಡಬೇಕೆಂದು ಅವನಿಂದ ಪಡೆದು ಅತನಿಗೆ ಸೀಟು ಕೊಡುತ್ತಾರೆ. ಆದರೆ ಕಷ್ಟಪಟ್ಟು ಓದಿ 90 ಪರ್ಸೆಂಟ್ ಅಂಕ ಪಡೆದವನಿಗೆ ಮಾತ್ರ ಸೀಟು ಸಿಗುವುದಿಲ್ಲ. ಆ ಕಾಲೇಜುಗಳಿಗೆ ಸರ್ಕಾರದಿಂದ ಯಾವ ಕಡಿವಾಣ ಸಹ ಇಲ್ಲ. ಅವರಿಗೆ ಯಾವ ನಾರ್ಮ್ಸ್ ಸಹ ಇಲ್ಲ.

ನನ್ನ ಸಲಹೆ ಏನೆಂದರೆ ಪಿ.ಯು.ಸಿ.ಗೆ ಅಡ್ಮಿಷನ್ಸ್ ಮಾಡಬೇಕಾಗಿದ್ದರೆ ಗ್ರಾಮಾಂತರ ಅಭ್ಯರ್ಥಿಗಳಿಗೆ ಇಂತಿಷ್ಟು ಸೀಟುಗಳು, ಆರ್ಥಿಕವಾಗಿ ಹಿಂದುಳಿದವರು, ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ಹಿಂದುಳಿದ ವರ್ಗಗಳಿಗೆ ಈ ಪ್ರೊಫೆಷನಲ್ ಕೋರ್ಸ್‌ಗಳಾದ ಇಂಜಿನಿಯರಿಂಗ್ ಮತ್ತು ಮೆಡಿಕಲ್‌ಗೆ ಸೇರಬೇಕಾದರೆ ಸಿ.ಇ.ಟಿ. ಮಾದರಿಯಲ್ಲಿ ಹೇಗೆ ಪರೀಕ್ಷೆ ಮಾಡಿ ಸೆಲೆಕ್ಟ್ ಮಾಡಿ ಸರ್ಕಾರದಿಂದ ಕಳುಹಿಸುತ್ತೀರೋ ಅದೇ ರೀತಿ ಇಲ್ಲಿ ಕೂಡ ಮಾಡಬೇಕು. ಮ್ಯಾನೇಜ್‌ಮೆಂಟ್ ನವರಿಗೆ ಎಷ್ಟು ಸೀಟ್ ಕೊಡಬೇಕೋ ಅಷ್ಟನ್ನು ಕೊಡಿ. ಬಾಕಿ ಇರುವ ಸೀಟುಗಳನ್ನು ಸಿ.ಇ.ಟಿ. ಮಾದರಿಯಲ್ಲಿಯೇ ಮಾಡತಕ್ಕಂಥದ್ದನ್ನು ಸರ್ಕಾರ ಘೋಷಣೆ ಮಾಡಬೇಕು. ಇಲ್ಲದಿದ್ದರೆ ಆ ಡೊನೇಷನ್ ಹಾವಳಿಯನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಡಿಗ್ರಿಗೆ ಅಡ್ಮಿಷನ್ಸ್ ಮಾಡುವಾಗಲೂ ಸಹ ಸಿ.ಇ.ಟಿ. ಮಾದರಿಯಲ್ಲೇ ನಿಯಮವನ್ನು ಮಾಡಬೇಕು. ಇವತ್ತು ಬೆಂಗಳೂರು ಸಿಟಿಯೊಳಗೆ ಯಾವ ಬಡ ವಿದ್ಯಾರ್ಥಿಗಳೂ ಸಹ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಸಿಗದಿರತಕ್ಕಂಥ ಪರಿಸ್ಥಿತಿ ಆಗಿದೆ. ಯಾರಿಗೆ ಹಣ ಇದೆ ಅಂಥವರಿಗೆ ಕಡಿಮೆ ಅಂಕ ಬಂದಿದ್ದರೂ ಸಹ ಅವರಿಗೆ ಪ್ರವೇಶ ಸಿಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಪಿ.ಯು.ಸಿ.ಗೆ ಸಿ.ಇ.ಟಿ. ಮಾದರಿಯಲ್ಲಿ ಅಡ್ಮಿಷನ್ಸ್ ಸರ್ಕಾರ ಮಾಡದಿದ್ದರೆ ಮ್ಯಾನೇಜ್‌ಮೆಂಟ್‌ನವರು ಸುಲಿಗೆ ಮಾಡುವುದನ್ನು ತಡೆಯುವುದಕ್ಕಾಗುವುದಿಲ್ಲ. ಇನ್ನು ವಯಸ್ಕರ ಶಿಕ್ಷಣ ಬಗ್ಗೆ ಹೇಳುವುದಾದರೆ ಮೈಸೂರಿನಲ್ಲಿ ವಯಸ್ಕರ ಶಿಕ್ಷಣದ ಸಮಿತಿ ಒಂದು ಇದೆ. ಇದರ ಒಂದು ಕಾರ್ಯವ್ಯಾಪ್ತಿ ಏನು ಇತ್ತೆಂದರೆ ರಾತ್ರಿ ಶಾಲೆಗಳನ್ನು ನಡೆಸಿ ಯಾರು ವಯಸ್ಕರು ಇದ್ದಾರೆ ಅವರಿಗೆ 'ಅ ಆ' ದಿಂದ ಶಿಕ್ಷಣವನ್ನು ಪ್ರಾರಂಭ ಮಾಡಿ ಕೊಡತಕ್ಕಂಥದ್ದು. ಇವತ್ತು ಬೇರೆ ಸಾಕ್ಷರತಾ ಆಂದೋಲನ ಇರುವುದರಿಂದ ಈ ಅಡಲ್ಟ್ ಎಜುಕೇಷನ್ ಕೌನ್ಸಿಲ್‌ನ ಕಾರ್ಯವ್ಯಾಪ್ತಿ ಕಡಿಮೆಯಾಗಿದೆ. ಈ ವಯಸ್ಕರ ಶಿಕ್ಷಣಕ್ಕೆ ಯೋಜನೇತರದಲ್ಲಿ ಸರ್ಕಾರದಿಂದ ಬಹುಶಃ ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ವರ್ಷಕ್ಕೆ ಇಡುತ್ತಿದ್ದೀರಿ. ಈ ಹಣ ಕೇವಲ ಅಲ್ಲಿರುವಂಥ ಸುಮಾರು 140 ನೌಕರರು ಏನಿದ್ದಾರೆ, ಅವರು ಸಂಬಳ ತೆಗೆದುಕೊಂಡು ಕಾಲ ಕಳೆಯುತ್ತಿದ್ದಾರೆ. ಮತ್ತು ಅಲ್ಲಿ ವಿದ್ಯಾಪೀಠಗಳನ್ನು ನಡೆಸುತ್ತಿದ್ದರು. ಆ ವಿದ್ಯಾ ಪೀಠಗಳಲ್ಲಿ ನೂರಾರು ಎಕರೆ ಜಮೀನುಗಳಿವೆ. ಈ ವಿದ್ಯಾಪೀಠಗಳನ್ನು ಯಾವ ರೀತಿ ಅಭಿವೃದ್ಧಿ ಮಾಡಬಹುದು ಎನ್ನುವುದರ ಬಗ್ಗೆ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದು ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ನೋಡಬಹುದು. ವಿದ್ಯಾ ಪೀಠದಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಮೇಣದ ಬತ್ತಿ, ಹಪ್ಪಳ ಮಾಡತಕ್ಕಂಥದ್ದು, ನೇಯ್ಗೆ ಮಾಡುವಂಥದ್ದು, ಬುಟ್ಟಿ ಎಣೆಯತಕ್ಕಂಥದ್ದು ಮುಂತಾದ ತರಬೇತಿಯನ್ನು ಅಲ್ಲಿ ಕೊಡುವಂಥದ್ದು ಮಾಡಬೇಕು. ಈ ರೀತಿ ಮಾಡುವುದರಿಂದ ಅವರಿಗೆ ಲಾಭದಾಯಕವಾದ ಸ್ವಯಂ ಉದ್ಯೋಗವನ್ನು

ಸೃಷ್ಟಿಮಾಡಿಕೊಟ್ಟ ಹಾಗೆ ಆಗುತ್ತದೆ. ಈ ಬಗ್ಗೆ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಅಲ್ಲಿಯ ನೌಕರರಿಗೆ ಕೇವಲ ಸಂಬಳವನ್ನು ಕೊಟ್ಟುಕೊಂಡು ನಡೆಸಿಕೊಂಡು ಹೋಗತಕ್ಕಂಥಪರಿಸ್ಥಿತಿ ಬರುತ್ತದೆ. ಆ ಕಮಿಟಿಯನ್ನು ಅನುಷ್ಠಾನಕ್ಕೆ ತರಬೇಕೆಂದು ನನ್ನ ಅನಿಸಿಕೆಯಾಗಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿರುವ ಈ ವಯಸ್ಕರ ಶಿಕ್ಷಣ ಸಮಿತಿ ಸುಮಾರು 50-60 ವರ್ಷಗಳಷ್ಟು ಹಳೆಯದಾದ ಸಮಿತಿ. ಇದು ಒಂದು ಸ್ವಯಂಸೇವಾ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಸರ್ಕಾರ ಅದಕ್ಕೆ ಈಗ ಪೂರ್ಣವಾದ ಸ್ವಾಯತ್ತತೆಯನ್ನು ಕೊಟ್ಟು ಅದನ್ನು ಪುನರ್ ಜೀವನಗೊಳಿಸಿ ಅದು ಅತ್ಯಂತ ಚಟುವಟಿಕೆಯಲ್ಲಿರುವ ಹಾಗೆ ಮಾಡಿ ಇಲ್ಲದಿದ್ದರೆ ಅದನ್ನು ವೈಂಡ್ ಆಫ್ ಮಾಡಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಅಥವಾ ನವೋದಯ ಶಾಲೆಗಳೆಂದು ಏನು ಮಾಡುತ್ತಿದ್ದೀರಿ ಅಂಥ ಶಾಲೆಗಳನ್ನಾಗಿ ಮಾಡುವುದಕ್ಕೆ ಈ ವಿದ್ಯಾಪೀಠಗಳನ್ನು ಅವರಿಗೆ ಹ್ಯಾಂಡ್‌ಓವರ್ ಮಾಡಬೇಕು. ಇವೆರಡನ್ನೂ ಮಾಡದೆ ಸರ್ಕಾರ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೊಡುವುದರಲ್ಲಿ ಅಲ್ಲಿಯ ನೌಕರರು ಸಂಬಳ ತೆಗೆದುಕೊಂಡು ಆರಾಮವಾಗಿ ಕಾಲ ಕಳೆಯುತ್ತಿದ್ದಾರೆಯೇ ಹೊರತು ಅಲ್ಲಿ ಯಾವುದೇ ರೀತಿಯ ಚಟುವಟಿಕೆಗಳು ನಡೆಯುವುದಿಲ್ಲ, ನಡೆಯುತ್ತಿಲ್ಲ. ಅದಕ್ಕೆ ಡಿವಿಷನಲ್ ಕಮಿಷನರ್‌ರವರನ್ನು ಅಧ್ಯಕ್ಷರು ಎಂದು ಮಾಡಿದ್ದೀರಿ. ಅವರ ಕಾರ್ಯವ್ಯಾಪ್ತಿಯೊಳಗೆ ಇದರ ಬಗ್ಗೆ ಅವರಿಂದ ಗಮನಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿರುವ ಒಬ್ಬರನ್ನು ಜನರಲ್ ಸೆಕ್ರೆಟರಿ ಎಂದು ಮಾಡಿರುತ್ತೀರಿ. ಅದಕ್ಕೆ ಒಂದು ಎಲೆಕ್ಟೆಡ್ ಕಮಿಟಿ ಇದೆ. ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಮನಸೋ ಇಚ್ಛೆ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಹಾಗಾಗಿ ಅಲ್ಲಿ ಒಂದು ಮಿನಿ ರಾಜಕೀಯ ಕ್ಷೇತ್ರವಾಗಿದೆ. ಅಲ್ಲಿ ಕುರುಕ್ಷೇತ್ರದ ತರಹ ಒಬ್ಬರನ್ನೊಬ್ಬರು ವಾರ್ ನಡೆಸಿಕೊಂಡು ಪ್ರತಿ ದಿವಸ ಮೈಸೂರಿನ ಪತ್ರಿಕೆಗಳಲ್ಲಿ ವಯಸ್ಕರ ಶಿಕ್ಷಣ ಸಂಸ್ಥೆಯ ಹೇಳಿಕೆಗಳನ್ನು ಓದಿಕೊಂಡು ಕುಳಿತುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದರ ಬಗ್ಗೆ ನೋಡಿಕೊಳ್ಳಲು ಪ್ರತ್ಯೇಕವಾದ ಮಂತ್ರಿಗಳಿದ್ದೀರಿ. ಈ ಬಗ್ಗೆ ಗಮನಹರಿಸಿ ಏನಾದರೂ ಅಂತ್ಯ ಹಾಡಬೇಕು. ನಾನು ಸಲಹೆ ಕೊಡುವುದೇನೆಂದರೆ ವಿದ್ಯಾಪೀಠಗಳನ್ನು ನವೋದಯ ಶಾಲೆಗಳನ್ನಾಗಿ ಪರಿವರ್ತನೆ ಮಾಡಿ. ಅಥವಾ ಈ ಸರ್ಕಾರ ಖಾಸಗೀಕರಣಕ್ಕೆ ಬಹಳ ಒತ್ತು ಕೊಡುತ್ತಿರುವುದರಿಂದ ಇದನ್ನು ಯಾರಿಗಾದರೂ ಹ್ಯಾಂಡ್‌ಓವರ್ ಮಾಡಿದರೆ ಆ ಫಾರ್ಮ್‌ಗಳಾದರೂ ಡೆವಲಪ್ ಆಗುತ್ತವೆ. ಈಗ ಆ ಫಾರ್ಮ್‌ಗಳನ್ನು ನೋಡಿದರೆ ಯಾವ ಫಾರಂನಲ್ಲಿ ಕೂಡ ಪಾರ್ಥೇನೀಯಂ ಕಳೆ ಬಿಟ್ಟರೆ ಬೇರೆ ಏನೂ ಕಾಣುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ವಿಶೇಷವಾಗಿ ಗಮನಹರಿಸಬೇಕು.

ಶ್ರೀ ಬಿ. ಸೋಮಶೇಖರ್ :— ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ವಯಸ್ಕರ ಶಿಕ್ಷಣ, ಈ ಪ್ರಿಂಟಿಂಗ್ ಪ್ರೆಸ್ ಏನಿದೆ ಈ ಮೂರು ಖಾತೆಗಳು ಹಿಂದುಳಿದಿರತಕ್ಕಂಥ ವರ್ಗದಿಂದ ಬಂದಿರುವ ಮಂತ್ರಿಗಳ ಕೈಯಲ್ಲಿ ಇದೆ. ಶೋಷಣೆಯನ್ನು ತಪ್ಪಿಸುವುದು ಬಡವರ ಮಕ್ಕಳಿಗೆ ವಿದ್ಯಾರ್ಜನೆಯನ್ನು ಸರಿಯಾದ ರೀತಿಯಲ್ಲಿ ಕಲ್ಪಿಸುವುದು, ಈ ವರ್ಗದಿಂದ ಬಂದಿರತಕ್ಕಂಥ ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಗೆ ಮಾಡಿಸುವುದು, ಡೊನೇಷನ್ ಹಾವಳಿಯನ್ನು ತಪ್ಪಿಸುವುದು, ಇವೆಲ್ಲಾ ಬಹಳ ಪ್ರಮುಖವಾಗಿದ್ದು, ಇವುಗಳ ಬಗ್ಗೆ ನಿಮ್ಮ ದೃಷ್ಟಿಯಲ್ಲಿ ಜವಾಬ್ದಾರಿಯ ಜೊತೆಯಲ್ಲಿ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕು. ಶ್ರೀ ವಿಶ್ವನಾಥ ಮತ್ತು ಡಾ: ಪರಮೇಶ್ವರ್ ಅವರುಗಳು ಎರಡು ವಿಚಾರದಲ್ಲಿ ಒಳ್ಳೆಯ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅವರನ್ನು ಅಭಿನಂದಿಸುತ್ತೇನೆ. ನಮ್ಮ ಸರ್ಕಾರದಲ್ಲಿ ನಾವು ಏನು ಪ್ರಾರಂಭ ಮಾಡಿದ್ದೆವು ಅದು ಒಳ್ಳೆಯದೆಂದು ಕಂಡಾಗ ಅದನ್ನು ಇವತ್ತು ಜಾರಿಗೆ ತಂದಿದ್ದಾರೆ. 1988ರಲ್ಲಿ ನಮ್ಮ ಸರ್ಕಾರ ಇದ್ದಾಗ ನಾನು ಶಿಕ್ಷಣ ಮಂತ್ರಿಯಾಗಿದ್ದಾಗ ಈ ಬಡ ಮಕ್ಕಳು ಪರೀಕ್ಷೆಗಳಲ್ಲಿ ಫೇಲ್ ಆಗುತ್ತಿದ್ದರು. ಒಂದು ಸಬ್ಜೆಕ್ಟ್‌ನಲ್ಲಿ ಫೇಲ್ ಆದರೂ ಕೂಡ ಅವರು ಒಂದು ವರ್ಷ ಕಾಯಬೇಕಾಗುತ್ತಿತ್ತು. ಪರೀಕ್ಷೆಯನ್ನು ಪ್ರಿಪೋನ್ ಮಾಡತಕ್ಕಂಥ ಯೋಜನೆ ತಂದು ಫೇಲಾದ ಮಕ್ಕಳಿಗೆ ಪರೀಕ್ಷೆಯನ್ನು ಜೂನ್ ತಿಂಗಳಿನಲ್ಲಿ ಮಾಡಿದರೆ ಅವರು ಅದೇ ವರ್ಷ ಕಾಲೇಜಿಗೆ ಸೇರಿಕೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ಮಾಡಿದ್ದೆವು. ಇದರಿಂದ 12 ವರ್ಷಗಳ ಹಿಂದೆ ಸುಮಾರು 25 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ನಾನು ರಾಜೀನಾಮೆ ಕೊಟ್ಟ ತಕ್ಷಣ ಆ ಯೋಜನೆ ಹಾಗೆಯೇ ಮುಚ್ಚಿಹೋಯಿತು. ಆ ಯೋಜನೆಯನ್ನು ಪುನಃ ಪ್ರಾರಂಭಿಸಿ, ಒಳ್ಳೆಯ ಹೆಸರು ಬರುತ್ತದೆ, ಇದರಿಂದ ಬಡವರಿಗೆ ಅನುಕೂಲವಾಗುತ್ತದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ವಿಶ್ವನಾಥ್ ಅವರಿಗೆ ಸಲಹೆಸೂಚನೆಯನ್ನು ಕೊಟ್ಟಿದ್ದೆ. ಅದನ್ನು ಅವರು ಬಹಳ ಸಂತೋಷದಿಂದ ಸ್ವೀಕಾರ ಮಾಡಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಯಶಸ್ವಿಯಾಗಿದೆಯೆಂದು ಅಧಿಕಾರಿಗಳು ಹೇಳಿದ ಮೇಲೆ ಪುನಃ ಆ ಯೋಜನೆಯನ್ನು ಜಾರಿಗೆ ತಂದು ಯಶಸ್ವಿಯಾಗಿ ಮಾಡಿದರು. ಈ ಸಲ ಫೇಲ್ ಆದ ಸುಮಾರು 75 ಸಾವಿರ ಹಿಂದುಳಿದ ವರ್ಗಗಳು ವಿದ್ಯಾರ್ಥಿಗಳು ಈ ಪದ್ಧತಿಯಿಂದ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಾಯಿತು. 12 ವರ್ಷಗಳ ಹಿಂದೆ 25 ಸಾವಿರ ವಿದ್ಯಾರ್ಥಿಗಳು ಈ ಸ್ಕೀಂನಲ್ಲಿ ಪಾಸ್ ಆಗಿದ್ದರು. ನಂತರ 12 ವರ್ಷ ಈ ಸ್ಕೀಂನ್ನು ನಿಲ್ಲಿಸಿಬಿಟ್ಟಿದ್ದರು. ಮತ್ತೆ ಈ ಸ್ಕೀಂನ್ನು ಪದ್ಧತಿಯನ್ನು ತಂದು ವಿದ್ಯಾರ್ಥಿಗಳಿಗೆ ಒಂದು ವರ್ಷದ ಸಮಯ ವೇಸ್ಟ್ ಆಗುವುದನ್ನು ತಪ್ಪಿಸಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಅಭಿನಂದಿಸುತ್ತೇವೆ. ಇನ್ನು ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಸರ್ಕಾರ ಇದ್ದಾಗ ನಾವು ಏನು ಮಾಡುವುದಕ್ಕೆ ಹೊರಟಿದ್ದೆವು ಅದನ್ನು ಪೂರ್ಣ ಮಾಡಲಿಕ್ಕೆ

ನಮ್ಮ ಕೈಯಿಂದ ಆಗಲಿಲ್ಲ. ಆದೇನೆಂದರೆ ಈ ವಿಶ್ವವಿದ್ಯಾನಿಯಗಳನ್ನು ಒಂದು ಶಿಸ್ತಿನ ಆಡಿಯಲ್ಲಿ ಸರ್ಕಾರ ನಡೆಸಿಕೊಂಡು ಹೋಗಬೇಕಾಗುತ್ತದೆ, ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕಾಗುತ್ತದೆ, ಅಕಾಡೆಮಿಕ್ ಎಕ್ಸಲೆನ್ಸ್‌ನ್ನು ಹೇಗೆ ಸೃಷ್ಟಿಮಾಡಬೇಕು ಎನ್ನತಕ್ಕಂಥ ವಿಚಾರಗಳನ್ನು ಅಧ್ಯಯನ ಮಾಡಿ ಒಂದು ಬಿಲ್‌ನ್ನು ತಯಾರು ಮಾಡಿದ್ದೆವು. ಆಗಲೂ ಕೂಡ ನಾನು ಎರಡು ಸಲ ರಾಜೀನಾಮೆಯನ್ನು ಕೊಡಬೇಕಾಯಿತು. ಇದರಿಂದಾಗಿ ನಾವು ಆ ಕಾರ್ಯವನ್ನು ಮಾಡಲಿಕ್ಕೆ ಆಗಲಿಲ್ಲ. ಈಗಿನ ಉನ್ನತ ಶಿಕ್ಷಣ ಮಂತ್ರಿಗಳು ಈ ಬಗ್ಗೆ ಬಿಲ್‌ನ್ನು ತಂದಿದ್ದಾರೆ. ಈ ಬಿಲ್‌ನಲ್ಲಿರುವ ಕೆಲವು ವಿಚಾರಗಳಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಈ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದಾಗ ಕೆಲವು ವಿಚಾರಗಳನ್ನು ಸರಿಪಡಿಸಿಕೊಳ್ಳುವುದಾದರೆ ಆ ಬಿಲ್‌ನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಇನ್ನೊಂದೆರಡು ವಿಚಾರಗಳಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಗಮನಹರಿಸಿಲ್ಲವೋ ಅಥವಾ ಉದ್ದೇಶಪೂರ್ವಕವಾಗಿಯೇ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ, ಆದರೆ ಆ ಎರಡು ವಿಚಾರಗಳನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊದಲನೇಯದಾಗಿ ಈ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಸಿಇಟಿ ಮಾದರಿಯ ಮೂಲಕ ಪ್ರವೇಶಗಳನ್ನು ಕಲ್ಪಿಸಿಕೊಡುತ್ತೀರಿ. 1996ರಲ್ಲಿ ಮೊದಲು ರೂಲ್ಸ್ ಇರಲಿಲ್ಲ 1993ರಲ್ಲಿ ಆ್ಯಕ್ಟ್ ಮಾಡಿದ ನಂತರ ಅದರಲ್ಲಿ ಕೆಲವು ಲೂಪ್‌ಹೋಲ್ಸ್ ಇತ್ತು. ಆ ಸ್ಪೋರ್ಟ್ಸ್ ಕೋಟಾದಲ್ಲಿ ಯಾರ್‍ಯಾರೊ ಸೀಟುಗಳನ್ನು ತೆಗೆದುಕೊಳ್ಳುತ್ತಿದ್ದರು, ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರ ಕಡೆಯವರು ಇರಬಹುದು, ಮುಖ್ಯಮಂತ್ರಿಗಳ ಕಡೆಯವರು ಇರಬಹುದು, ಶಿಕ್ಷಣ ಮಂತ್ರಿಗಳ ಕಡೆಯವರು ಇರಬಹುದು, ಮತ್ಯಾರೋ ಕೇಂದ್ರದ ಮಂತ್ರಿಗಳ ಕಡೆಯವರು ಇರಬಹುದು, ಹೀಗೆ ಯರ್‍ಯಾರೊ ಆ ಸೀಟುಗಳನ್ನು ಹೊಡೆದುಕೊಳ್ಳುತ್ತಿದ್ದರು. ಸ್ಪೋರ್ಟ್ಸ್ ಮತ್ತು ಎನ್‌ಸಿಸಿ ಕೋಟಾಗಳಿಗೆ ಮೊದಲು ರೂಲ್ಸ್ ಇರಲಿಲ್ಲ, ನೋಡುವುದಕ್ಕೆ ಸಿಇಟಿಯಲ್ಲಿ ಆ್ಯಕ್ಟ್ ಇದೆ ಆದರೆ ಗುಟ್ಟುಗುಟ್ಟಾಗಿ ಅವರವರಿಗೆ ಬೇಕಾದವರಿಗೆ ಅಡ್ಮಿಷನ್ ಮಾಡಿಕೊಳ್ಳುತ್ತಿದ್ದರು. ಇದರ ಬಗ್ಗೆ ಕೋರ್ಟಿನಲ್ಲಿ ನೂರಾರು ರಿಟಪಿಟಿಷನ್‌ಗಳು ಬೀಳುತ್ತಿದ್ದವು. ಆದರೆ ನಮ್ಮ ಕಾಲದಲ್ಲಿ ಅದಕ್ಕೆ ರೂಲ್ಸ್‌ನ್ನು ತಂದು ಪಾರದರ್ಶಕವಾಗಿ ಮಾಡಿದೆವು, ಇದಾದ ನಂತರ ಒಂದು ರಿಟಪಿಟಿಷನ್‌ಗಳು ಕೋರ್ಟಿನಲ್ಲಿ ಬಿದ್ದಿಲ್ಲ. ಅಂದರೆ ಇದರರ್ಥ ಅಷ್ಟೊಂದು ಪಾರದರ್ಶಕವಾಗಿ ನಾವು ಮಾಡಿದ್ದೆವು. ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರ ಮಗ ಅಥವಾ ಬೇರೆ ಯಾರ ಮಗನಾದರೂ ಕೂಡ ಅಡ್ಮಿಷನ್ ಮಾಡಿಸಬೇಕಾದರೆ ಕ್ಯೂನಲ್ಲಿ ನಿಂತುಕೊಂಡು ರೀ-ಕೌನ್ಸಿಲಿಂಗ್ ಮಾಡತಕ್ಕಂಥ ವ್ಯವಸ್ಥೆ ಆ ದಿನ ಮಾಡಿದ್ದರಿಂದ ಇವತ್ತು ಅದು ಯಶ್ವಸಿಯಾಗಿ ನಡೆಯುತ್ತಿದೆ. ಆದರೆ, ಸರ್ಕಾರ ಚಾಪೆ ಕೆಳಗಡೆ ತೂರಿದರೆ ಕೆಲವು ಮ್ಯಾನೇಜ್‌ಮೆಂಟ್‌ನವರು ರಂಗೋಲಿ ಕೆಳಗೆಡೆ ತೂರುವಂತಹ ಕೆಲಸ ಮಾಡಿದ್ದಾರೆ. ಅದರಲ್ಲೂ ಸೆಕೆಂಡ್ ಈಯರ್‌ನಲ್ಲಿ

ಥರ್ಡ್ ಸೆಮಿಸ್ಟಾರ್‌ನಲ್ಲಿ ಬ್ರಾಂಡ್ ಬದಲಾವಣೆಯಲ್ಲಿ ದೊಡ್ಡ ದಂಧೆಯಾಗಿದ್ದು, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದ್ದು, ಮ್ಯಾನೇಜ್‌ಮೆಂಟ ನವರು ಲೂಟಿ ಮಾಡುತ್ತಿದ್ದಾರೆ. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರದ ಎಲ್ಲಾ ನೀತಿ ನಿಯಮ ಆದೇಶಗಳನ್ನು ಗಾಳಿಗೆ ತೂರಿ ಆಡಳಿತ ಮಂಡಳಿಯವರು ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ, ಆದರೆ ಸರ್ಕಾರ ಮಾತ್ರ ಕಣ್ಣು ಮುಚ್ಚಿಕೊಂಡು ಕೂತಿದೆ. ನಮ್ಮ ಸರ್ಕಾರ ಇದ್ದಾಗ 1996ರಲ್ಲಿ ನಾವು ಒಂದು ಆದೇಶವನ್ನು ಹೊರಡಿಸಿದ್ದೆವು. ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಫಸ್ಟ್ ಈಯರ್‌ನಿಂದ ಸೆಕೆಂಡ್ ಈಯರ್‌ಗೆ ಹೋದಾಗ ಸೆಕೆಂಡ್ ಈಯರ್‌ನಲ್ಲಿ ಕೆಲವು ಖಾಲಿ ಬಿದ್ದರೆ ಆದಕ್ಕೆ ಯಾವ ರೀತಿ ತುಂಬಬೇಕು. ಎಷ್ಟು ಖಾಲಿ ಇವೆ ಅಷ್ಟನ್ನು ಮಾತ್ರ ತುಂಬಬೇಕು, ಇವುಗಳನ್ನು ಮೆರಿಟ್ ಆಧಾರದ ಮೇಲೆ ತುಂಬಬೇಕು, ಒಂದು ಸೀಟನ್ನು ಹೆಚ್ಚಿಗೆ ಮಾಡತಕ್ಕಂಥದ್ದು ಆಗಬಾರದು, ಇವುಗಳೆಲ್ಲದರ ಮಾಹಿತಿ ತರಿಸಿಕೊಂಡು ಕಾಲೇಜಿನ ಪ್ರಾಂಶುಪಾಲರಾಗಲಿ ಅಥವಾ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಲಿ ಮಾಡಬೇಕೆಂದು ಆದೇಶ ಹೊರಡಿಸಿದ್ದೆವು. ಇದರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಆರ್ಟಿಕಲ್ ಬಂದಿತು. "Engineering Colleges do brisk business" - "Intake overshoot as guidelines remain on paper" ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದನ್ನು ನಾನು ತರಿಸಿಕೊಂಡು ನೋಡಿದರೆ, 25-5-1996ರಲ್ಲಿ ಹೊರಡಿಸಿದ ಮಾರ್ಗಸೂಚಿಯನ್ನು ಗಾಳಿಗೆ ತೂರಿದ್ದಾರೆಂದು ಕಂಡುಬರುತ್ತದೆ. ಇವರು ಏನು ಮಾಡುತ್ತಾರೆಂದರೆ, ಫಸ್ಟ್‌ಯಿಯರ್‌ಗೆ ಸಿವಿಲ್‌ನಲ್ಲಿ ಸೀಟು ಸಿಗುತ್ತದೆ. ಕಂಪ್ಯೂಟರ್ ಸೈನ್ಸ್ 90 ಪರ್ಸೆಂಟ್‌ಗೆ ಸಿಗತಕ್ಕಂಥದ್ದು ಸಿವಿಲ್ 55 ಪರ್ಸೆಂಟ್‌ಗೆ ಸಿಗುತ್ತದೆ. ಅವನು ಸೆಕೆಂಡ್‌ಈಯರ್‌ಗೆ ಹೋಗಬೇಕಾದರೆ 5 ರಿಂದ 15 ಲಕ್ಷದವರೆಗೆ ಕೊಡಬಹುದು. ಕಂಪ್ಯೂಟರ್‌ಗೆ ಸೇರಿಕೊಂಡು ಬಿಡುತ್ತಾನೆ, ಇದು ಯಾವುದೂ ಸಿಇಟಿ ವ್ಯಾಪ್ತಿಗೆ ಬರುವುದಿಲ್ಲ. ಸಿಇಟಿಗೆ ಕೇವಲ ಮೊದಲನೇ ವರ್ಷದ ಇಂಜನಿಯರ್, ಮೆಡಿಕಲ್, ಡೆಂಟಲ್, ಇವುಗಳು ಮಾತ್ರ ಬರುತ್ತವೆ. ನಂತರ ಸೆಕೆಂಡ್‌ಈಯರ್‌ನಲ್ಲಿ ಖಾಲಿ ಇರುವ ಜಾಗಗಳಿಗೆ ಯಾವ ರೀತಿ ತುಂಬುತ್ತಾರೆ ಎನ್ನುವುದು ಸಿಇಟಿ ವ್ಯಾಪ್ತಿಗೆ ಬರುವುದಿಲ್ಲ. ಇದನ್ನೆಲ್ಲಾ ನೋಡಿಕೊಂಡು ನಮ್ಮ ಸರ್ಕಾರ ಇದ್ದಾಗ ಏನು ಮಾರ್ಗಸೂಚಿ ಹೊರಡಿಸಿದ್ದೆವು ಆದನ್ನು ಇವತ್ತು ಇವರು ಗಾಳಿಗೆ ತೂರಿದ್ದಾರೆ. ಕಂಪ್ಯೂಟರ್ ಸೈನ್ಸಿನ ಥರ್ಡ್ ಸೆಮಿಸ್ಟಾರ್‌ನಲ್ಲಿ 5 ವೇಕನ್ಸಿ ಇದ್ದರೆ ಇದಕ್ಕೆ ವಿರುದ್ಧವಾಗಿ 15, 20, ತುಂಬಿರತಕ್ಕಂಥದ್ದು ಇದೆ. ಹೀಗಾಗಿ ಎಐಸಿಟಿಇನವರು ಎಷ್ಟು ಇನ್‌ಟೇಕ್‌ಗಳನ್ನು ಮಂಜೂರಾತಿ ಮಾಡಿದ್ದಾರೆ ಅಷ್ಟು ಇನ್‌ಟೇಕ್ ಸೆಕೆಂಡ್‌ಈಯರ್‌ನಲ್ಲಿ ದ್ವಿಗುಣವಾಗುತ್ತದೆ. ಹೀಗಾಗಿ ಕೆಲವು ಆಡಳಿತ ಮಂಡಳಿಯವರು ಆರ್ಹತೆಯನ್ನು ಸಂಪೂರ್ಣವಾಗಿ ಕೊಂದಿದ್ದಾರೆ. ಮತ್ತೊಂದು ಬಹಳ ಅಪಾಯಕರವಾದ ಬೆಳವಣಿಗೆ ಏನೆಂದರೆ, ಮೊದಲನೇ ವರ್ಷಕ್ಕೆ ಸೇರುವಾಗಲೇ ಮುಂದಿನ

ವರ್ಷ ಕಂಪ್ಯೂಟರ್ ಕೊಡಿಸುತ್ತೇವೆಂದು ಅವರ ಹತ್ತಿರ ದುಡ್ಡು ತೆಗೆದುಕೊಳ್ಳುತ್ತಾರೆ. ಇವರಿಗೆ ಲಂಗುಲಗಾಮು ಇಲ್ಲದೇ ಇರುವುದರಿಂದ ಆಡಳಿತ ಮಂಡಳಿಯವರು ದುಡ್ಡು ತೆಗೆದುಕೊಂಡು ಹೆಚ್ಚುವರಿ ಸೀಟುಗಳನ್ನು ತುಂಬುತ್ತಿದ್ದಾರೆ. ಅಲ್ಲಿ ವೇಕೆನ್ಸಿ ಸೃಷ್ಟಿ ಮಾಡುವುದಕ್ಕೋಸ್ಕರ ಬೇಕಾಗಿ ಬಡ ವಿದ್ಯಾರ್ಥಿಯಿರಬಹುದು, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ಇರಬಹುದು, ಇವರನ್ನು ಫೇಲ್ ಮಾಡಿ, ಸೆಕೆಂಡ್‌ಈಯರ್ ಥರ್ಡ್ ಸೆಮಿಸ್ಟಾರ್‌ಗೆ ಬೇರೆ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ಹೀಗಾಗಿ ನನ್ನ ಅನಿಸಿಕೆ ಪ್ರಕಾರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸುಮಾರು ಮೂರು ಸಾವಿರ ಸೀಟುಗಳು ಜಾಸ್ತಿಯಾಗುತ್ತಿವೆ. ಬಹುಶಃ ಇದರಲ್ಲಿ ನಮಗೆ ಗೊತ್ತಿಲ್ಲದ ರೀತಿಯಲ್ಲಿ ಎಐಸಿಟಿಇನವರು ಗುಟ್ಟಾಗಿ ಶಾಮೀಲಾಗಿದ್ದಾರೆ. ಆಡಳಿತ ಮಂಡಳಿಯವರೂ ಕೂಡ ರಾಜ್ಯ ಸರ್ಕಾರಕ್ಕೆ ಕಣ್ಣಿಗೆ ಮಣ್ಣು ಎರಚಿದ್ದಾರೆ. ಈ ವಿಷಯ ಆಸಕ್ತಿಯಿರುವ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ? ಅನಾವಶ್ಯಕವಾಗಿ ಸಾರ್ವಜನಿಕರು ನಿಮ್ಮ ಮೇಲೆ ಏಕೆ ಅನುಮಾನಪಡುವ ಹಾಗೆ ಬಿಟ್ಟಿದ್ದೀರಿ? ಇದನ್ನು ಎಐಸಿಟಿಇನವರು ಕಂಟ್ರೋಲ್ ಮಾಡುತ್ತಿಲ್ಲ, ರಾಜ್ಯ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಧಿಕ್ಕರಿಸಿ, ಬ್ರಾಂಚ್ ಬದಲಾವಣೆಗಳನ್ನು ಮಾಡಿ ಒಂದು ವರ್ಷಕ್ಕೆ ಸುಮಾರು 50 ರಿಂದ 60 ಕೋಟಿ ರೂಪಾಯಿಗಳ ಅವ್ಯವಹಾರ ಆಗಿರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಒಟ್ಟಾರೆಯಾಗಿ ಎಐಸಿಟಿಇನವರು ಹೊರಡಿಸಿರುವ ಆದೇಶವನ್ನು ಗಾಳಿಗೆ ತೂರಿದ್ದಾರೆ, ಅವರೂ ಕೂಡ ಇದರಲ್ಲಿ ಶಾಮೀಲಾಗಿದ್ದರೆನ್ನುವ ಅನುಮಾನ ನನಗಿದೆ. ಆದ್ದರಿಂದ, 1996ರಿಂದ ಈ ನಾಲ್ಕು ವರ್ಷಗಳಲ್ಲಿ ಎಲ್ಲಾ ಆಡಳಿತ ಮಂಡಳಿಯವರು ಎಷ್ಟು ಬ್ರಾಂಚ್ ಬದಲಾವಣೆಗಳನ್ನು ಮಾಡಿದ್ದಾರೆನ್ನುವ ಬಗ್ಗೆ ಸಿಬಿಐ ತನಿಖೆಗೆ ಒಳಪಡಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ಒಂದು ಸಂಸ್ಥೆ ಎಐಸಿಟಿಇ ಇರುವುದರಿಂದ ಇದರ ಬಗ್ಗೆ ಕೇವಲ ಸಿಓಡಿ ತನಿಖೆ ಆಗದೇ ಸಿಬಿಐನಿಂದ ತನಿಖೆಯಾಗಬೇಕಾಗಿದೆ. ಆದ್ದರಿಂದ, ಇದನ್ನು ಸಿಬಿಐಗೆ ರೆಫರ್ ಮಾಡಬೇಕು, ಎಷ್ಟು ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ, ಎಷ್ಟೆಷ್ಟು ಕೋಟಿ ರೂಪಾಯಿ ಅನ್ಯಾಯವಾಗಿದೆ, ಇದೆಲ್ಲಾ ಹೊರಗಡೆ ಬರಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಯವೆಂದು ನಾವು ಹೊಸದಾಗಿ ಪ್ರಾರಂಭಿಸಿದೆವು. ಎಂಬಿಎ ಮತ್ತು ಎಂಸಿಎ ಈ ಕೋರ್ಸ್‌ಗಳ ಪ್ರವೇಶದಲ್ಲೂ ಕೂಡ ಅವ್ಯವಹಾರ ನಡೆದಿದೆ. ರಾಜ್ಯ ಸರ್ಕಾರದವರು ದಿ: 18-7-2000 ದಂದು ಒಂದು ಆದೇಶವನ್ನು ಹೊರಡಿಸಿದೆ. ಎಂಸಿಎ ಮತ್ತು ಎಂಬಿಎ ಈ ತರಡು ಕೋರ್ಸ್‌ಗಳು ಬಹಳ ಪ್ರತಿಷ್ಠಿತವಾದ ಕೋರ್ಸ್‌ಗಳಾಗಿವೆ. ಏಕೆಂದರೆ, ಎಂಸಿಎ ಓದಿದವರು ಕಂಪ್ಯೂಟರ್ ಇಂಜಿನಿಯರಿಂಗ್ ಓದಿದ ವಿದ್ಯಾರ್ಥಿಗಳಿಗೆ ಸಿಗುವಂಥ ಹುದ್ದೆಗಳು ಲಭ್ಯವಾಗುವುದರಿಂದ ಅದು ಇದಕ್ಕೆ ಸರಿಸಾಮಾನವಾದ ಕೋರ್ಸ್ ಆಗಿರುವುದರಿಂದ ಇಲ್ಲಿ ಡೋನೇಷನ್ ಹಾವಳಿ ಜಾಸ್ತಿಯಿದೆ. ಆದರೆ, ಎಂಸಿಎ ಸೀಟು ಅಡ್ಮಿಷನ್ ಮಾಡಿಸಿಕೊಳ್ಳಬೇಕೆಂದು ನೀವು ಒಂದು ನಿರ್ದೇಶನವನ್ನು ಕೊಟ್ಟಿದ್ದೀರಿ. ಅದೇನೆಂದರೆ, ಎಂಸಿಎಗೆ ಗೌರ್ನಮೆಂಟ್ ಸೀಟುಗಳಿಗೆ 30,000 ರೂಪಾಯಿ, ಆಡಳಿತ ಮಂಡಳಿಯ ಸೀಟುಗಳಿಗೆ 70,000 ರೂಪಾಯಿ. ಎಂಬಿಬಿ ಕೋರ್ಸ್‌ಗಳಿಗೆ ಗೌರ್ನಮೆಂಟ್ ಸೀಟುಗಳಿಗೆ

20,000 ರೂಪಾಯಿ, ಆಡಳಿತ ಮಂಡಳಿಯ ಸೀಟುಗಳಿಗೆ 60,000 ರೂಪಾಯಿ. ಹಿಂದೆ ಎಷ್ಟು ಇತ್ತೆಂದರೆ, ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಒಂದು ವರ್ಷಕ್ಕೆ ಸುಮಾರು 32 ಸಾವಿರ ರೂಪಾಯಿ ಫೀ ಇದ್ದರೆ ಇವತ್ತು 45 ಸಾವಿರ ರೂಪಾಯಿ ಜಾಸ್ತಿ ಮಾಡಿದ್ದಾರೆ. ಫೀ ಜಾಸ್ತಿಯಾಗುವುದಕ್ಕೆ ಏನು ಕಾರಣ ಎಂದರೆ, ಮ್ಯಾನೇಜ್‌ಮೆಂಟ್‌ನವರು ಏನು ಕೇಳಿದರು ಎಂದರೆ 1983ರಲ್ಲಿ ನಾವು ಡೊನೇಷನ್ ತೆಗೆದುಕೊಳ್ಳಬಾರದೆಂದು ಅಬಾಲಿಷ್ ಆಫ್ ಕ್ಯಾಪಿಟೇಷನ್ ಆ್ಯಕ್ಟ್ ಎಂದು ಒಂದು ಕಾನೂನು ಹೊರಡಿಸಿದಿರಿ, ನಾವು ಸಂಸ್ಥೆಯನ್ನು ಅಭಿವೃದ್ಧಿ ಮಾಡಬೇಕಾದರೆ, ಕಟ್ಟಡಗಳನ್ನು ಕಟ್ಟಿಸಬೇಕಾದರೆ, ಕೆಲವು ಸಲಕರಣೆಗಳನ್ನು ಒದಗಿಸಬೇಕಾದರೆ ನಮಗೆ ದುಡ್ಡು ಬೇಕಾಗುತ್ತದೆ, ಆದ್ದರಿಂದ ಸೀಟು ಆದರೂ ಜಾಸ್ತಿ ಮಾಡಬೇಕು ಎಂದು ಕೇಳಿಕೊಂಡಿದ್ದರಿಂದ, ಆಡಳಿತ ಮಂಡಳಿಯವರು 70 ಸಾವಿರ ರೂಪಾಯಿ ಫೀ ಕಲೆಕ್ಟ್ ಮಾಡಬಹುದು ಎಂದು ಮಾಡಿದೆವು. ನಂತರದಲ್ಲಿ ಅದು ಏನಾಗಿದೆ ಎಂದರೆ, ಅವರು ಫೀ ಕಟ್ಟಿಸಿಕೊಳ್ಳುವುದರ ಜೊತೆಗೆ ಡೊನೇಷನ್ ಕೂಡ ತೆಗೆದುಕೊಳ್ಳುತ್ತಾರೆ. ಕಡಿಮೆ ಎಂದರೂ ಇವತ್ತು ಎಂಸಿಎ ಸೀಟುಗಳು ಒಂದೂವರೆ ಲಕ್ಷದಿಂದ ಎರಡು ಲಕ್ಷ ರೂಪಾಯಿವರೆಗೆ ಡೊನೇಷನ್ ಕೊಡಬೇಕಾದ ಸ್ಥಿತಿ ಇದೆ. ಇದಕ್ಕೊಂದು ನಾರ್ಮ್ಸ್ ಇಲ್ಲ, ಯಾರೋ ಒಬ್ಬ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಡೆಲ್ಲಿ ಮಂತ್ರಿಗಳಾಗಲಿ, ಹೇಳಿದ ತಕ್ಷಣ ಒಂದೆರಡು ಸೀಟು ಕೊಡುವುದು, ಉಳಿದ ಎಲ್ಲಾ ಸೀಟುಗಳನ್ನು ಅವರೇ ಭರ್ತಿಮಾಡಿಕೊಳ್ಳುತ್ತಾರೆ. ಕ್ಯಾಪಿಟೇಷನ್ ಆ್ಯಕ್ಟ್ ಇದ್ದರೂ ಕೂಡ ಅದನ್ನು ಗಾಳಿಗೆ ತೂರಿ ಈ ರೀತಿಯಾದ ಅಡ್ಮಿಷನ್ ಮಾಡುತ್ತಿದ್ದಾರೆ. ನನಗೆ

5.50 ಪಿ.ಎಂ.

ತಿಳಿದ ಮಟ್ಟಿಗೆ ಸುಮಾರು ೭೧೦ ಇಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ ಕೆಲವು ಕಾಲೇಜುಗಳಲ್ಲಿ ಮಾತ್ರ ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸ್‌ಗಳಿವೆ. ಈ ಎಲ್ಲಾ ಕಾಲೇಜುಗಳಲ್ಲಿ ಡೊನೇಷನ್ ಇಲ್ಲದೆ ಒಂದು ಸೀಟ್ ಸಹ ಕೊಡುತ್ತಿಲ್ಲ. ಇವತ್ತಿನ ದಿವಸ ಎಂಸಿಎ ಸೀಟ್‌ಗೆ ಸುಮಾರು ೧.೫ ಯಿಂದ ೨ ಲಕ್ಷ ರೂಪಾಯಿ ಮತ್ತು ಎಂಬಿಎ ಸೀಟ್‌ಗೆ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಡೊನೇಷನ್ ಪಡೆದುಕೊಳ್ಳುತ್ತಿದ್ದಾರೆ. ಒಬ್ಬ ವಿದ್ಯಾರ್ಥಿಯಿಂದ ಮ್ಯಾನೇಜ್‌ಮೆಂಟ್‌ನವರು ಒಂದು ಸಾರಿ ೧೮ ಸಾವಿರ ಮತ್ತೊಂದು ಸಾರಿ ೧೭ ಸಾವಿರ ಹಾಗೂ ೧೫ ಸಾವಿರ ರೂಪಾಯಿಯ ಮೂರು ಚೆಕ್‌ಗಳಿಂದ ಒಟ್ಟು ೫೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ರಸೀದಿ ಕೊಟ್ಟಿರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಇವತ್ತಿನ ದಿವಸ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ಸರ್ಕಾರ ಮತ್ತು ಇಲಾಖೆಗೆ ಹಾಗೂ ಕೋರ್ಟ್‌ಗೆ ಎಂದರೆ ಭಯ ಬೀಳುತ್ತಾರೆ. ಏಕೆಂದರೆ, ಇಂಟರ್‌ನಲ್ ಅಸೆಸ್‌ಮೆಂಟ್‌ನಲ್ಲಿ ನಮ್ಮನ್ನು ಫೇಲ್ ಮಾಡುತ್ತಾರೆ ಎನ್ನತಕ್ಕಂಥ ಭಯದಿಂದ ಈ ವಿಷಯವನ್ನು ಯಾವ ವಿದ್ಯಾರ್ಥಿಯೂ ಕೂಡ ಹೇಳುವುದಿಲ್ಲ. ಈ ವಿಷಯವನ್ನು ಯಾರೂ ನನ್ನ ಗಮನಕ್ಕೆ ತಂದಿಲ್ಲ ಮತ್ತು ಇದರ ಬಗ್ಗೆ ಯಾರೂ ಅರ್ಜಿ ಕೊಟ್ಟಿಲ್ಲವೆಂದು ಸರ್ಕಾರದವರು ಉತ್ತರ ಕೊಡಬಹುದು.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅಥೆಂಟಿಕೇಟೆಡ್ ಡಾಕ್ಯುಮೆಂಟ್ಸ್‌ನ್ನು ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಆಡಳಿತ ವರ್ಗದವರು ಡೊನೇಷನ್ ತೆಗೆದುಕೊಂಡು ಯಾವ ರೀತಿಯಾದ ರಸೀದಿಯನ್ನು ಕೊಟ್ಟಿದ್ದಾರೆಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ದಯಮಾಡಿ ಅದನ್ನು ನನಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಅವರು ಡೊನೇಷನ್ ತೆಗೆದುಕೊಂಡಿದ್ದರೆ, ಅದು ಕಾನೂನು ಬಾಹಿರವಾಗಿರುವುದರಿಂದ ಅವರ ಮೇಲೆ ಸೂಕ್ತ ಕ್ರಮವನ್ನು ತಕ್ಷಣ ಜರುಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಡೊನೇಷನ್ ಎಂದು ರಸೀದಿಯಲ್ಲಿ ಬರೆಯುವುದಿಲ್ಲ. ಕೇವಲ ೧೮ ಸಾವಿರ ರೂಪಾಯಿಗಳ ಒಂದು ಚೆಕ್‌ನ್ನು ತೆಗೆದುಕೊಳ್ಳಲಾಗಿದೆ ಎಂದು ಬರೆದಿದ್ದಾರೆ. ರಸೀದಿಯಲ್ಲಿ ಬಿಲ್ಡಿಂಗ್ ಫಂಡ್ ಎಂದೂ ಕೂಡ ಬರೆಯುವುದಿಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವ ಹಾಗೆ ಈ ಹಾವಳಿ ಬೆಂಗಳೂರಿನಲ್ಲಿ ಒಂದೇ ಕಡೆ ಅಲ್ಲ ಧಾರವಾಡ-ಹುಬ್ಬಳಿ ಮತ್ತು ಗ್ರಾಮ ಮಟ್ಟದಲ್ಲಿಯೂ ಕೂಡ ಹಬ್ಬಿದೆ. ಇದರಿಂದ ಇವತ್ತಿನ ದಿವಸ ಬಡ ಮಕ್ಕಳಿಗೆ ಕಾಲೇಜಿನಲ್ಲಿ ಸೀಟು ಸಿಗುತ್ತಿಲ್ಲ. ಹಾಗೆಯೇ ಈ ಹಾವಳಿ ಪ್ರೈಮರಿ ಮತ್ತು ಕಾಲೇಜು ಲೆವೆಲ್‌ನಲ್ಲಿಯೂ ಕೂಡ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಬಹಳ ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ಇವತ್ತಿನ ದಿವಸ ಮ್ಯಾನೇಜ್‌ಮೆಂಟ್‌ನವರು ಅಡ್ಮಿಷನ್ ಮಾಡುವುದನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ಒಂದು ಸ್ಕ್ವಾಡ್ ಸರ್ಕಾರದ ಮಟ್ಟದಲ್ಲಿ ಇರಬೇಕಾಗುತ್ತದೆ. ಇನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದವರು ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದರಲ್ಲಿ ಏನಿದೆ ಎಂದರೆ

"There shall be an Entrance Examination for admission to M.C.A Course. The Candidate seeking admission to any of the Engineering Colleges affiliated to Vishveshwaraya Technological University, shall have to take this examination. There shall be an Admission Committee for MCA Course in each College, consisting of the Principal of the College as the Chairman HOD and one senior staff member of the concerned Department as Members and one nominee from V.T.U. as its member"

ಇದರ ಪ್ರಕಾರ ವಿ.ಟಿ.ಯು. ಮೆಂಬರ್ ಇರಬೇಕೆಂದು ಇದೆ. ಆದರೆ, ಇದುವರೆಗೂ ಯಾವುದೇ ಕಾಲೇಜಿನವರು ಯೂನಿವರ್ಸಿಟಿಗೆ ಮೆಂಬರ್ಸ್ ಕಳುಹಿಸಬೇಕೆಂದು ಕೇಳಿಲ್ಲ. ಸದರಿ ಆದೇಶವನ್ನು ಹೊರಡಿಸಿ ಸುಮಾರು ಮೂರು ವರ್ಷಗಳಾಗಿದ್ದರೂ ಸಹ ಇದುವರೆಗೆ ಒಂದು ಕಾಲೇಜಿನವರು ನಮ್ಮ ಪ್ರತಿನಿಧಿಯನ್ನು ಕಳುಹಿಸಿ ಕೊಡಬೇಕೆಂದು ಪತ್ರ ಬರೆದಿಲ್ಲ. ಇಲ್ಲಿ ನೆಪ ಮಾತ್ರಕ್ಕೆ ಅಡ್ಮಿಷನ್ ಮಾಡುವಂಥ ಸಂದರ್ಭದಲ್ಲಿ ರಿಟರ್ನ್ ಪರೀಕ್ಷೆಯನ್ನು ಮಾಡುತ್ತಾರೆ. ಆದರೆ ಡೊನೇಷನ್‌ನ್ನು ಯಾರು ಜಾಸ್ತಿ ಕೊಡುತ್ತಾರೆಯೋ ಅಂಥವರನ್ನು ಅಡ್ಮಿಷನ್ ಮಾಡಿಕೊಳ್ಳುತ್ತಿದ್ದಾರೆ. ಎ.ಐ.ಸಿ.ಟಿ.ಇ.ರವರು ಏನು ಹೇಳಿದ್ದಾರೆಂದರೆ,

> "The Institutions shall observe all instructions and guidelines issued by A.I.C.T.E regarding mode of selection of candidates for admission; prescribing fees; no capitation shall be charged and no charges other than the fee fixed by the competent authority, shall be levied on the students."

ಎ.ಐ.ಸಿ.ಟಿ.ಇ.ರವರು ಡೊನೇಷನ್ ಕಲೆಕ್ಟ್ ಮಾಡಬಾರದೆಂದು ನಿಬಂಧನೆ ಹಾಕಿದ್ದಾರೆ. ಆದ್ದರಿಂದ ಶುಲ್ಕವನ್ನು ಜಾಸ್ತಿ ಮಾಡಿದರೆ ಮಾತ್ರ ನಾವು ಕಾಲೇಜು ನಡೆಸುವುದಕ್ಕೆ ಸಾಧ್ಯವಾಗುತ್ತದೆಂದು ಆಡಳಿತ ವರ್ಗದವರು ಕೇಳಿಕೊಂಡಿರುವುದರಿಂದ ಶುಲ್ಕವನ್ನು ಜಾಸ್ತಿ ಮಾಡಲಾಗಿದೆ. ಈಗ ಶುಲ್ಕವನ್ನು ೨೦ ಸಾವಿರ ರೂ. ಮಾಡಿಸಿಕೊಂಡಿದ್ದಾರೆ. ಇದಕ್ಕೆ ತಕ್ಕಂತೆ ಡೊನೇಷನ್ ಕೂಡ ಜಾಸ್ತಿಯಾಗಿದೆಯೇ ಹೊರತು ಕಡಿಮೆ ಏನೂ ಆಗಿಲ್ಲ. ಇವತ್ತಿನ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಗಾಯದ ಮೇಲೆ ಇನ್ನೊಂದು ಬರೆ ಹಾಕಿದಂತೆ ಆಗಿದೆ. ಇವತ್ತಿನ ದಿವಸ ಬಡ ವಿದ್ಯಾರ್ಥಿಗಳು ಇಂಥ ಕೋರ್ಸ್‌ಗಳನ್ನು ಮಾಡುವುದಕ್ಕೆ ಆಗುತ್ತಿಲ್ಲ. ಇದರಿಂದ ಏನು ತಿಳಿಯುತ್ತದೆ ಎಂದರೆ, ಈ ಸರ್ಕಾರ ಮ್ಯಾನೇಜ್‌ಮೆಂಟ್ ಪರವಾಗಿ ಇದೆ ಎನ್ನತಕ್ಕಂಥದು ಅನಿವಾರ್ಯವಾಗಿದೆ ಎಂದು ಸಾರ್ವಜನಿಕರಲ್ಲಿ ಬಂದಿದೆ. ನನ್ನ ಭಾವನೆಯೂ ಕೂಡ ಇದೇ ಆಗಿದೆ. ಏಕೆಂದರೆ, ಇಂಜನಿಯರಿಂಗ್ ಸೀಟ್‌ನಲ್ಲಿ ಮ್ಯಾನೇಜ್‌ಮೆಂಟ್ ಕೋಟಾ ೫ ಇರುವುದನ್ನು ೧೫ ಮಾಡಿದ್ದೀರಿ. ೩೨ ಸಾವಿರ ರೂಪಾಯಿ ಇದ್ದಂಥ ಶುಲ್ಕವನ್ನು ೪೫ ಸಾವಿರ ಮತ್ತು ಎಂ.ಸಿ.ಎ. ಕೋರ್ಸ್‌ಗೆ ೨೦ ಸಾವಿರ ಮತ್ತು ಎಂ.ಬಿ.ಎ. ಕೋರ್ಸ್‌ಗೂ ಸಹ ಶುಲ್ಕವನ್ನು ಜಾಸ್ತಿ ಮಾಡಿದ್ದಾರೆ. ಇದರ ಜೊತೆಗೆ ಬಡವರ ಹತ್ತಿರ ಡೊನೇಷನ್ ಪಡೆದುಕೊಳ್ಳುತ್ತಿದ್ದಾರೆ. ೧೦೦ಕ್ಕೆ ೧೦೦ರಷ್ಟು ಸೆಂಟ್ರಲೈಜ್ಡ್ ಕೌನ್ಸಿಲಿಂಗ್ ಮಾಡಿ ಅಡ್ಮಿಷನ್ ಕೆಲಸವನ್ನು ಸರ್ಕಾರವೇ ಮಾಡಬೇಕೆಂದು ಎ.ಐ.ಟಿ.ಸಿ.ಇ.ರವರು ಒಂದು ಡೈರೆಕ್ಷನ್ ಕೊಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಸಿ.ಇ.ಟಿ.ಮಾದರಿಯಲ್ಲಿಯೇ

ಎಂಸಿಎ ಮತ್ತು ಎಂಬಿಎ ಕೋರ್ಸ್‌ಗೆ ಅಡ್ಮಿಷನ್‌ನ್ನು ಪ್ರಕಟಣೆ ಮಾಡಿದ ಮೇಲೆ ನೀವು ಎಷ್ಟು ಶುಲ್ಕವನ್ನು ನಿಗದಿ ಮಾಡುತ್ತೀರಿ ಅಷ್ಟು ಶುಲ್ಕವನ್ನು ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳುವಂಥ ವ್ಯವಸ್ಥೆ ಆಗಬೇಕು. ಯಾವುದೇ ಕಾರಣಕ್ಕೂ ಮ್ಯಾನೇಜ್‌ಮೆಂಟ್‌ನವರು ಹೆಚ್ಚಿನ ಶುಲ್ಕವನ್ನು ಕಲೆಕ್ಟ್ ಮಾಡುವುದಕ್ಕೆ ಅವಕಾಶ ಕೊಡಬಾರದು. ಕೌನ್ಸಿಲಿಂಗ್ ಸಂದರ್ಭದಲ್ಲಿ ಶುಲ್ಕವನ್ನು ಕಲೆಕ್ಟ್ ಮಾಡಿ ಆಡಳಿತ ವರ್ಗದವರ ಅಕೌಂಟ್‌ಗೆ ಡೆಬಿಟ್ ಮಾಡತಕ್ಕಂಥ ಕೆಲಸವನ್ನೂ ಸಹ ಮಾಡಬಹುದು. ಈ ರೀತಿಯಾದಂಥ ವ್ಯವಸ್ಥೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಆಗತಕ್ಕಂಥ ಶೋಷಣೆಯನ್ನು ಸ್ವಲ್ಪಮಟ್ಟಿಗಾದರೂ ತಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸುಮಾರು ೧೦ ರಿಂದ ೧೫ ವರ್ಷಗಳ ವರೆಗೆ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಅರೆಕಾಲಿಕ ಉಪನ್ಯಾಸಕರು ಕೆಲಸ ಮಾಡತಕ್ಕಂಥದನ್ನು ನಮ್ಮ ಸರ್ಕಾರ ಮನಗೊಂಡು, ಇವರನ್ನು ಯಾವರೀತಿಯಾಗಿ ಅಬ್ಸಾರ್ಬ್ ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಿ ದಿನಾಂಕ: ೨೨-೦೭-೧೯೯೭ರಲ್ಲಿ ಇವರನ್ನು ಅಬ್ಸಾರ್ಬ್ ಮಾಡುವ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಮೊದಲು ಯಾವುದೇ ನಿಯಮಾವಳಿ ಇರಲಿಲ್ಲ. ಇದರ ಬಗ್ಗೆ ಕೆಲವು ವಿದ್ಯಾರ್ಥಿಗಳು ಕೆ.ಎ.ಟಿ. ಮತ್ತು ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರು. ಈ ಒಂದು ನಿಯಮಾವಳಿಯನ್ನು ಎರಡು ಕಡೆ ರದ್ದು ಮಾಡಲಾಯಿತು. ಆದರೆ ನಮ್ಮ ಸರ್ಕಾರ ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಯಿತು. ನಾವು ಮಾಡಿರತಕ್ಕಂಥ ನಿಯಮಾವಳಿ ಸರಿಯಾಗಿದೆ, ಇದರ ಪ್ರಕಾರ ಅರೆಕಾಲಿಕ ಉಪನ್ಯಾಸಕರನ್ನು ಅಬ್ಸಾರ್ಬ ಮಾಡಬಹುದೆಂದು ಹೇಳಿ ಸುಪ್ರೀಂ ಕೋರ್ಟ್ ಸದರಿ ನಿಯಮಾವಳಿಯನ್ನು ಎತ್ತಿ ಹಿಡಿಯಿತು. ಈ ಒಂದು ಆದೇಶ ಬಂದು ಸುಮಾರು ಏಳೆಂಟು ತಿಂಗಳು ಆದರೂ ಸಹ ಈ ಪ್ರಕ್ರಿಯೆ ಇನ್ನು ಪ್ರಾರಂಭವಾಗಿಲ್ಲ. ನಿಮ್ಮ ಸರ್ಕಾರ ಇದ್ದಾಗ ಮಾಡಿರತಕ್ಕಂಥ ನಿಯಮಾವಳಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಜಾರಿಗೊಳಿಸಬೇಕೆಂದು ನಮ್ಮ ಪಕ್ಷದ ಸಭೆ ನಡೆಯುವಂಥ ಸಂದರ್ಭದಲ್ಲಿ ಡೆಲಿಗೇಶನ್ ಬಂದಿದ್ದರು. ಸದರಿ ನಿಯಮಾವಳಿ ಈಗ ಎಲ್ಲಿ ಇದೆಯೋ ಎಂಬುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಇದನ್ನು ಆದಷ್ಟು ಬೇಗ ಜಾರಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಜಿ. ಪರಮೇಶ್ವರ್ :— ಮಾನ್ಯ ಉಪಾಧ್ಯಕ್ಷರೆ, ಸದರಿ ಪ್ರಕ್ರಿಯೆ ಪ್ರಾರಂಭವಾಗಿಲ್ಲ ಎನ್ನತಕ್ಕಂಥದ್ದು ಸತ್ಯಕ್ಕೆ ದೂರವಾದುದು. ಈ ಪ್ರಕ್ರಿಯೆ ಪ್ರಾರಂಭವಾಗಿದ್ದು, ಈ ಚೌಕಟ್ಟಿನೊಳಗೆ ಎಷ್ಟು ಜನ ಬರುತ್ತಾರೆ ಎನ್ನತಕ್ಕಂಥದನ್ನು ಪಟ್ಟಿ ಮಾಡಿ ಹಣಕಾಸಿನ ಇಲಾಖೆಯ ಅನುಮತಿಗಾಗಿ ಈಗಾಗಲೇ ಕಳುಹಿಸಿಕೊಡಲಾಗಿದೆ. ಹಣಕಾಸಿನ ಇಲಾಖೆಯಿಂದ ಅನುಮತಿ ಬಂದ ಕೂಡಲೇ ಆದೇಶಕೊಡತಕ್ಕಂಥ ಕೆಲಸವನ್ನು ಮಾಡಲಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ಇದನ್ನು ಆದಷ್ಟು ಜಾಗ್ರತೆ ಮಾಡಿದರೆ ಒಳ್ಳೆಯದು. ಏಳು ತಿಂಗಳ ಹಿಂದೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರೂ ಕೂಡ ಇದನ್ನು ಜಾರಿಗೆ ತರುವುದರಲ್ಲಿ ಸ್ವಲ್ಪ ತಡವಾಗಿದೆ ಎಂಬುದು ನನ್ನ ಭಾವನೆಯಾಗಿದೆ.

ಇದನ್ನು ತಾವು ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಅರೆಕಾಲಿಕ ಉಪನ್ಯಾಸಕರು ಬಹಳ ವರ್ಷಗಳಿಂದ ಕಾಯುತ್ತಿರುವುದರಿಂದ, ಇದನ್ನು ಸ್ವಲ್ಪ ಬೇಗ ಮಾಡಬೇಕೆಂದು ನನ್ನ ಅನಿಸಿಕೆಯಾಗಿದೆ. ಸ್ಟಾಫ್‌ಗ್ಯಾಪ್ ಲೆಕ್ಚರರ್ಸ್ ನೇಮಕಾತಿಯಲ್ಲಿ ಹಿಂದೆ ಇದ್ದಂಥ ಆಯುಕ್ತರು ಮೀಸಲಾತಿ ನಿಯಮಾವಳಿಯನ್ನು ಗಾಳಿಗೆ ತೂರಿದ್ದಾರೆ ಎನ್ನತಕ್ಕಂಥದ್ದು ನಿಮ್ಮ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. ಇವತ್ತಿನ ದಿವಸ ಸುಮಾರು ೪೩೫ ಸ್ಟಾಫ್ ಗ್ಯಾಪ್ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಬಾರದೆ ಈಗಾಗಲೇ ೩೫೮ ಸದರಿ ಲೆಕ್ಚರರ್ಸ್‌ನ್ನು ರೆಗ್ಯುಲರೈಜ್ ಮಾಡಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಮೀಸಲಾತಿಯನ್ನು ಅನುಸರಿಸಿಲ್ಲ. ಈ ಕಾನೂನನ್ನು ಉಲ್ಲಂಘನೆ ಮಾಡಿರತಕ್ಕಂಥವರನ್ನು ಇವತ್ತಿನದಿವಸ ಕೆ.ಎ.ಟಿ.ಗೆ. ಸದಸ್ಯರನ್ನಾಗಿ ಮಾಡಿದ್ದಾರೆ. ಇದು ಯಾವ ಸರ್ಕಾರದ ನೀತಿ? ಕಾನೂನು ಬದ್ಧವಾಗಿ ಮತ್ತು ನಿಷ್ಪಕ್ಷಪಾತವಾಗಿ ಕಾನೂನು ಅಡಿಯಲ್ಲಿ ಯಾರು ಕೆಲಸ ಮಾಡಿರುತ್ತಾರೆಯೋ ಅಂಥ ಅಧಿಕಾರಿಗಳನ್ನು ಗುರುತಿಸಿ ಕೆಎಟಿಗೆ ರೆಕಮೆಂಡ್ ಮಾಡಬೇಕು. ಇಲ್ಲಿ ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಮೀಸಲಾತಿಯನ್ನು ಗಾಳಿಗೆ ತೂರಿ ಪರಿಶಿಷ್ಟ ಜಾತಿವರ್ಗದ ಅಭ್ಯರ್ಥಿಗಳಿಗೆ ಅನ್ಯಾಯವನ್ನು ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತರದೆ ಸ್ಟಾಫ್‌ಗ್ಯಾಪ್ ರೆಕ್ರೂಟ್‌ಮೆಂಟ್‌ನ್ನು ಅಲ್ಲಿಯೇ ಮಾಡಿ ಹೋಗಿರುವಂತಹವರನ್ನು ಕೆ.ಎ.ಟಿ. ಸದಸ್ಯರನ್ನಾಗಿ ಮಾಡಿದ್ದಾರೆ. ಇದರ ಬಗ್ಗೆ ನಾನು ಬಹಳ ಆಕ್ಷೇಪವನ್ನು ಎತ್ತಬೇಕಾಗುತ್ತದೆ. ಇದರ ಬಗ್ಗೆ ತಾವು ಪ್ರತಿಭಟನೆಯನ್ನು ಮಾಡಬೇಕಾಗಿತ್ತು. ಇವತ್ತು ಅದರ ಬಗ್ಗೆ ಎನ್‌ಕ್ವಯರಿ ಆಗಬೇಕು, ಹೈಯರ್ ಎಜ್ಯುಕೇಷನ್‌ನಲ್ಲಿ ಸುಮಾರು ಹಣವನ್ನು ಕಡತ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ನಾನು ಅದರ ಬಗ್ಗೆ ಆಕ್ಷೇಪವನ್ನು ಮಾಡುವುದಿಲ್ಲ. ಗ್ರಾಂಟ್-ಇನ್-ಏಡ್ ಇರುವುದರಿಂದ ಸಬ್ಸಿಡಿ ಜಾಸ್ತಿಯಾಗುತ್ತದೆ, ಆದರಲ್ಲಿ ಕೆಲವು ಸಂಸ್ಥೆಗಳು ಸುಮಾರು 20 ರಿಂದ 25 ವರ್ಷಗಳಿಂದ ಗ್ರಾಂಟ್‌ನ್ನು ತೆಗೆದುಕೊಂಡು ಬರುತ್ತಿದ್ದಾರೆ. ಅವು ಪ್ರಬಲವಾಗಿ ಬೆಳೆದಿವೆ, ಎಲ್ಲಾ ಸೌಲಭ್ಯಗಳು ಅಲ್ಲಿ ಇದೆ. ಹೊಸದಾಗಿ ಪ್ರಾರಂಭವಾಗಿರತಕ್ಕಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೇಜುಗಳಿಗೆ ಇವತ್ತು ಗ್ರಾಂಟ್‌ನ್ನು ಕೊಡುವುದಕ್ಕಾಗಿಲ್ಲ. ಇದು ನಮ್ಮ ಕಾಲದಲ್ಲೂ ಆಗಲಿಲ್ಲ ಅದಕ್ಕಾಗಿ ನಾನು ಪಶ್ಚಾತ್ತಾಪವನ್ನು ಪಡುತ್ತೇನೆ. ಆದಕ್ಕಾಗಿ ನಾನು ಇವತ್ತು ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ, ಕೊನೆಯ ಪಕ್ಷ ಉನ್ನತ ಶಿಕ್ಷಣ ಖಾತೆಯಲ್ಲಿ ಎಷ್ಟು ಕಾಲೇಜುಗಳಿವೆ, ಎಷ್ಟು ಎಸ್‌ಸಿ / ಎಸ್‌ಟಿ ಮ್ಯಾನೇಜ್‌ಮೆಂಟ್‌ಗಳು ಕೆಲಸವನ್ನು ಮಾಡುತ್ತಿವೆ, ಅವರಿಗೆ ಗ್ರಾಂಟ್‌ನ್ನು ಕೊಡುವ ಬಗ್ಗೆ ಮಾಡಬೇಕು. ಅದಕ್ಕೆ ನಾವು ಕ್ಯಾಬಿನೆಟ್ ಸಬ್-ಕಮಿಟಿಯನ್ನು ಮಾಡಿ ಕೆಲವು ವಿಧಾನಗಳನ್ನು ಕಂಡುಹಿಡಿದಿದ್ದೇವೆ. ಯಾರ್ಯಾರು ಬಹಳ ವರ್ಷಗಳಿಂದ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಅಂತಹವರಿಗೆ ಗ್ರಾಂಟ್‌ನ್ನು ಕಡತ ಮಾಡಿ, ಮೊನ್ನೆ ಹೊಸದಾಗಿ ಹಿಂದುಳಿದವರು ಪ್ರಾರಂಭಮಾಡಿರತಕ್ಕಂತಹ

ಸಂಸ್ಥೆಗಳಿಗೆ ಗ್ರಾಂಟ್ ಕೊಡಬೇಕೆಂದು ತಾವು ಮಾಡಿದ್ದೀರಿ, ಅದನ್ನು ತಾವು ಪರಿಶೀಲನೆಯನ್ನು ಮಾಡಬಹುದು. ಸುಮಾರು 292 ಡಿಗ್ರಿ ಕಾಲೇಜುಗಳು, 22ಬಿಎಡ್ ಕಾಲೇಜುಗಳು, 11 ಇಂಜಿನಿಯರಿಂಗ್ ಕಾಲೇಜುಗಳು, 8 ಲಾ ಕಾಲೇಜುಗಳಿಗೆ ಇವತ್ತು ನಾವು ಸರ್ಕಾರದಿಂದ ಸುಮಾರು 220 ಕೋಟಿ ರೂಪಾಯಿಗಳ ಗ್ರಾಂಟ್‌ನ್ನು ಕೊಡುತ್ತಿದ್ದೇವೆ. ಅಂದರೆ ಈ ಹೆಚ್ಚು ಹೆಚ್ಚು ಸಂಬಳವನ್ನು ಕೊಡುತ್ತಿದ್ದರೂ ಸಹ ಆದರೆ ಗುಣಮಟ್ಟ ಮಾತ್ರ ಕಡಿಮೆಯಾಗುತ್ತಲೆ ಇದೆ. ಗ್ರಾಂಟ್-ಇನ್-ಏಡ್ ಜಾಸ್ತಿಯಾದಷ್ಟು ಗುಣಮಟ್ಟವು ಜಾಸ್ತಿಯಾಗಬೇಕು, ಆದರೆ ಸಂಬಳ ಮಾತ್ರ ಜಾಸ್ತಿಯಾಗುತ್ತಿದೆ ಗುಣಮಟ್ಟ ಮಾತ್ರ ಕಡಿಮೆಯಾಗುತ್ತಿದೆ. It should be linked with performance. ಏಕೆಂದರೆ, they must be made accountable ಯಾರೇ ಉಪನ್ಯಾಸಕರಿರಬಹುದು, ಯಾರೇ ಇರಬಹುದು, ಗುಣಮಟ್ಟವನ್ನು ಹೆಚ್ಚಿಗೆ ಮಾಡಬೇಕಾದರೆ, ಯು.ಜಿ.ಸಿ.ಯ ಏನು ಗೈಡ್‌ಲೈನ್ಸ್ ಇದೆ, ಆದರ ಪ್ರಕಾರ ನೀವು ಬೆನಿಫಿಟ್‌ನ್ನು ಕೇಳುತ್ತೀರಿ, ಆ ಗೈಡ್‌ಲೈನ್ಸ್‌ನ್ನು ನೀವು ಏತಕ್ಕಾಗಿ ಅಳವಡಿಸಬಾರದು? ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಮಾಡಿದರೆ ಆಗ ಶಿಸ್ತನ್ನು ತರುವುದಕ್ಕೆ ಆಗುತ್ತದೆಂದು ನನ್ನ ಅನಿಸಿಕೆಯಾಗಿದೆ. ಸಿಇಟಿ ಪ್ರವೇಶದಲ್ಲಿ ಎಸ್‌ಸಿ / ಎಸ್‌ಟಿ ವಿದ್ಯಾರ್ಥಿಗಳು ಫೀ ಕಟ್ಟಬೇಕಾದ ಅವಶ್ಯಕತೆ ಇಲ್ಲ, ನೇರವಾಗಿ ಸಿಇಟಿ ಸೆಲ್‌ನಲ್ಲಿ ಪ್ರವೇಶ ಮಾಡಿದ ನಂತರ ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಫೀ ನಾಲ್ಕೈದು ತಿಂಗಳನಂತರ ಏನು ಬರುತ್ತಿತ್ತು, ಸರ್ಕಾರ ಮೊದಲೇ ಕಟ್ಟಿದ್ದನ್ನು ಇವರು ರೀ ಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕೆಂದು ಮಾಡಿದ್ದೆವು. ಆದರೆ ಈಗ ಒಂದು ರೆಪ್ರಸೆಂಟೇಷನ್ ಬಂದಿದೆ 2000-2001ನೇ ಸಾಲಿಗೆ ಈ ಸೌಲಭ್ಯವನ್ನು ಸಮಾಜಕಲ್ಯಾಣ ಇಲಾಖೆಯಿಂದ ಪೋಷಕರ ವಾರ್ಷಿಕ ಆದಾಯ 51,000 ರೂ. ಇದ್ದವರಿಗೆ ಮಾತ್ರ ಹಣ ಕಟ್ಟಬೇಕಾಗುತ್ತದೆಂದು ಹೇಳಿರುತ್ತಾರೆ. ಒಬ್ಬ ಗುಮಾಸ್ತ ನಿಗೂ ಕೂಡ 51,000 ರೂಪಾಯಿಗಳ ವಾರ್ಷಿಕ ಆದಾಯವಿರುತ್ತದೆ. ಅನಾವಶ್ಯಕವಾಗಿ ಅವರೂ ಕೂಡ ದುಡ್ಡು ಕಟ್ಟಬೇಕಾದ ಪರಿಸ್ಥಿತಿ ಬಂದಿದೆ ಎಂದು ಹೇಳಿರುತ್ತಾರೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಯಾವಾಗ ನೀವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ಕೊಡುತ್ತೀರಿ ನಾಲ್ಕೈದು ತಿಂಗಳ ನಂತರ ಕೊಡುವ ಸ್ಕಾಲರ್‌ಶಿಪ್‌ನ್ನು ವಿದ್ಯಾರ್ಥಿಗಳಿಗೆ ಅಡ್ವಾನ್ಸ್ ಆಗಿ ಕೊಡಬೇಕೆಂದು ಹೇಳಿದ್ದೆವು. ಆ ವಿದ್ಯಾರ್ಥಿಗಳಿಗೆ ಫೀ ಇರುವುದೇ ಇಲ್ಲ, ಕೆಲವು ಮ್ಯಾನೇಜ್‌ಮೆಂಟ್‌ನವರಿಗೆ ಫೀ ಜೊತೆಗೆ ಇಷ್ಟು ಡೊನೇಷನ್ ಕೊಡಬೇಕು, ಇಲ್ಲದಿದ್ದರೆ ಸೀಟು ಇಲ್ಲವೆಂದು ಹೇಳುತ್ತಾರೆ. ಅವಾಗ ವಿದ್ಯಾರ್ಥಿಗಳು ಹಣ ಕೊಡಲೇಬೇಕು, ಇಲ್ಲದಿದ್ದರೆ ವಾಪಸ್ಸು ಹೋಗಬೇಕಾಗುತ್ತದೆ. ಆ ಪರಿಸ್ಥಿತಿಯನ್ನು ತಪ್ಪಿಸಬೇಕಾದರೆ ಆ ಹಣವನ್ನು ಸರ್ಕಾರ ಭರಿಸಬೇಕು, ಸ್ಕಾಲರ್‌ಶಿಪ್ ಬಂದ ಹಣವನ್ನು ರೀ-ಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕು. ಕಂಟೆನ್‌ಜೆನ್ಸಿ ಫಂಡ್‌ದಿಂದ ಹಣವನ್ನು ಕೊಡಬೇಕೆಂದು ನಾವು ಒಂದು ಆದೇಶವನ್ನು ಹೊರಡಿಸಿದ್ದೆವು. ಅದನ್ನು ನಿಲ್ಲಿಸಿದ್ದಾರೆಂದು ತಿಳಿದುಬಂತು, ಅದು ನಿಜವೋ ಅಥವಾ ಸುಳ್ಳೋ ಎನ್ನುವುದು ನನಗೆ

ಗೊತ್ತಿಲ್ಲ. ವಿದ್ಯಾರ್ಥಿಗಳಿಗೆ ಅನಾನುಕೂಲವಾಗಬಾರದು ಅದನ್ನು ಮುಂದುವರಿಸಬೇಕು, ನಾವು ತಂದಿರುವ ಆ ಯೋಜನೆ ಬಹಳ ಉತ್ತಮವಾದುದೆಂದು ಹೇಳುತ್ತಾ ಹಲವಾರು ವಿಚಾರಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಚರ್ಚೆಯನ್ನು ನಾಳೆಗೆ ಮುಂದುವರಿಸೋಣ, ಈಗ ಅರ್ಧಗಂಟೆಯ ಕಾಲಾವಧಿ ಚರ್ಚೆ, ಶ್ರೀ ಸುಭಾಷ್ ಕಲ್ಲೂರ್ ಹಾಗೂ ಶ್ರೀ ಜಗದೀಶ್ ಶೆಟ್ಟರ್‌ರವರು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಣವನ್ನು ಖರ್ಚು ಮಾಡುವಾಗ ಸರ್ಕಾರ ತಾರತಮ್ಯ ತೋರಿರುವ ಬಗ್ಗೆ ದಿನಾಂಕ 18ನೇ ಜುಲೈ 2001ರಂದು ಉತ್ತರಿಸುವ ಪ್ರಶ್ನೆಗಳ 14ನೇ ಪಟ್ಟಿಯಲ್ಲಿನ ಪ್ರಶ್ನೆ ಸಂಖ್ಯೆ : 199 2039ಕ್ಕೆ ನೀಡಿರುವ ಉತ್ತರಕ್ಕೆ ಸಂಬಂಧಪಟ್ಟಂತೆ ಅರ್ಧಗಂಟೆ ಕಾಲಾವಕಾಶದಲ್ಲಿ ಚರ್ಚೆ ಮಾಡುವುದು.

7. ಅರ್ಧಗಂಟೆ ಕಲಾವಧಿ ಚರ್ಚೆ

ಉತ್ತರ ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವ ಹಣದಲ್ಲಿ ತಾರತಮ್ಯ ತೋರಿಸುತ್ತಿರುವುದು.

+ ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್) :— ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ನೋಡಲಾಗಿ ಅರ್ಧ ಗಂಟೆಯ ಕಾಲಾವಕಾಶದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಕರ್ನಾಟಕದ 7 ಜಿಲ್ಲೆಗಳ ಸಾಕ್ಷರತೆಯ ಹಾಗೂ ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸಬೇಕು ಎನ್ನುವುದಕ್ಕೋಸ್ಕರ ತಾವು ಬಹಳ ಪರಿಶ್ರಮವನ್ನು ಪಟ್ಟು, ಬೀದರ್‌ದಲ್ಲಿ ಒಂದು ಸಭೆಯನ್ನು ಮಾಡಿ, ಗುಲ್ಬರ್ಗಾದಲ್ಲಿ ಎರಡು ಸಭೆಗಳನ್ನು ಮಾಡಿ, ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ತೆಗೆದು ಪ್ರಯೋಜನವಾಗತಕ್ಕಂಥ ಕೆಲಸವನ್ನು ತಾವು ಮಾಡಿರುತ್ತೀರಿ, 7 ಜಿಲ್ಲೆಗಳ ಶಾಸಕರು, ಲೋಕಸಭಾ ಸದಸ್ಯರು ಹಾಗೂ ಜನಪ್ರತಿನಿಧಿಗಳು ತಮಗೆ ಮೊದಲನೆಯದಾಗಿ ವಂದನೆಯನ್ನು ಸಲ್ಲಿಸುತ್ತೇವೆ. ತಾವು ಕೆಲವೊಂದು ವಿಚಾರಗಳನ್ನು ಮಾಡಿದ್ದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಕೆಲವೊಂದು ಮಾತುಗಳನ್ನು ತಾವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. 7 ಜಿಲ್ಲೆಗಳ ಶೈಕ್ಷಣಿಕ ಅಭಿವೃದ್ಧಿಗೋಸ್ಕರ ತಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೀರಿ. ಕೆಲವೊಂದು ನಮಗೆ ಫಲಾಕಾರಿಯಾಗಿವೆ ಮತ್ತು ತಾರತಮ್ಯ ದೃಷ್ಟಿಯಿಂದ ಲಾಭ ಆಗತಕ್ಕಂಥದ್ದು ಕೂಡ ನಮಗೆ ಮನವರಿಕೆಯಾಗಿದೆ. ಬಜೆಟ್‌ನಲ್ಲಿ ಆ ಭಾಗದ ಜಿಲ್ಲೆಗಳಿಗೆ 50 ಪರ್ಸೆಂಟ್ ಹಣ ಕೊಡುತ್ತೇವೆಂದು ಹೇಳಿದರೆ ಅದನ್ನೂ ಕೂಡ ಸ್ವಾಗತ ಮಾಡುತ್ತೇನೆ. ಹೊಸದಾಗಿ